

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜೂನ್ 9 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 54 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ನಿಮ್ಮ ಪತ್ರಗಳು

ಮುಖ್ಯಮಂತ್ರಿಯವರೇ, ಪ್ರವಾಸೋದ್ಯಮ ಸಚಿವರೇ...

ಲಲಿತಮಹಲ್ ಪ್ಯಾಲೇಸ್ ಹೋಟೆಲ್ ನಿರ್ವಹಣೆಯನ್ನು ಅಪ್ಪಟ ವೃತ್ತಿಪರರಿಗೆ ಒಪ್ಪಿಸಿ...





ಸಿದ್ದರಾಮಯ್ಯ
ಮುಖ್ಯಮಂತ್ರಿ



ಹೆಚ್.ಕೆ.ಪಾಟೀಲ್
ಪ್ರವಾಸೋದ್ಯಮ ಸಚಿವ

ಮಾನ್ಯರೇ,

'ಸ್ಟಾರ್ ಆಫ್ ಮೈಸೂರ್'ನಲ್ಲಿ 2023ರ ಮೇ 23ರಂದು ('ಮೈಸೂರು ಮಿತ್ರ'ನಲ್ಲಿ ಮಾರನೇ ದಿನ ಮೇ 24ರಂದು) ಪ್ರಕಟವಾದ, ಭಾರತ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ನಿವೃತ್ತ ಹಿರಿಯ ಉಪಾಧ್ಯಕ್ಷರಾದ **ಎನ್‌ಕೆಎ ಬಲ್ಲಾಳ್** ಅವರ ಸಾಂಪ್ರದಾಯಿಕ ಲಲಿತಮಹಲ್ ಪ್ಯಾಲೇಸ್ ಹೋಟೆಲ್‌ನ ದುಸ್ಥಿತಿ ಮತ್ತು ರಾಜ್ಯ ಸರ್ಕಾರದ ನಿರ್ಲಕ್ಷ್ಯ ಧೋರಣೆ ಸಂಬಂಧಿತ (ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಜಯಲಕ್ಷ್ಮೀ ವಿಲಾಸ ಅರಮನೆ ಹಾದಿಯನ್ನೇ ಹಿಡಿಯುವುದೇ?– **Is Lalitha Mahal Hotel going Jayalakshmi Vilas Mansion way?**) ಲೇಖನದತ್ತ ಸರಕಾರ ಗಮನ ಹರಿಸಬೇಕಿದೆ.

ಕೆಲ ರಾಜಕಾರಣಿಗಳು ಈ ಪಾರಂಪರಿಕ ನಗರದ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸುವ ಕಾಳಜಿ–ಕಳಕಳಿಯ ಮಾತುಗಳನ್ನಾಡುತ್ತಾರೆ. ಆದರೆ ಅವರು ಹೇಳಿದಂತೆ ಮಾಡುವುದು ತೀರಾ ಕಡಿಮೆ. ಬಲ್ಲಾಳ್ ಅವರ ಸಲಹೆಯಂತೆ ಈ ಅದ್ಭುತ ಪಾರಂಪರಿಕ ಆಸ್ತಿಯನ್ನು ಹೋಟೆಲ್ ಆಗಿ (ಲಲಿತ ಮಹಲ್) ನಿರ್ವಹಿಸಲು ಹಾಗೂ ಆ ಮೂಲಕ ಈ ಭವ್ಯ ಸೌಧವನ್ನು ಪುನರುಜ್ಜೀವನಗೊಳಿಸಿ ಉಳಿಸಿಕೊಳ್ಳಲು ಒಂದು ಸದವಕಾಶವಿದು.

ಹೈದರಾಬಾದ್‌ನ ತಾಜ್ ಫಲಕ್‌ನುಮಾ, ಜೈಪುರದ ಹಲವು ಪ್ಯಾಲೇಸ್ ಹೋಟೆಲ್‌ಗಳು (ರಾಂಬಾಗ್ ಪ್ಯಾಲೇಸ್ ಹೋಟೆಲ್) ಮತ್ತು ಉದಯಪುರದಲ್ಲೂ (ತಾಜ್‌ನ ಉದಯಪುರ ಲೇಕ್ ಹೋಟೆಲ್) ಅನೇಕ ಪ್ಯಾಲೇಸ್ ಹೋಟೆಲ್‌ಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿರುವಂತೆಯೇ ಜವಾಬ್ದಾರಿಯುತ ಮತ್ತು ಪ್ರತಿಷ್ಠಿತ ಆತಿಥ್ಯ ಸಂಸ್ಥೆಗೆ ಲಲಿತಮಹಲ್ ಪ್ಯಾಲೇಸ್ ಹೋಟೆಲ್‌ನ ಕಾರ್ಯನಿರ್ವಹಣೆಯನ್ನು ವಹಿಸಬೇಕು.

ಇಂತಹ ವಿಚಾರಗಳಲ್ಲಿ ಕ್ರಿಯಾಶೀಲರಾಗಲು ನಾವು ಕನ್ನಡಿಗರೇಕೆ ಆಸಕ್ತಿ ಹೊಂದಿಲ್ಲ? ಇಂತಹ ಪಾರಂಪರಿಕ ಕಟ್ಟಡಗಳನ್ನು ನಿರ್ವಹಿಸಲು ಮತ್ತು ನಮ್ಮ ಪರಂಪರೆಯ ಹೆಮ್ಮೆ ಮೆರೆಯಲು ನಮಗೆ ಸರಕಾರದ ಪ್ರವಾಸೋದ್ಯಮ ಸಂಸ್ಥೆ ಅನಿವಾರ್ಯವೇ? ಖಂಡಿತ ಅಲ್ಲ.

ಬನಾರಸ್ ನಗರವು ತಾಜ್ ನಾಡೇಸರ್ ಮತ್ತು ಬ್ರಿಜ್ರಾಮ ಪ್ಯಾಲೇಸ್ ಹೋಟೆಲ್‌ಗಳನ್ನು ಹೊಂದಿದೆ. ತುಂಬಾ ಬೇಸರದ ಸಂಗತಿ ಅಂದರೆ, **ಮೈಸೂರಿನಲ್ಲಿ ನಾವು ಒಂದು ಪಂಚತಾರಾ ಹೋಟೆಲ್ ಕೂಡ ಹೊಂದಿಲ್ಲ.** ನಾವು ವೃತ್ತಿಪರತೆಯಿಂದ ಉತ್ತಮವಾಗಿ ನಿರ್ವಹಿಸಬೇಕಾದ ಆಸ್ತಿಯನ್ನು ನಿರ್ಲಕ್ಷ್ಯ ಮಾಡಿರುವುದು ನಾಚಿಕೆಗೇಡು. ನಮಗೆ ಅಪ್ಪಟ ಆತಿಥ್ಯ ವೃತ್ತಿಪರರು ಬೇಕೇ ಹೊರತು ಸರ್ಕಾರದ ಹಿಡಿತವಲ್ಲ, ಸಿಬ್ಬಂದಿಯಲ್ಲ.

ಮೈಸೂರಿನವರೇ ಆದ ನೂತನ ಮುಖ್ಯಮಂತ್ರಿಯವರು ಇದರ ಬಗ್ಗೆ ಗಮನ ಹರಿಸಿ, ಸರಿಪಡಿಸಲಿ ಎಂಬ ಬಲ್ಲಾಳ್ ಅವರ ಆಶಯ ಮತ್ತು ಮನವಿಗೆ ನಾನೂ ದನಿಗೂಡಿಸುತ್ತೇನೆ. ಮೈಸೂರಿನಲ್ಲಿ ಪ್ರವಾಸೋದ್ಯಮ ಉತ್ತೇಜಿಸಲು ಇನ್ನೂ ಅನೇಕ ಭವ್ಯವಾದ ಮಹಲುಗಳು ಹಾಗೂ ಉತ್ತಮ ಆಸ್ತಿಗಳನ್ನು ಬಳಸಿಕೊಳ್ಳಬಹುದಾಗಿದೆ. ಇನ್ನಾದರೂ ಅಧಿಕಾರಸ್ಥರಲ್ಲಿ ಈ ವಿಚಾರದಲ್ಲಿ ಅರಿವು ಮೂಡುವುದೇ?

–ಅರುಣ್ ಕೆ.ಆರ್.ರಾವ್,
ನಿವೃತ್ತ ಐಸಿಎಓ (ಯುಎನ್) ಹಿರಿಯ ಅಧಿಕಾರಿ, ಮೈಸೂರು.

ಟಿಪ್ಪಣಿ: ಈ ನಿಟ್ಟಿನಲ್ಲಿ ಇರುವ ಒಂದೇ ಒಂದು ಭರವಸೆ ಎಂದರೆ ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ. ಈಗ ರಾಜ್ಯ ಸರ್ಕಾರದ ಅಡಿ ಇರುವ ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್(Jungle Lodges & Resorts)ನಿಂದ ನಿರ್ವಹಣೆಗೊಳಪಟ್ಟಿರುವ ಈ ಹೋಟೆಲ್ ಹಾಗೂ ಅದರ ಕಟ್ಟಡ ಹಾಳಾಗಿದ್ದು, ರಾಜಕಾರಣಿಗಳಿಗೆ ಆರಾಮದಾಯಕ ವಲಯವಾಗಿ ಪರಿಣಮಿಸಿದೆ. ರಾಜ್ಯ ಸರ್ಕಾರವು ಜಾಗತಿಕ ಟೆಂಡರ್ ಕರೆಯಬೇಕು ಅಥವಾ ತಾಜ್, ಓಬೆರಾಯ್ ಇಲ್ಲವೇ ಐಟಿಸಿಯಂತಹ ಹೆಸರಾಂತ ಭಾರತೀಯ ಆತಿಥ್ಯ ವಲಯದ ಪ್ರತಿಷ್ಠಿತ ಕಂಪನಿಗೆ ಈ ಭವ್ಯ ಹೊಟೇಲ್ ಅನ್ನು ಹಸ್ತಾಂತರಿಸಬೇಕು.

ನಮ್ಮ ಸಂಸ್ಥಾಪಕ ಸಂಪಾದಕರಾದ **ಕೆ.ಬಿ.ಗಣಪತಿ**ಯವರು, ಲಲಿತಮಹಲ್ ಹೋಟೆಲ್ಲಿನ ವಿಚಾರದಲ್ಲಿ ರಾಜ್ಯ ಸರ್ಕಾರದ ಬೇಜವಾಬ್ದಾರಿತನ ಹಾಗೂ ನಿರ್ಲಕ್ಷ್ಯತೆ ಬಗ್ಗೆ ಮೇ 27ರಂದು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ತಮ್ಮ 'ಅಬ್ರಕಡಬ್ರ' ಅಂಕಣದ **"Wake up Mysuru: Ask Siddaramaiah to leave behind a legacy for Mysuru"** ಲೇಖನದಲ್ಲಿ ಸವಿವರವಾಗಿ ಬರೆದಿದ್ದರು. ಸಿದ್ದರಾಮಯ್ಯನವರ ಗಮನಕ್ಕೆ ಈ ವಿಚಾರವನ್ನು ಮೈಸೂರಿನ ಬಗ್ಗೆ ಕಳಕಳಿ ಇರುವಂತಹ ಅವರ ಅನುಯಾಯಿಗಳು ತರುತ್ತಾರೆ ಎಂದು ನಾವು ಆಶಿಸೋಣ. **–ಸಂಪಾದಕ**

ಐಟಿ, ಜಿಎಸ್‌ಟಿ ಪಾವತಿಸುವವರು, ಸರ್ಕಾರಿ ನೌಕರರಿಗೆ

ಒಲಿಯಲ್ಲ 'ಗೃಹಲಕ್ಷ್ಮಿ'

● ಹಾಗೆಯೇ ಸ್ವಿಚ್ ಹಾಕಿದ ತಕ್ಷಣ ಬೆಳಗಲ್ಲ 'ಗೃಹ ಜ್ಯೋತಿ' ● ಗ್ಯಾರಂಟಿ ಯೋಜನೆಗಳ ಜಾರಿಗೆ ಕಠಿಣ ಮಾನದಂಡ ● 'ಗೃಹ ಜ್ಯೋತಿ' ಅಡಿ ಉಚಿತ ವಿದ್ಯುತ್ ಯೋಜನೆ ಆ.1ರಿಂದ; ಕುಟುಂಬ ಯಜಮಾನಿಗೆ 2000 ರೂ. 'ಗೃಹಲಕ್ಷ್ಮಿ' ಆ.17–18ರಂದು ಜಾರಿ ● ಉನ್ನತ ಮಟ್ಟದ ಸಭೆ ನಂತರ ಖಚಿತಪಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ



ಬೆಂಗಳೂರು, ಜೂ.8(ಕೆಎಂಶಿ)–ಆದಾಯ ತೆರಿಗೆ ಪಾವತಿದಾರರು, ಸರ್ಕಾರಿ ನೌಕರರು, ಅವರ ಮಕ್ಕಳು, ಆದಾಯ ತೆರಿಗೆ ಪಾವತಿಸುತ್ತಿರುವ ಕುಟುಂಬದ ಮನೆಯೊಡತಿಗೆ 'ಗೃಹಲಕ್ಷ್ಮಿ' ಒಲಿಯಲ್ಲ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಮ್ಮ ಇಲಾಖೆಯ ಗ್ಯಾರಂಟಿ ಬಗ್ಗೆ ಹೊಸ ನಿಯಮಗಳನ್ನು ಪ್ರಕಟಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹಲಕ್ಷ್ಮಿ, ಗೃಹ ಜ್ಯೋತಿ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಗುರುವಾರ ಉನ್ನತ ಮಟ್ಟದ ಸಭೆ ನಡೆಸಿದ ನಂತರ ಸುದ್ದಿಗಾರರಿಗೆ ಈ ಮಾಹಿತಿ ನೀಡಿದರು. ಶೇ.85ರಷ್ಟು ಕುಟುಂಬಗಳಿಗೆ ಗೃಹಲಕ್ಷ್ಮಿ ಯೋಜನೆ ಲಾಭ ದೊರೆಯಲಿದೆ. ಸದ್ಯಕ್ಕೆ 10–12ಲಕ್ಷ ಮಂದಿ ಆದಾಯ ತೆರಿಗೆ ಇಲ್ಲವೇ, ಜಿಎಸ್‌ಟಿ ಪಾವತಿದಾರರು ಇದ್ದಾರೆ. ಇವರೆಲ್ಲಾ ಎಪಿಎಲ್ ಕುಟುಂಬದವರು. ಇವರಿಗೆ ಮಾಸಿಕ 2000 ರೂ. ದೊರೆಯುವುದಿಲ್ಲ. ಮೊದಲು ಪ್ರಕಟಿಸಿದ ಮಾರ್ಗಸೂಚಿಯಲ್ಲಿ ಕೆಲವು ಬದಲಾವಣೆ ಮಾಡುವ ನಿರ್ಧಾರವನ್ನು ಸಭೆ ತೆಗೆದುಕೊಂಡಿದೆ. ಮಕ್ಕಳು ತೆರಿಗೆ ಪಾವತಿದಾರರಾಗಿದ್ದರೆ, ಅಂತಹ ಮನೆಯೊಡತಿಗೂ ಈ ಸೌಲಭ್ಯ ದೊರೆಯುವುದಿಲ್ಲ. ಈ ಕುಟುಂಬಗಳಿಗೂ ಮುಂದಿನ ದಿನಗಳಲ್ಲಿ ಯೋಜನೆ ಜಾರಿಗೊಳಿಸುವ ಬಗ್ಗೆ ಪರಿಶೀಲನೆ ಮಾಡೋಣ ಎಂದು ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ಸಭೆಯ ಬಳಿಕ ಎರಡೂ ಗ್ಯಾರಂಟಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸುದ್ದಿಗಾರರೊಂದಿಗೆ ಮಾಹಿತಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಗ್ಯಾರಂಟಿ ಯೋಜನೆಗಳಡಿ ಗೃಹಜ್ಯೋತಿ ಯೋಜನೆ ಆಗಸ್ಟ್ 1 ರಂದು ಹಾಗೂ ಗೃಹಲಕ್ಷ್ಮಿ ಯೋಜನೆಗೆ ▶ 8ನೇ ಪುಟಕ್ಕೆ



ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಸಿದ್ಧಾರ್ಥನಗರದ

ಹೊಸ ಕಟ್ಟಡಕ್ಕೆ ಸ್ಥಳಾಂತರ



ಸಿಎಂ ಸಿದ್ದರಾಮಯ್ಯ ಸೂಚನೆ ಮೇರೆಗೆ ತತ್‌ಕ್ಷಣದಿಂದಲೇ ಜಿಲ್ಲಾ ಮಟ್ಟದ ಕಚೇರಿ ಸಂಕೀರ್ಣದಲ್ಲಿ ಕಾರ್ಯಾರಂಭ

ಮೈಸೂರು, ಜೂ.8(ಆರ್‌ಕೆ)– ಮೈಸೂರಿನ ಸಿದ್ಧಾರ್ಥನಗರದಲ್ಲಿ, ಬನ್ನೂರು ರಸ್ತೆಯಲ್ಲಿ ನಿರ್ಮಿಸಿರುವ ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣದ ಹೊಸ ಕಟ್ಟಡಕ್ಕೆ ಮೈಸೂರು ಜಿಲ್ಲಾಧಿಕಾರಿ ಕಚೇರಿ ಸ್ಥಳಾಂತರಗೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿರ್ದೇಶನದ ಮೇರೆಗೆ ಇಂದು ಮೈಸೂರು ಜಿಲ್ಲಾಧಿಕಾರಿ ಕಚೇರಿ ಹಾಗೂ ಅದರ ಎಲ್ಲಾ ವಿಭಾಗಗಳ ಕಾರ್ಯ ಚಟುವಟಿಕೆ ಇಂದಿನಿಂದ ಇಲ್ಲಿಂಯೇ ಆರಂಭವಾಗಿದೆ. ಕಟ್ಟಡದ ಮೊದಲ ಮಹಡಿಯ, ಮೆಟ್ಟಿಲುಗಳ ಪಕ್ಕದ ಕೊಠಡಿಯಲ್ಲಿ (ಈ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರ ಕಚೇರಿ ಇದ್ದ ಕೊಠಡಿ) ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಕಚೇರಿ ಕಾರ್ಯಾರಂಭ ಮಾಡಿದ್ದು, ಅದಕ್ಕೆ ಹೊಂದಿಕೊಂಡಂತಿರುವ ▶ 6ನೇ ಪುಟಕ್ಕೆ

ಮತ್ತೆ ಮುಖ್ಯಮಂತ್ರಿಯಾದ ಬಳಿಕ ನಾಳೆ ತವರು ಕ್ಷೇತ್ರ ವರುಣಗೆ ಸಿದ್ದರಾಮಯ್ಯರ ಮೊದಲ ಭೇಟಿ

● ಸುತ್ತೂರು ಹೆಲಿಪ್ಯಾಡ್‌ಗೆ ಆಗಮನ ● ಬಿಳಿಗೆರೆಯಲ್ಲಿ ವರುಣ ಕ್ಷೇತ್ರದ ಮತದಾರರಿಗೆ ಕೃತಜ್ಞತಾ ಸಮಾವೇಶದಲ್ಲಿ ಭಾಗಿ ● ಟ್ರಾಫಿಕ್ ಜಾಮ್ ಕಿರಿಕಿರಿ ತಪ್ಪಿಸಲು ನೇರವಾಗಿ ಕಾರ್ಯಕ್ರಮದ ಸ್ಥಳಕ್ಕೆ



ಮೈಸೂರು, ಜೂ.8(ಎಂಟಿವೈ)– ಮತ್ತೆ ರಾಜ್ಯದ ಮುಖ್ಯಮಂತ್ರಿಯಾದ ಬಳಿಕ ಸಿದ್ದರಾಮಯ್ಯನವರು ಮೊದಲ ಬಾರಿಗೆ, ಜೂ.10ರಂದು ತವರು ಜಿಲ್ಲೆ ಮೈಸೂರಿಗೆ ಆಗಮಿಸುತ್ತಿದ್ದಾರೆ. ವರುಣ ಕ್ಷೇತ್ರದಲ್ಲಿ ಏರ್ಪಡಿಸಿರುವ ಕೃತಜ್ಞತಾ ಸಭೆಯಲ್ಲಿ ಪಾಲ್ಗೊಂಡು, ಕ್ಷೇತ್ರದ ಜನರಿಗೆ ಧನ್ಯವಾದ ಅರ್ಪಿಸಲಿದ್ದಾರೆ. ತಮ್ಮ ರಾಜಕೀಯ ಜೀವನದ ಕೊನೆ ಚುನಾವಣೆಯನ್ನು ಸ್ವಗ್ರಾಮ ಸಿದ್ದರಾಮನಹುಂಡಿ ಒಳಗೊಂಡ ವರುಣ ಕ್ಷೇತ್ರದಿಂದಲೇ ಸ್ಪರ್ಧಿಸಿದ್ದ ಸಿದ್ದರಾಮಯ್ಯನವರು ಪ್ರತಿಸ್ಪರ್ಧಿ ಬಿಜೆಪಿ ಅಭ್ಯರ್ಥಿ, ಮಾಜಿ ಸಚಿವ ವಿ.ಸೋಮಣ್ಣ ವಿರುದ್ಧ 46,006 ಮತಗಳ ಭಾರೀ ಅಂತರದಿಂದ ಗೆಲುವು ಸಾಧಿಸಿದ್ದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಘಟಾನುಘಟಿ ನಾಯಕರು ಪ್ರಚಾರ ನಡೆಸಿದ್ದರಿಂದ ವರುಣ ವಿಧಾನಸಭಾ ಕ್ಷೇತ್ರ ತೀವ್ರ ಕುತೂಹಲ ಮೂಡಿಸುವುದರೊಂದಿಗೆ ▶ 8ನೇ ಪುಟಕ್ಕೆ

ಟ್ರಾಫಿಕ್ ಜಾಮ್‌ನಿಂದ ಜನರಿಗೆ ಕಿರಿಕಿರಿ ತಪ್ಪಿಸಲು ಮೈಸೂರಿಗೆ ಬರಲ್ಲ

ಮತ್ತೆ ಮುಖ್ಯಮಂತ್ರಿಯಾದ ಬಳಿಕ ಇದೇ ಮೊದಲ ಬಾರಿಗೆ ತವರು ಜಿಲ್ಲೆಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ವತಿಯಿಂದ ಅದ್ಧೂರಿಯಾಗಿ ಸ್ವಾಗತ ಕೋರಬಹುದು. ಇದರಿಂದ ಟ್ರಾಫಿಕ್ ಜಾಮ್ ಉಂಟಾಗಿ ಜನರಿಗೆ ತೊಂದರೆಯಾಗಬಹುದು ಎಂಬ ಕಾರಣದಿಂದ ಸಿಎಂ ಸಿದ್ದರಾಮಯ್ಯ ಹೆಲಿಕಾಪ್ಟರ್ ಮೂಲಕ ನೇರವಾಗಿ ಸುತ್ತೂರಿಗೆ ತೆರಳಲು ನಿರ್ಧರಿಸಿದ್ದಾರೆ ಎಂದು ಅವರ ಆಪ್ತ ವಲಯ ತಿಳಿಸಿದೆ.





ನಾಗರಹೊಳೆ ಅಭಯಾರಣ್ಯ ವ್ಯಾಪ್ತಿಯ ತಾರಕ ಜಲಾಶಯದ ಹಿನ್ನೀರು ಪ್ರದೇಶದಲ್ಲಿ ಸಫಾರಿ ಹೋದವರಿಗೆ ಬಿಳಿ ಜಿಂಕೆ ಕಣ್ಣಿಗೆ ಬಿದ್ದಿದೆ. (ವರದಿ ಪುಟ: 9)

ಮೈಸೂರು ಮಿತ್ರ

ಶುಕ್ರವಾರ 9 ಜೂನ್ 2023

ಎಲ್ಲೆಡೆ ಕನ್ನಡ ಅನುರಣಿಸಬೇಕು

● ಮಿಡ್ನಾಪುರ ವೆಸ್ಟ್‌ನ ಅಪರ ಜಿಲ್ಲಾಧಿಕಾರಿ, ವಿಶೇಷಚೇತನ ಸಾಧಕರೂ ಆದ ಕನ್ನಡಿಗ ಕೆಂಪಹೊನ್ನಯ್ಯ ಆಶಯ

● ಮುಕ್ತ ವಿವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಲ್ಲಿ ಬ್ಯಾಂಕ್ ಹುದ್ದೆ ಪರೀಕ್ಷಾರ್ಥಿಗಳಿಗೆ ತರಬೇತಿ ಶಿಬಿರಕ್ಕೆ ಚಾಲನ



ಮೈಸೂರು, ಜೂ.8(ಎಸ್‌ಬಿಡಿ)– ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡಿಗರು ಗಣನೀಯ ಸಾಧನೆ ಮಾಡಿದಂತೆಲ್ಲಾ ನಮ್ಮ ನೆಲದ ಸರ್ಕಾರಿ ಕಚೇರಿಗಳಲ್ಲಿ ಕನ್ನಡದ ಕಂಪು ಅನುರಣಿಸುತ್ತದೆ ಎಂದು ಪಶ್ಚಿಮ ಬಂಗಾಳ ಕೇಡರ್‌ನ ಐಎಎಸ್ ಅಧಿಕಾರಿ, ಕನ್ನಡಿಗ ಕೆಂಪಹೊನ್ನಯ್ಯ ಅಭಿಪ್ರಾಯಿಸಿದರು. ಮಿಡ್ನಾಪುರ ವೆಸ್ಟ್‌ನ ಅಪರ ಜಿಲ್ಲಾಧಿಕಾರಿಯಾಗಿರುವ ಇವರು, ವಿಶೇಷಚೇತನ ಸಾಧಕರಾಗಿದ್ದು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಲ್ಲಿ ಬ್ಯಾಂಕಿಂಗ್ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ ಆಯೋಜಿಸಿರುವ 45 ದಿನಗಳ ತರಬೇತಿ ಶಿಬಿರವನ್ನು ಗುರುವಾರ ಉದ್ಘಾಟಿಸಿ, ಮಾತನಾಡಿದರು.


ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕನ್ನಡದ ಅಭ್ಯರ್ಥಿಗಳ ಭಾಗವಹಿಸುವಿಕೆ ಹೆಚ್ಚಬೇಕು. ಬ್ಯಾಂಕಿಂಗ್, ಸೇನೆ, ಯುಪಿಎಸ್ಸಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಸಮರ್ಥವಾಗಿ ಎದುರಿಸದೆ ಬೇರೆ ರಾಜ್ಯದವರಿಗೆ ಅವಕಾಶಗಳನ್ನು ಬಿಟ್ಟು ಕೊಟ್ಟಿದ್ದೇವೆ. ಪರಿಣಾಮ ಸರ್ಕಾರಿ ಕಚೇರಿಗಳು, ಬ್ಯಾಂಕ್‌ಗಳಲ್ಲಿ ಕನ್ನಡೇತರ ಅಧಿಕಾರಿಗಳೇ ಹೆಚ್ಚಾಗಿದ್ದಾರೆ. ಈ ಪರಿಸ್ಥಿತಿ ಬದಲಾಗಬೇಕು. ಆಸೆಯ ಜೊತೆಗೆ ಮಹಾತ್ವಾಕಾಂಕ್ಷೆ ನಮ್ಮಲ್ಲಿರಬೇಕು. ದೊಡ್ಡ ಕನಸುಗಳು ಉನ್ನತ ಸ್ಥಾನದ ಹಾದಿ ತಲುಪಲು ಸಹಾಯಕವಾಗುತ್ತದೆ. ಸವಾಲುಗಳನ್ನು ಮೆಟ್ಟಿ ನಿಂತು ಕನ್ನಡಿಗರು ಗುರಿ ಸಾಧಿಸುವಂತಾಗಬೇಕು ಎಂದು ಆಶಿಸಿದರು.

ಬಾಲ್ಯದಲ್ಲೇ ದೃಷ್ಟಿ ಕಳೆದುಕೊಂಡ ನಾನು ಅಂಧತ್ವದ ನಡುವೆಯೂ 2016ರ ಯುಪಿಎಸ್‌ಸಿ ಪರೀಕ್ಷೆಯಲ್ಲಿ 340ನೇ ರ‍್ಯಾಂಕ್‌ನಲ್ಲಿ ತೇರ್ಗಡೆಯಾಗಲು ಸಾಧ್ಯವಾಗಿದ್ದು ಶಿಕ್ಷಣ ಜ್ಯೋತಿಯಿಂದ. ಎಲ್ಲರೂ ಶಿಕ್ಷಣದ ಮೌಲ್ಯವನ್ನು ಅರಿತು ಸಾಗಬೇಕು. ಕೆಲ ವರ್ಷ ಸತತ ಪರಿಶ್ರಮದಿಂದ ಅಧ್ಯಯನ ನಡೆಸಿ ಪರೀಕ್ಷೆಗಳಲ್ಲಿ ಯಶಸ್ವಿಯಾದರೆ ನೀವು ಹಾಗೂ ನಿಮ್ಮ ಕುಟುಂಬ ಬದುಕಿನುದ್ದಕ್ಕೂ ನೆಮ್ಮದಿಯಿಂದಿರಬಹುದು ಎಂದು ಹೇಳಿದರು.

ಸಾಧನೆಗಳನ್ನು ಸಾಕಾರಗೊಳಿಸಲು ಸೂಕ್ತ ಮಾರ್ಗದರ್ಶನಕ್ಕಾಗಿ ತರಬೇತಿ ಅತ್ಯಗತ್ಯ. ಇಲ್ಲಿ ನಮ್ಮ ಧನಾತ್ಮಕ ಹಾಗೂ ಋಣಾತ್ಮಕ ಅಂಶಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳ ಸ್ವರೂಪವೂ ಪ್ರಸ್ತುತ ಬದಲಾಗಿದೆ. ಹಿಂದೆ ಸಾಮಾನ್ಯ ಜ್ಞಾನ ಹಾಗೂ ಇತಿಹಾಸಕ್ಕೆ ಸಂಬಂಧಿಸಿದ ಪ್ರಶ್ನೆಗಳು ಹೆಚ್ಚಿರುತ್ತಿದ್ದವು. ಆದರೆ ಪ್ರಸ್ತುತ ಪ್ರಚಲಿತ ವಿದ್ಯಮಾನ ಮತ್ತು ನಮ್ಮ ನಿರ್ಣಯ ಶಕ್ತಿಗಳನ್ನು ನಿರ್ಧರಿಸುವಂತಹ ಪ್ರಶ್ನೆಗಳು ಹೆಚ್ಚಾಗಿರುತ್ತವೆ. ಈ ಬಗ್ಗೆ ಗಮನವಿಟ್ಟು ತಯಾರಿ ನಡೆಸಬೇಕೆಂದು ಸಲಹೆ ನೀಡಿದರು.

ಕರಾಮುವಿ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ಮಾತನಾಡಿ, ಮುಕ್ತ ವಿವಿ ಗ್ರಾಮೀಣ ಯುವಕ–ಯುವತಿಯರನ್ನು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಜ್ಜುಗೊಳಿಸುವ ಉದ್ದೇಶದಿಂದ ಇಲ್ಲಿ ಸ್ಪರ್ಧಾತ್ಮಕ ತರಬೇತಿ ಕೇಂದ್ರ ತೆರೆಯಲಾಗಿದೆ. ಇಲ್ಲಿ ತರಬೇತಿ ಪಡೆದವರು ಉನ್ನತ ಹುದ್ದೆಗಳಲ್ಲಿದ್ದಾರೆ. ವಿವಿಗೆ ಈ ಬಾರಿ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಸೇರ್ಪಡೆ ಮಾಡಿಕೊಳ್ಳಬೇಕೆಂಬ ಗುರಿಯೊಂದಿಗೆ ಪ್ರಯತ್ನ ನಡೆದಿದ್ದು, ಈ ನಿಟ್ಟಿನಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಪ್ರವಾಸ ಕೈಗೊಂಡು ಪ್ರಚಾರ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಆನ್‌ಲೈನ್ ಕೋರ್ಸ್‌ಗಳನ್ನು ಆರಂಭಿಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಕ್ತ ವಿವಿ ಕುಲಸಚಿವ ಪ್ರೊ.ಕೆಎಲ್‌ಎನ್.ಮೂರ್ತಿ, ಶೈಕ್ಷಣಿಕ ಡೀನ್ ಪ್ರೊ.ಎನ್.ಲಕ್ಷ್ಮೀ, ಹಣಕಾಸು ಅಧಿಕಾರಿ ಡಾ.ಎ.ಖಾದರ್ ಪಾಷಾ, ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಅಧ್ಯಯನ ಕೇಂದ್ರದ ಡೀನ್ ಪ್ರೊ.ರಾಮನಾಥಂ ನಾಯ್ಡು, ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣ ಗೌಡ, ತರಬೇತಿ ಕೇಂದ್ರದ ಸಿದ್ದೇಶ್ ಹೊನ್ನೂರ್, ಗಣೇಶ್ ಕೆ.ಜಿ.ಕೊಪ್ಪಲು ಮತ್ತಿತರರಿದ್ದರು.



ಗುರುವಾರ ಹುಟ್ಟುಹಬ್ಬ ಆಚರಿಸಿಕೊಂಡ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್ ಅವರನ್ನು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ದಲಿತ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ವೆಂಕಟೇಶ್, ಓಬಿಸಿ ಘಟಕದ ದೀಪಕ್, ಗಣಚಾರಿ, ಸತೀಶ್, ರವಿ, ಸಿದ್ದಪ್ಪಾಜಿ, ಮಹೇಶ್, ಗೂಳೂರು ಕೃಷ್ಣ ಅಭಿನಂದಿಸಿ, ಶುಭ ಕೋರಿದರು.

ಚೆಸ್ಕಾಂನಿಂದ ಕಾನೂನುಬಾಹಿರವಾಗಿ ಯೂನಿಟ್ ವಿದ್ಯುತ್‌ಗೆ 2.42 ರೂ. ಏರಿಕೆ

ಮೈಸೂರು ಕೈಗಾರಿಕೆಗಳ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್‌ಕುಮಾರ್‌ಜೈನ್ ಆರೋಪ



ಮೈಸೂರು, ಜೂ.8–ತನಗೆ ಯಾವುದೇ ಅಧಿಕಾರವಿಲ್ಲದಿದ್ದರೂ ಚೆಸ್ಕಾಂ ಜೂ.1ರಿಂದ 30ರವರೆಗಿನ ಎಲ್ಲಾ ವರ್ಗದ ವಿದ್ಯುತ್ ಬಿಲ್‌ಗಳಲ್ಲಿ ಪ್ರತೀ ಯೂನಿಟ್ ವಿದ್ಯುತ್‌ಗೆ 2.42 ರೂ. ಏರಿಕೆ ಮಾಡಿದೆ ಎಂದು ಮೈಸೂರು ಕೈಗಾರಿಕೆಗಳ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್ ಆರೋಪಿಸಿದ್ದಾರೆ.

ಕೆಇಆರ್‌ಸಿ ಮಾತ್ರ ವಿದ್ಯುತ್ ದರ, ಇಂಧನ ವ್ಯತ್ಯಾಸದ ಶುಲ್ಕ ನಿರ್ಧರಿಸುವ ಅಧಿಕಾರವಿದ್ದು ಚೆಸ್ಕಾಂಗೆ ಇರುವುದಿಲ್ಲ ಎಂದಿರುವ ಅವರು, ಕೂಡಲೇ ಚೆಸ್ಕಾಂ ಈ ಇಂಧನ ಹೊಂದಾಣಿಕೆ ವ್ಯತ್ಯಾಸದ ಶುಲ್ಕವನ್ನು ಹಿಂಪಡೆಯದಿದ್ದಲ್ಲಿ ಮೈಸೂರು ಕೈಗಾರಿಕೆಗಳ ಸಂಘ ಹಾಗೂ ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ಉದ್ಯಮಗಳ ಪರಿಷತ್ ಕೆಇಆರ್‌ಸಿಗೆ ತಕರಾರು ಅರ್ಜಿ ಸಲ್ಲಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ವಿದ್ಯುತ್ ಹೊಂದಾಣಿಕೆ ಶುಲ್ಕ (FAC ವನ್ನು ಪ್ರತೀ ತಿಂಗಳು ವಸೂಲು ಮಾಡಿದ್ದರೂ ಜನವರಿಯಿಂದ ಮೇ 2023ರವರೆಗಿನ ಇಂಧನ ವಸೂಲಿ ವ್ಯತ್ಯಾಸದ ಶುಲ್ಕವನ್ನು ಮತ್ತೊಮ್ಮೆ ಕ್ರೋಢೀಕರಿಸಿ ಪ್ರತೀ ಯೂನಿಟ್‌ಗೆ 2.42 ರೂ.ಗಳನ್ನು ಜೂನ್ ತಿಂಗಳಲ್ಲಿ ವಸೂಲು ಮಾಡುವ ಸುತ್ತೋಲೆಯನ್ನು ಚೆಸ್ಕಾಂ ಮೇ 31ರಂದು ಹೊರಡಿಸಿರುವುದು ಕಾನೂನು ನಿಯಮಬಾಹಿರ. ಈ ದರ ಏರಿಕೆ ಪ್ರಕಟಣೆ ಚೆಸ್ಕಾಂ ಜಾಲತಾಣದಲ್ಲಿ, ಪತ್ರಿಕಾ ಪ್ರಕಟಣೆ ಮೂಲಕ ಪ್ರಕಟಿಸಿಲ್ಲ. ಫೆ.23ರ ಕೆಇಆರ್‌ಸಿ ಆದೇಶವನ್ನು ತನ್ನದೇ ಕಾರಣದಿಂದ ವಸೂಲಿ ಮಾಡಿಲ್ಲವೆಂದು ಚೆಸ್ಕಾಂ ಒಪ್ಪಿದೆ.



ಕೃಷ್ಣರಾಜ ಕ್ಷೇತ್ರದ ನೂತನ ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಚಾಮರಾಜ ಕ್ಷೇತ್ರದ ಬಿಜೆಪಿ ಉಪಾಧ್ಯಕ್ಷ ಕುಮಾರ್ ಗೌಡ, ಮುಖಂಡ ಪ್ರಭಾಕರ್ ಹೂಗುಚ್ಛ ನೀಡಿ, ಆತ್ಮೀಯವಾಗಿ ಅಭಿನಂದಿಸಿದರು.

ಉದಯಗಿರಿಯಿಂದ ಯುವತಿ ನಾಪತ್ತೆ



ಮೈಸೂರು, ಜೂ. 8– ಯುವತಿಯೋರ್ವಳು ಕಾಣೆಯಾಗಿರುವ ಬಗ್ಗೆ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಉದಯಗಿರಿ ನಿವಾಸಿ ಬಿ.ಉಮೇಶ್‌ರಾವ್ ಅವರ ಪುತ್ರಿ ಯು.ಪವಿತ್ರಬಾಯಿ (19) ಕಾಣೆಯಾದವರು. ಕಾಲೇಜಿಗೆ ಸೇರಿಕೊಳ್ಳಲು ವಿಚಾರಿಸಿಕೊಂಡು ಬರುತ್ತೇನೆಂದು ಹೇಳಿ ಹೋದವರು ಇದುವರೆಗೂ ವಾಪಸ್ ಬಂದಿಲ್ಲ ಎಂದು ಆಕೆ ತಂದೆ ದೂರು ದಾಖಲಿಸಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಉದಯಗಿರಿ ಪೊಲೀಸ್ ಠಾಣೆಗೆ ಸಂಪರ್ಕಿಸಲು ಕೋರಲಾಗಿದೆ.

ಮೈಸೂರು–ಕುಶಾಲನಗರ ಚತುಷ್ಪಥ ಹೆದ್ದಾರಿ ಕಾಮಗಾರಿ ಶೀಘ್ರ ಆರಂಭ

ಅಧಿಕಾರಿಗಳೊಂದಿಗೆ ಸಂಸದ ಪ್ರತಾಪ್ ಸಿಂಹ ಚರ್ಚೆ

ಮೈಸೂರು, ಜೂ.8(ಎಸ್‌ಬಿಡಿ)– ಮೈಸೂರು–ಕುಶಾಲನಗರ ಚತುಷ್ಪಥ(Four-Lane) ಹೆದ್ದಾರಿ ಕಾಮಗಾರಿಯನ್ನು ಶೀಘ್ರ ಆರಂಭಿಸುವ ಸಂಬಂಧ ಸಂಸದ ಪ್ರತಾಪ್ ಸಿಂಹ, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಕಂಪನಿಗಳ ಪ್ರತಿನಿಧಿಗಳೊಂದಿಗೆ ಬೆಂಗಳೂರಿನಲ್ಲಿ ಗುರುವಾರ ಸಭೆ ನಡೆಸಿ, ಚರ್ಚಿಸಿದರು.

ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರಾದೇಶಿಕ ಕಚೇರಿಯಲ್ಲಿ ಮುಖ್ಯ ಇಂಜಿನಿಯರ್ ವಿವೇಕ್ ಜೆಸ್ವಾಲ್ ಹಾಗೂ ಹೆದ್ದಾರಿ ಕಾಮಗಾರಿ ನಡೆಸುವ ಕಂಪನಿಗಳ ಮುಖ್ಯಸ್ಥರೊಂದಿಗೆ ಸಭೆ ನಡೆಸಿ, ಮೈಸೂರು–ಕುಶಾಲನಗರ ಚತುಷ್ಪಥ ಹೆದ್ದಾರಿ ಕಾಮಗಾರಿಯನ್ನು ಶೀಘ್ರ ಆರಂಭಿಸಿ, ತ್ವರಿತಗತಿಯಲ್ಲಿ ಪೂರ್ಣಗೊಳಿಸುವ ಬಗ್ಗೆ ಸಮಾಲೋಚನೆ ನಡೆಸಿದರು.

ಮೈಸೂರು–ಕುಶಾಲನಗರ ಚತುಷ್ಪಥ ಹೆದ್ದಾರಿ ಯೋಜನೆಗೆ ಈಗಾಗಲೇ ಪ್ರಧಾನಿ ನರೇಂದ್ರ ಮೋದಿ ಅವರು ವಿಧ್ಯುಕ್ತವಾಗಿ ಚಾಲನೆ ನೀಡಿದ್ದು, 93 ಕಿ.ಮೀ. ಕಾಮಗಾರಿಯನ್ನು 4,130 ಕೋಟಿ ರೂ. ಅಂದಾಜು ಮೊತ್ತದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಒಂದೂವರೆ ತಿಂಗಳೊಳಗೆ ಅಗತ್ಯ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ, ಹೆದ್ದಾರಿ ಪ್ರಾಧಿಕಾರಕ್ಕೆ ಹಸ್ತಾಂತರಿಸುವ ಸಾಧ್ಯತೆ ಇದೆ. ನಂತರ ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯಿಂದ ಪಿರಿಯಾಪಟ್ಟಣದವರೆಗೆ ಹಾಗೂ ಪಿರಿಯಾಪಟ್ಟಣದಿಂದ ಗುಡ್ಡೆಹೊಸೂರುವರೆಗೆ ಎರಡು ಪ್ಯಾಕೇಜ್‌ಗಳಲ್ಲಿ ಕಾಮಗಾರಿ ಕೈಗೊಳ್ಳಲು ಉದ್ದೇಶಿಸಲಾಗಿದೆ. ಈ ಹೆದ್ದಾರಿಯು ಮೈಸೂರು ಮತ್ತು ಬೆಂಗಳೂರು ನಡುವಿನ ಎಕ್ಸ್‌ಪ್ರೆಸ್‌ವೇಗೆ ಸೇರುತ್ತದೆ.



ಮೈಸೂರು–ಕುಶಾಲನಗರ ಚತುಷ್ಪಥ ಹೆದ್ದಾರಿ ಕಾಮಗಾರಿ ಸಂಬಂಧ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಹಾಗೂ ಗುತ್ತಿಗೆ ಕಂಪನಿ ಮುಖ್ಯಸ್ಥರೊಂದಿಗೆ ಸಂಸದ ಪ್ರತಾಪ್ ಸಿಂಹ, ಬೆಂಗಳೂರಿನಲ್ಲಿ ಗುರುವಾರ ಸಭೆ ನಡೆಸಿದರು.

ಚರಂಡಿ ನಿರ್ಮಾಣಕ್ಕೆ ಒತ್ತಾಯ: ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಸರ್ವೀಸ್ ರಸ್ತೆಯ ಹಲವೆಡೆ ಮಳೆ ನೀರು ನಿಲ್ಲುತ್ತಿರುವ ಹಿನ್ನೆಲೆಯಲ್ಲಿ ದಿಲೀಪ್ ಬಿಲ್ಡ್‌ಕಾನ್ ಕಂಪನಿಯ ಅಧಿಕಾರಿಗಳ ಭೇಟಿ ಮಾಡಿದ ಸಂಸದ ಪ್ರತಾಪ್ ಸಿಂಹ, ತ್ವರಿತವಾಗಿ ಚರಂಡಿ ನಿರ್ಮಾಣ ಮಾಡಿ ಎಲ್ಲಿಯೂ ನೀರು ನಿಲ್ಲದಂತೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು. ಸರ್ವೀಸ್ ರಸ್ತೆಯ ಚರಂಡಿ ಕಾಮಗಾರಿ ಪೂರ್ಣಗೊಳ್ಳದ ಪರಿಣಾಮ ಮಳೆ ನೀರು ಇಳಿಜಾರಿನಲ್ಲಿರುವ ಕೆಳಸೇತುವೆಗಳಲ್ಲಿ ನಿಂತಿತ್ತು. ಇತ್ತೀಚೆಗೆ ಇಂಡುವಾಳು ಗ್ರಾಮದ ಬಳಿಯ ಕೆಳಸೇತುವೆಯಲ್ಲಿ ನೀರು ನಿಂತಿದ್ದರಿಂದ ಜಮೀನಿಗೆ ಹೋಗಲಾಗದೆ ರೈತರು ಪರಿತಪಿಸಿದ್ದರು. ಮುಂಗಾರು ಆರಂಭವಾದರೆ ಸಮಸ್ಯೆ ಗಂಭೀರವಾಗುತ್ತದೆ. ಈ ಹಿನ್ನೆಲೆಯಲ್ಲಿ ಶೀಘ್ರ ಕ್ರಮ ಕೈಗೊಳ್ಳುವಂತೆ ಸಂಸದ ಪ್ರತಾಪ್ ಸಿಂಹ ಹೇಳಿದ್ದಾರೆ.

ಗ್ಯಾರಂಟಿಗಳ ಬಗ್ಗೆ ಒಂದಲ್ಲ ಒಂದು ಗೊಂದಲ

ಮಾಜಿ ಸಚಿವ ಆರ್.ಅಶೋಕ್ ಟೀಕೆ



ಬೆಂಗಳೂರು, ಜೂ.8(ಕೆಎಂಶಿ)– ರಾಜ್ಯದ ಕಾಂಗ್ರೆಸ್ ಸರ್ಕಾರವು ಗ್ಯಾರಂಟಿ ಅನುಷ್ಠಾನದ ವಿಚಾರದಲ್ಲಿ ಗೊಂದಲಗಳನ್ನು ಮುಂದುವರೆಸಿದೆ ಎಂದು ಮಾಜಿ ಸಚಿವ ಆರ್.ಅಶೋಕ್ ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮನೆ ಬಾಡಿಗೆ ವಿಚಾರದಲ್ಲಿ ಗೊಂದಲ ನಡೆದಿದೆ. ದಿನಕ್ಕೆ ಒಂದು ಹೇಳಿಕೆ ನೀಡುತ್ತಾರೆ. ಹೊಸ ಕಂಡಿಷನ್ ಹಾಕುತ್ತಾರೆ ಎಂದು ಆಕ್ಷೇಪಿಸಿದರು. ಗೃಹಿಣಿಗೆ ಎರಡು ಸಾವಿರ ನೀಡುವ ವಿಷಯದಲ್ಲೂ ಹಾಗಾಗಿದೆ. ಮೊದಲು ಷರತ್ತೇ ಇರಲಿಲ್ಲ. ಈಗ ಹೊಸ ಕಂಡಿಷನ್ ಹಾಕುತ್ತಿದ್ದಾರೆ ಎಂದರು.

ವಿದ್ಯುತ್ ದರ ತೀವ್ರ ಏರಿಕೆ, ದುಬಾರಿ ದರ ವಿಧಿಸಿ ಜನರಿಂದ ಪಡೆದು ಜನರಿಗೆ ಕೊಡುವ ಒಳ್ಳೆಯ ಸ್ಕೀಂ ಎಂದು ವ್ಯಂಗ್ಯವಾಡಿದರು. ರಾಜ್ಯದ ಜನ ರೊಚ್ಚಿಗೆದ್ದು ಬೀದಿಗಿಳಿದು ಹೋರಾಟ ಮಾಡಬೇಕಿದೆ ಎಂದು ತಿಳಿಸಿದರು. ಪ್ರಾಮಾಣಿಕೆಯಂತೆ, ಮಾತು ಕೊಟ್ಟಂತೆ ನಡೆಯಲು ಆಗ್ರಹಿಸಬೇಕಿದೆ ಎಂದರು.

ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇ ಪ್ರಯಾಣ ಆತಂಕಕಾರಿ

ಮಂಡ್ಯ ವ್ಯಾಪ್ತಿ 5 ತಿಂಗಳಲ್ಲಿ 55 ಮಂದಿ ಅಪಘಾತಕ್ಕೆ ಬಲಿ



ಮಂಡ್ಯ, ಜೂ.8– ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ನಿರಂತರ ಅಪಘಾತ ಸಂಭವಿಸುತ್ತಿದ್ದು, ಜಾಗರೂಕತೆಯಿಂದ ಸಂಚರಿಸಬೇಕಿದೆ.

ಕಳೆದ 5 ತಿಂಗಳಲ್ಲಿ ಹಲವು ಅಪಘಾತಗಳು ಸಂಭವಿಸಿದ್ದು, ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲೇ 55 ಮಂದಿ ಮೃತಪಟ್ಟಿರುವುದಾಗಿ ವರದಿಯಾಗಿದೆ. ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿ ಬರೋಬ್ಬರಿ 55 ಕಿ.ಮೀ.ಗೂ ಹೆಚ್ಚು ಈ ಹೆದ್ದಾರಿ ಹಾದು ಹೋಗಿದೆ. ಸದ್ಯ ಹೆದ್ದಾರಿ ಕಾಮಗಾರಿ ಪೂರ್ಣಗೊಂಡಿದ್ದು, ವಾಹನ ಸವಾರರು ಖುಷಿಯಿಂದ ಪ್ರಯಾಣಿಸುತ್ತಿದ್ದಾರೆ. ಪ್ರಯಾಣದ ಅವಧಿ ಕಡಿಮೆಯಾಗಿರುವ ಸಂತಸ ಒಂದೆಡೆಯಾದರೆ ಹೆಚ್ಚು ಅಪಘಾತಗಳಾಗುತ್ತಿರುವುದು ಆತಂಕ ಮೂಡಿಸಿದೆ. ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿ ಜನವರಿಯಿಂದ ಕಳೆದ ಮೇ ತಿಂಗಳವರೆಗೆ 570 ಅಪಘಾತ ಸಂಭವಿಸಿದ್ದು, 55 ಮಂದಿ ಮೃತಪಟ್ಟಿದ್ದಾರೆ. 52 ಮಂದಿಗೆ ಗಂಭೀರ ಗಾಯಗಳಾಗಿವೆ. 184 ಮಂದಿಗೆ ಕೈಕಾಲು ಮುರಿದಿದ್ದು, 279 ಮಂದಿ ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ ಎಂದು ತಿಳಿದುಬಂದಿದೆ.

ಬೆಂಗಳೂರು ಹಾಗೂ ಅದರ ನಂತರದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಮೈಸೂರು ನಗರಕ್ಕೆ ಅತ್ಯುತ್ತಮವಾದ ರಸ್ತೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ 9 ಸಾವಿರ ಕೋಟಿಗೂ ಹೆಚ್ಚು ವೆಚ್ಚದಲ್ಲಿ ಉಭಯ ನಗರಗಳ ನಡುವೆ ಎಕ್ಸ್‌ಪ್ರೆಸ್ ವೇ ನಿರ್ಮಿಸಲಾಗಿದೆ. ಆದರೆ ಕಾಮಗಾರಿಯಲ್ಲಿನ ಕೆಲ ವೈಫಲ್ಯಗಳಿಂದ ಅಪಘಾತಗಳು ಸಂಭವಿಸುತ್ತಿವೆ ಎಂಬ ಆರೋಪವಿದೆ. ವಾಹನ ಚಾಲಕರ ಅಜಾಗರೂಕತೆಯೂ ಅಪಘಾತಗಳಿಗೆ ಕಾರಣವೆನ್ನಲಾಗುತ್ತದೆ. ಏನೇ ಆದರೂ ಸುರಕ್ಷತೆ ದೃಷ್ಟಿಯಿಂದ ಎಚ್ಚರಿಕೆಯಿಂದ ವಾಹನ ಚಾಲಿಸಬೇಕಿದೆ.



ಮೈಸೂರು ನಗರ ಕಾಂಗ್ರೆಸ್ ಮತ್ತು ಚಾಮರಾಜ ಕ್ಷೇತ್ರ ಪ್ರಚಾರ ಸಮಿತಿಯ ವತಿಯಿಂದ ನೂತನ ಶಾಸಕ ಕೆ ಹರೀಶ್‌ಗೌಡ ಅವರಿಗೆ ಮೈಸೂರು ಬಂಡೆ ಬಿರುದು ನೀಡಿ, ಸನ್ಮಾನಿಸಲಾಯಿತು. ಚಿತ್ರದಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಪ್ರಚಾರ ಸಮಿತಿ ನಗರ ಅಧ್ಯಕ್ಷ ರಘುರಾಜೇ ಅರಸ್, ಚಾಮರಾಜ ಕ್ಷೇತ್ರದ ಅಧ್ಯಕ್ಷ ಆರ್.ಜಗದೀಶ್, ಕೆಪಿಸಿಸಿ ಸಂಯೋಜಕ ಸಿ.ಎಸ್.ರಘು, ನಗರಪಾಲಿಕೆ ಸದಸ್ಯರಾದ ಗೋಪಿ, ಗುಂಡಣ್ಣ ಅವರನ್ನು ಕಾಣಬಹುದು.

ನಿಮ್ಮ ಭವಿಷ್ಯ ನಿಮ್ಮ ಕೈಯಲ್ಲಿದೆ: ಜಿಪಂ ಸಿಇಓ ಗಾಯತ್ರಿ



ಮೈಸೂರು, ಜೂ. 8– ಸರ್ಕಾರ ವಿದ್ಯಾರ್ಥಿಗಳ ಉತ್ತಮ ಶಿಕ್ಷಣಕ್ಕಾಗಿ ಕೋಟ್ಯಾಂತರ ರೂ. ಖರ್ಚು ಮಾಡುತ್ತಿದ್ದು, ಚೆನ್ನಾಗಿ ಓದಿ ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ಜವಾಬ್ದಾರಿ ನಿಮ್ಮ ಕೈಯ್ಯಲ್ಲಿದೆ ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯತ್ರಿ ತಿಳಿಸಿದರು.

ಬೋಗಾದಿಯಲ್ಲಿರುವ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮಹಿಳಾ ಆರೋಗ್ಯ ಮತ್ತು ಪರಿಸರ ಸಂರಕ್ಷಣೆ ಕುರಿತ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನೀವೆಲ್ಲರೂ ದೂರದ ಊರುಗಳಿಂದ ಬಡತನದಿಂದ ಬಂದಿದ್ದೀರಿ. ನಿಮ್ಮ ತಂದೆ ತಾಯಂದಿರು ನಿಮ್ಮ ಭವಿಷ್ಯ ರೂಪಿಸಲು ಹಾಸ್ಟೆಲ್‌ಗಳಲ್ಲಿ ಇರಿಸಿದ್ದಾರೆ. ಆದ್ದರಿಂದ ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ಜವಾಬ್ದಾರಿ ನಿಮ್ಮ ಮೇಲಿದೆ. ನೀವೆಲ್ಲರೂ ಚೆನ್ನಾಗಿ ಓದಬೇಕು. ಈ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಡಾ.ಸುಮಾ ಮಾತನಾಡಿ, ವಿದ್ಯಾರ್ಥಿನಿಯರು ಮುಟ್ಟಿನ ಕಪ್ ಹೇಗೆ ಬಳಸಬೇಕು. ಅದರಿಂದ ಆಗುವ ಅನುಕೂಲ ಹಾಗೂ ಪಿಸಿಓಡಿ ಸಮಸ್ಯೆ ಬಗ್ಗೆ ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ ಮಾತನಾಡಿ, ಹೆಣ್ಣು ಈ ದೇಶದ ದೊಡ್ಡ ಶಕ್ತಿಯಾಗಿದ್ದು, ಹಳ್ಳಿಗಳನ್ನು ಬಿಟ್ಟು ಪಟ್ಟಣಕ್ಕೆ ಬಂದಿದ್ದೀರಿ. ಮುಟ್ಟು ಹೆಣ್ಣಿನ ಜೀವನದ ಜೈವಿಕ ಪ್ರಕ್ರಿಯೆಯಾಗಿದ್ದು, ಇದರ ಬಗ್ಗೆ ಯಾರೂ ನಾಚಿಕೆಪಟ್ಟುಕೊಳ್ಳಬೇಡಿ. ಇದೊಂದು ಅರ್ಥಪೂರ್ಣ ಕಾರ್ಯಕ್ರಮ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರೊ.ರೇಖಾ, ಸಹಾಯಕ ನಿರ್ದೇಶಕ ಸಿದ್ದಲಿಂಗು, ಹಿರಿಯ ನಿಲಯ ಪಾಲಕರಾದ ಪವಿತ್ರ, ಸರೋಜ, ಅನುಷ ಮತ್ತಿತರರು ಉಪಸ್ಥಿತರಿದ್ದರು.

ಜೂ.11ರಂದು ಈವಿವಿ 30ನೇ ಸೇವಾ ಕೇಂದ್ರದ ಉದ್ಘಾಟನೆ

ಮೈಸೂರು, ಜೂ.8–ನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ (ಈವಿವಿ) 30ನೇ ನೂತನ ಸೇವಾ ಕೇಂದ್ರದ ಸಮಾರಂಭವನ್ನು ಜೂ.11ರಂದು ಭಾನುವಾರ ಬೆಳಗ್ಗೆ 10.30ಕ್ಕೆ ಜಯಲಕ್ಷ್ಮೀಪುರಂ ಶ್ರೀ ರಾಘವೇಂದ್ರ ಸ್ವಾಮಿ ರಸ್ತೆ, ನಂ.164, 3ನೇ ಮುಖ್ಯ ರಸ್ತೆಯಲ್ಲಿ ಆಯೋಜಿಸಲಾಗಿದೆ.

ಮೈಸೂರು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಚಾಮರಾಜ ಶಾಸಕ ಕೆ.ಹರೀಶ್‌ಗೌಡ ಆಗಮಿಸಲಿದ್ದಾರೆ. ವಿಶೇಷ ಅತಿಥಿಗಳಾಗಿ ಕೈಗಾರಿಕೋದ್ಯಮಿ ಡಾ.ಎಂ. ಜಗನ್ನಾಥ ಶೆಣೈ, ಮಹಾಜನ ಎಜುಕೇಶನ್ ಸೊಸೈಟಿ ಗೌರವ ಕಾರ್ಯದರ್ಶಿ ವಿಜಯಲಕ್ಷ್ಮಿ ಭಾಗವತ್ ಭಾಗವಹಿಸಲಿದ್ದಾರೆ. ಗೌರವಾನ್ವಿತ ಅತಿಥಿಯಾಗಿ ಜೆಎಸ್‌ಎಸ್ ಆಸ್ಪತ್ರೆ ಕ್ಲಿನಿಕಲ್ ಕಾರ್ಡಿಯಾಲಜಿಸ್ಟ್ ಡಾ.ಶಿಲ್ಪ ಅವರೇಬೀಳ್ ಪಾಲ್ಗೊಳ್ಳಲಿದ್ದು, ಸಮಾರಂಭದ ಸಾನ್ನಿಧ್ಯವನ್ನು ಈವಿವಿ ಮೈಸೂರು ಉಪವಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬಿ.ಕೆ. ಲಕ್ಷ್ಮೀಜಿ ವಹಿಸಲಿದ್ದಾರೆ ಎಂದು ಸೇವಾ ಕೇಂದ್ರದ ಸಂಚಾಲಕಿ ಬಿ.ಕೆ.ಜಯಂತಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನಗರಾಭಿವೃದ್ಧಿ, ನಗರ ಯೋಜನೆ ಸಚಿವ ಭೈರತಿ ಸುರೇಶ್ ಅವರನ್ನು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಡಿಸಿಸಿ ಮಾಧ್ಯಮ ವಕ್ತಾರ ಎಡತೊರೆ ನಿಂಗರಾಜ್, ಯುವ ಮುಖಂಡ ಸೌರಭ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.6.2023 ಶುಕ್ರವಾರ, ಮಳೆ ನಕ್ಷತ್ರ: ಮೃಗಶಿರ, 08.06.2023ರಿಂದ 21.06.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಹೈಪೋಥೈರಾಯ್ಡಿಸಂ ಚಿಕಿತ್ಸಾ ಶಿಬಿರ, ಆಲನಹಳ್ಳಿ, ಬೆಳಗ್ಗೆ 9.30ರಿಂದ

■ **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ :** ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗಿಡ ನೆಡುವ ಕಾರ್ಯಕ್ರಮ, ಭಾಗವಹಿಸುವವರು: ಮೇಯರ್ ಶಿವಕುಮಾರ್, ಉಪಪೊಲೀಸ್ ಆಯುಕ್ತ ಎಂ.ಮುತ್ತುರಾಜ್, ಡಾ.ಸಂಗೀತ ಗಜಾನನ ಭಟ್, ಅಂಶಿ ಪ್ರಸನ್ನಕುಮಾರ್, ಡಾ.ಬಿ.ಜೆ.ವಿಜಯಕುಮಾರ್, ಡಾ.ಬಸವರಾಜ್, ಪ್ರೊ.ಎಸ್.ಶಿವರಾಜಪ್ಪ, ಡಾ.ಸಿ.ಎ.ಶ್ರೀಧರ್, ಪ್ರೊ.ಹೆಚ್.ಸೋಮಶೇಖರಪ್ಪ, ಮುಜಾವರ್, ಪ್ರೊ.ದಿವಾಕರ್ ಚಾಂಡಿ, ಉಮೇಶ್, ಸ್ಥಳ: ವಿ.ವಿ. ಸಂಜೆ ಕಾಲೇಜು ಮುಂಭಾಗ, ಬೆಳಗ್ಗೆ 9.30ಕ್ಕೆ.

■ **ವಿವೇಕಾನಂದ ಯೂತ್ ಮೂವ್‌ಮೆಂಟ್:** ಕೃತಕ ಕಾಲುಗಳ ಅಳತೆ, ಮೌಲ್ಯಮಾಪನಾ ಶಿಬಿರ, ಸ್ಥಳ: ಸಿಎಸ್‌ಐ ವೆಸ್ಲಿ ದೇವಾಲಯ, ಗ್ರಾಮಾಂತರ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಎದುರು, ಬೆಳಗ್ಗೆ 10.30ಕ್ಕೆ

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ :** ರಂಗಭೂಮಿ ಮತ್ತು ಜಾನಪದ ಕಲಾ ಪ್ರಕಾರಗಳ ತರಬೇತಿ ಶಿಬಿರ, ಉದ್ಘಾಟನೆ : ಹಿರಿಯ ರಂಗನಿರ್ದೇಶಕ ಪ್ರೊ. ಎಸ್.ಆರ್. ರಮೇಶ್, ಅಧ್ಯಕ್ಷತೆ : ರಂಗಕರ್ಮಿ ಮೈಮ್ ರಮೇಶ್, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಡಾ. ಹೆಚ್.ಆರ್. ಚೇತನ, ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು, ಉದ್ಯೋಗ ಕೋಶ:** ಸ್ಪರ್ಧಾತ್ಮಕ ಪರೀಕ್ಷೆ ಪೂರ್ವ ತಯಾರಿ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ವಿಶೇಷಾಧಿಕಾರಿ ಪ್ರೊ.ಶಿವರಾಜಪ್ಪ, ಆರ್.ಎಚ್.ಶಂಕರ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ಕಾಲೇಜು ಪ್ರಾಂಶುಪಾಲೆ ಡಾ.ಶಾರದಾ, ಸ್ಥಳ: ಸೆಮಿನಾರ್ ಹಾಲ್, ಬೆಳಗ್ಗೆ 11ಕ್ಕೆ

■ **ಶ್ರೀ ರಾಘವೇಂದ್ರಸ್ವಾಮಿ ಬೃಂದಾವನ ಸನ್ನಿಧಾನ:** ಶ್ರೀ ರಾಘವೇಂದ್ರಸ್ವಾಮಿ 76ನೇ ಬೃಂದಾವನ ಪ್ರತಿಷ್ಠಾಪನಾ ವರ್ಧಂತ್ಯುತ್ಸವ ಜ್ಞಾನಸತ್ರ, ಪಂಡಿತ್ ವಿದ್ಯಾವಾಚಸ್ಪತಿ ಶ್ರೀ ಪ್ರಭಂಜನಾಚಾರ್ಯ ವ್ಯಾಸನಕೆರೆ, ಬೆಂಗಳೂರು ಅವರಿಂದ ಶ್ರೀ ಮನ್ಮಹಾಭಾರತ ಪ್ರವಚನ, ಸ್ಥಳ: ಶ್ರೀ ರಾಯರ ಮಠ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ.

■ **ಬ್ರಹ್ಮ ವಿದ್ಯಾ ವೀಣಾ ವಿಶ್ವೇಶ್ವರನ್ ಅಂತಾರಾಷ್ಟ್ರೀಯ ಪ್ರತಿಷ್ಠಾನ, ಅಮೇರಿಕಾ, ಡಿವಿಜಿ ಬಳಗ ಪ್ರತಿಷ್ಠಾನ, ಕಾಂಚನ ಶ್ರೀ ಲಕ್ಷ್ಮೀನಾರಾಯಣ ಮ್ಯೂಸಿಕ್ ಅಕಾಡೆಮಿ ಟ್ರಸ್ಟ್, ಅರಸು ಜನಾಂಗ, ಪರಂಪರೆ, ಕಲಾಸಂದೇಶ ಪ್ರತಿಷ್ಠಾನ, ಶ್ರೀಮತಂಗ ಸಾಂಸ್ಕೃತಿಕ ಸಾಮಾಜಿಕ ಅಕಾಡೆಮಿ ಟ್ರಸ್ಟ್, ಶ್ರೀ ವಿದ್ಯಾ ಪ್ರತಿಷ್ಠಾನ:** ಭಾರತೀಯ ಸಂಗೀತಶಾಸ್ತ್ರ ದಿನಾಚರಣೆ, ಸಂಜೆ 6ರಿಂದ ವೀಣಾ ವಿದ್ವಾನ್ ಮಧುಕರಂ ಪ್ರಶಾಂತ್ ಅಯ್ಯಂಗಾರ್ ಮತ್ತು ಸಹ ವಿದ್ವಾಂಸರಿಂದ ಗಾಯನ ಕಛೇರಿ, ಸಂಜೆ 6ರಿಂದ ಮಲೆನಾಡ ಸಂಗೀತಚಾರ್ಯ, ನಾದಸಿರಿ, ಸಂಗೀತ ವಿಶಾರದ ವಿದ್ವಾನ್ ಶೃಂಗೇರಿ ಹೆಚ್.ಎಸ್.ನಾಗರಾಜ್ ಅವರಿಂದ ಗಾಯನ ಕಛೇರಿ, ವಿದ್ವಾನ್ ಡಾ.ತಾಂಡವ ಮೂರ್ತಿ–ವಯೋಲಿನ್, ವಿದ್ವಾನ್ ಪಿ.ಎಸ್.ಶ್ರೀಧರ್–ಮೃದಂಗ, ಶ್ರೀ ಕಮಲಾಂಬಾ ಜಯಂತಿ, ಹಿರಿಯ ವೀಣಾವಾದಕ, ವಾಗ್ಗೇಯಕಾರ ಡಾ.ರಾ.ವಿಶ್ವೇಶ್ವರನ್ ಅವರಿಂದ ವೀಣಾವಾದನ, ವಿದುಷಿ ಡಾ.ವೀಣಾ ಸುರೇಶ್ –ವಯೋಲಿನ್, ವಿದ್ವಾನ್ ಜಿ.ಎಸ್.ರಾಮಾನುಜಂ–ಮೃದಂಗ, ಸ್ಥಳ: ರಮಾಗೋವಿಂದ ರಂಗಮಂದಿರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ಸಿ. ನಾಗಣ್ಣ, 6.15 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾಪರಂಪರೆ ಬಾನುಲಿ ಸರಣಿ, ಪ್ರಸ್ತುತಿ– ಡಾ. ಎ.ಎಸ್. ಚಂದ್ರಶೇಖರ್, 6.35 ಇಂಜಿನಿಯರಿಂಗ್ ವಿದ್ಯಾವಿಕಾಸ, ಪ್ರಾಯೋಜಕರು– ವಿದ್ಯಾವಿಕಾಸ ಇಂಜಿನಿಯರಿಂಗ್ ಕಾಲೇಜ್, ಮೈಸೂರು, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ–ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, ಪ್ರಸ್ತುತಿ– ಡಾ.ಬಿ. ವಿ. ವಸಂತಕುಮಾರ್, 7.15 ಭಾವಗೀತೆಗಳು, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಎನ್ .ನಾಗರಾಜು ಮತ್ತು ಸಂಗಡಿಗರು – ನಾಗಸ್ವರ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿಯವರ "ರಂಗನಾಯಕಿ" ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ರಾಜರಾಂ ಬಿ.ಎಸ್., 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಮೌನದಾಚೆಯ ಬೆಳಕು– ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ, 4.00 ಮಹಿಳಾರಂಗ–ಚರ್ಚೆ, 4.30 ವೃತ್ತಿ ಮಾಗದರ್ಶನ–"ಮೆಡಿಕಲ್ ಫಿಸಿಕ್ಸ್ ಅಥವಾ ರೇಡಿಯೇಷನ್ ಫಿಸಿಕ್ಸ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು" ಕುರಿತು ಜೆ.ಎಸ್.ಎಸ್. ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಅಂಡ್ ರಿಸರ್ಚ್‌ನ ರೇಡಿಯೇಷನ್ ಫಿಸಿಕ್ಸ್ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಡಾ. ಷಣ್ಮುಖಪ್ಪ ಬಿ. ಕಾಗಿನೆಲ್ಲಿ ಅವರೊಂದಿಗೆ ಮಾತುಕತೆ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್ ವಾಣಿ–ಮುಂಗಾರು ಹಂಗಾಮಿಗೆ ಭತ್ತದ ಕೃಷಿಯಲ್ಲಿ ಆಧುನಿಕ ಬೇಸಾಯ ತಾಂತ್ರಿಕತೆಗಳು ಈ ಕುರಿತು ICAR JSS ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ಶಾಸ್ತ್ರದ ವಿಜ್ಞಾನಿಗಳಾದ ಡಾ. ಶಾಮರಾಜ್ ಅವರೊಡನೆ ಸಂದರ್ಶನ, 8.00 ವಿಜ್ಞಾನ ಭಾರತಿ, 9.30 ಗಾನಲಹರಿ, 10.30 ಸವಿನೆನಪು

ಮಕ್ಕಾಜಿ ಚೌಕ ಹಾದು ಹೋಗುವ ವಿನೋಬಾ ರಸ್ತೆಗೆ ಮುಕ್ತಿ

● ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಅಡೆತಡೆ ತೆರವು ● 16 ವರ್ಷದಿಂದ ಸಾರ್ವಜನಿಕ ಸಂಚಾರಕ್ಕೆ ರಸ್ತೆ ಬಂದ್ ಆಗಿತ್ತು ● ಈಗ ಸಯ್ಯಾಜಿರಾವ್ ರಸ್ತೆಯಿಂದ ಮಕ್ಕಾಜಿ ಚೌಕದ ಮೂಲಕ ಗಾಂಧಿ ವೃತ್ತ ತಲುಪುವುದು ಸರಾಗ





ಮೈಸೂರು, ಜೂ.8(ಆರ್‌ಕೆ)– ಕಳೆದ ಹದಿನಾರು ವರ್ಷದಿಂದ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಿ ಬಂದ್ ಮಾಡಲಾಗಿದ್ದ ಮೈಸೂರಿನ ಹೃದಯ ಭಾಗದಲ್ಲಿರುವ ಮಕ್ಕಾಜಿ ಚೌಕ ಹಾದು ಹೋಗುವ ವಿನೋಬಾ ರಸ್ತೆಗೆ ಮುಕ್ತಿ ದೊರೆತಿದ್ದು, ನ್ಯಾಯಾಲಯದ ಆದೇಶದ ಮೇರೆಗೆ ಗುರುವಾರ ರಸ್ತೆಯನ್ನು ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಲಾಯಿತು.

ಗಾಂಧಿಚೌಕದಿಂದ ಸಯ್ಯಾಜಿರಾವ್ ರಸ್ತೆಗೆ ಬರುವ ವಾಹನಗಳು ಇದೇ ರಸ್ತೆಯಲ್ಲಿ ಸಂಚರಿಸುತ್ತಿದ್ದವು. ಮೈಸೂರು ಮಹಾನಗರಪಾಲಿಕೆಯೊಂದಿಗೆ ಮಾಡಿಕೊಂಡಿದ್ದ ಒಪ್ಪಂದದಂತೆ ಮೆ॥ ಮೇವರಿಕ್ ಹೋಲ್ಡಿಂಗ್ ಅಂಡ್ ಇನ್‌ವೆಸ್ಟ್‌ಮೆಂಟ್ ಪ್ರೈವೇಟ್ ಲಿಮಿಟೆಡ್‌ನವರು 2007ರಲ್ಲಿ ಈ ರಸ್ತೆಯನ್ನು ಬಂದ್ ಮಾಡಿದ ನಂತರ ಗಾಂಧಿಚೌಕದಿಂದ ಸಯ್ಯಾಜಿರಾವ್ ರಸ್ತೆ ಮೂಲಕ ಕೆಆರ್.ಸರ್ಕಲ್‌ಗೆ ಬರಬೇಕಾದ ವಾಹನಗಳು ಓಲ್ಡ್ ಬ್ಯಾಂಕ್ ರಸ್ತೆ ಮೂಲಕ ಬಳಸಿಕೊಂಡು ಸಯ್ಯಾಜಿರಾವ್ ರಸ್ತೆ ಪ್ರವೇಶಿಸಬೇಕಾದ ಅನಿವಾರ್ಯತೆ ಇತ್ತು.

ಈ ರಸ್ತೆ ಬಂದ್ ಮಾಡಿದ್ದರ ವಿರುದ್ಧ ಮೈಸೂರು ರಕ್ಷಣಾ ವೇದಿಕೆ ಮೈಕಾ ಪ್ರೇಮ್‌ಕುಮಾರ್, ಎಂ.ಎ.ಮೋಹನ್ ಸೇರಿದಂತೆ ಹಲವಾರು ಸಾರ್ವಜನಿಕರು ಹೋರಾಟ ಮಾಡಿದ್ದರೂ ಫಲ ನೀಡಿರಲಿಲ್ಲ. ಹೀಗಾಗಿ ಮೈಕಾ ಪ್ರೇಮ್ ಕುಮಾರ್ ಮತ್ತಿತರರು ನ್ಯಾಯಾಲಯದ ಮೊರೆ ಹೋಗಿದ್ದರು. ಜೆಎಂಎಫ್‌ಸಿ ನ್ಯಾಯಾಲಯ ಮತ್ತು ಸೆಷನ್ಸ್ ನ್ಯಾಯಾಲಯಗಳಲ್ಲಿ ಸಾರ್ವಜನಿಕರ ಪರ ತೀರ್ಪು ಬಂದಿತ್ತು. ಆದರ ವಿರುದ್ಧ ನಗರ ಪಾಲಿಕೆ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಕೊನೆಗೆ ಹೈಕೋರ್ಟ್ ನಿರ್ದೇಶನದ ಮೇರೆಗೆ ಸೆಷನ್ಸ್ ಕೋರ್ಟ್ ನ್ಯಾಯಾಧೀಶರ ಆದೇಶದ ಮೇರೆಗೆ ನ್ಯಾಯಾಲಯದ ಅಮೀನಾ ಮತ್ತು ಅರ್ಜಿದಾರರಾದ ಮೈಕಾ ಪ್ರೇಮ್‌ಕುಮಾರ್, ಎಂ.ಎ.ಮೋಹನ್ ಮತ್ತಿತರರು ಇಂದು ಮೇವರಿಕ್ ಸಂಸ್ಥೆ ಬಂದ್ ಮಾಡಿದ್ದ ರಸ್ತೆಯನ್ನು ತೆರವುಗೊಳಿಸಿ ಸಾರ್ವಜನಿಕರ ಓಡಾಟಕ್ಕೆ ಮುಕ್ತವಾಗಿಸಿದ್ದಾರೆ.

ವಿವರ: ಮಕ್ಕಾಜಿ ಚೌಕದಲ್ಲಿ ಬೂಟ್ ಆಧಾರದ ಮೇರೆಗೆ ಶಾಪಿಂಗ್ ಅಂಡ್ ಎಂಟರ್‌ಟೈನ್‌ಮೆಂಟ್ ಮಾಲ್ ನಿರ್ಮಿಸಲು ಮೈಸೂರು ನಗರಪಾಲಿಕೆಯು ಮೇವರಿಕ್ ಸಂಸ್ಥೆಗೆ ಒಂದೂಕಾಲು ಎಕರೆ ಪ್ರದೇಶವನ್ನು ಚದರಡಿಗೆ 3.40 ಲಕ್ಷ ರೂ.ಗಳಂತೆ ಒಟ್ಟು 4.19 ಕೋಟಿ ರೂ.ಗಳಿಗೆ 25 ವರ್ಷಗಳ ಅವಧಿಗೆ ಗುತ್ತಿಗೆ ನೀಡಿ, ಭೂಮಿಯನ್ನು ಹಸ್ತಾಂತರಿಸಿತ್ತು. ಇದರಲ್ಲಿ 50X274 ಅಡಿ ವಿಸ್ತೀರ್ಣದ ವಿನೋಬಾ ರಸ್ತೆಯೂ ಕೂಡ ಒಳಗೊಂಡಿತ್ತು. ಹೀಗಾಗಿ ಮೇವರಿಕ್ ಸಂಸ್ಥೆಯವರು 2007ರಲ್ಲಿ ಈ ರಸ್ತೆಯನ್ನು ಬಂದ್ ಮಾಡಿದ್ದರು.

ರಸ್ತೆ ಬಂದ್ ಆಗಿದ್ದರ ವಿರುದ್ಧ ಮೈಕಾ ಪ್ರೇಮ್‌ಕುಮಾರ್ ನೇತೃತ್ವದಲ್ಲಿ ಹಲವಾರು ಪ್ರತಿಭಟನೆಗಳು ನಡೆದು ಹೋರಾಟಗಾರರ ವಿರುದ್ಧ ಪ್ರಕರಣಗಳೂ ಕೂಡ ದಾಖಲಾಗಿದ್ದವು. ಕೊನೆಗೆ ಪ್ರೇಮ್ ಕುಮಾರ್ ಮತ್ತಿತರರು ನಗರ ಪಾಲಿಕೆ ಮತ್ತು ಮೇವರಿಕ್ ಸಂಸ್ಥೆ ನಡುವೆ ಆಗಿದ್ದ ಒಪ್ಪಂದದ ವಿರುದ್ಧ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಪ್ರಮುಖವಾಗಿ ವಿನೋಬಾ ರಸ್ತೆ ಐತಿಹಾಸಿಕವಾಗಿ ಹೆಸರುವಾಸಿಯಾಗಿದೆ. ಅಲ್ಲದೆ ಯಾವುದೇ ರಸ್ತೆಯನ್ನು ಖಾಸಗಿಯವರಿಗೆ ಹಸ್ತಾಂತರಿಸಬೇಕಿದ್ದರೆ ಅದಕ್ಕೆ ಸರ್ಕಾರದ ಆದೇಶ ಬೇಕಾಗುತ್ತದೆ. ಸರ್ಕಾರವು ಆದೇಶ ಹೊರಡಿಸುವ ಮುನ್ನ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಕರೆಯಬೇಕಾಗುತ್ತದೆ. ಪಾಲಿಕೆಯು ತನಗೆ ಅಧಿಕಾರವಿಲ್ಲದಿದ್ದರೂ, ಕಾನೂನು ಉಲ್ಲಂಘಿಸಿ ಈ ರಸ್ತೆಯನ್ನು ಮೇವರಿಕ್ ಸಂಸ್ಥೆಗೆ ನೀಡಿದೆ ಎಂಬುದು ಮೈಕಾ ಪ್ರೇಮ್‌ಕುಮಾರ್ ಮತ್ತಿತರರ ವಾದವಾಗಿತ್ತು.

ವಾದ-ಪ್ರತಿವಾದವನ್ನು ಆಲಿಸಿದ್ದ ಮೈಸೂರು 4ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯವು ನಗರಪಾಲಿಕೆ ಮತ್ತು ಮೇವರಿಕ್ ಸಂಸ್ಥೆ ನಡುವೆ ಆಗಿರುವ ಒಪ್ಪಂದ ನ್ಯಾಯಸಮ್ಮತವಲ್ಲ ಎಂದು ಅಭಿಪ್ರಾಯಪಟ್ಟಿದ್ದಲ್ಲದೇ ವಿನೋಬಾ ರಸ್ತೆಯನ್ನು ಸಾರ್ವಜನಿಕರ ಓಡಾಟಕ್ಕೆ ಮುಕ್ತಗೊಳಿಸಬೇಕೆಂದು 2009ರಲ್ಲಿ ಆದೇಶ ನೀಡಿತ್ತು. ಆದರೆ ಈ ಆದೇಶದ ವಿರುದ್ಧ ನಗರಪಾಲಿಕೆ ಸೆಷನ್ಸ್ ನ್ಯಾಯಾಲಯದ ಮೊರೆ ಹೋಯಿತಾದರೂ, ಅಲ್ಲೂ ಕೂಡ ಪಾಲಿಕೆ ವಿರುದ್ಧ ಆದೇಶ ಬಂದಿದ್ದರಿಂದ ನಗರಪಾಲಿಕೆ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ಮೈಸೂರಿನ 4ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿದ ಹೈಕೋರ್ಟ್, ಆದೇಶವನ್ನು ಜಾರಿಗೊಳಿಸಿ ಅಂದರೆ ರಸ್ತೆಯನ್ನು ಸಾರ್ವಜನಿಕರಿಗೆ ಮುಕ್ತಗೊಳಿಸಿ ಜೂನ್ 12ರೊಳಗೆ ವರದಿ ಸಲ್ಲಿಸಬೇಕೆಂದು ಜೆಎಂಎಫ್‌ಸಿ ನ್ಯಾಯಾಲಯಕ್ಕೆ ನಿರ್ದೇಶನ ನೀಡಿತ್ತು. ಅದರಂತೆ ನ್ಯಾಯಾಲಯದ ಅಮೀನ್ ನಾಗರಾಜ್ ಅವರು ಅರ್ಜಿದಾರರಾದ ಮೈಕಾ ಪ್ರೇಮ್ ಕುಮಾರ್ ಹಾಗೂ ಮೋಹನ್ ಅವರೊಂದಿಗೆ ಇಂದು ಸ್ಥಳಕ್ಕೆ ಭೇಟಿ ನೀಡಿ ಮೇವರಿಕ್ ಸಂಸ್ಥೆಯಿಂದ ರಸ್ತೆಗೆ ಅಳವಡಿಸಿದ್ದ ಬ್ಯಾರಿಕೇಡ್‌ಗಳನ್ನು ತೆರವುಗೊಳಿಸಿ ಸಾರ್ವಜನಿಕರ ಓಡಾಟಕ್ಕೆ ರಸ್ತೆಯನ್ನು ಮುಕ್ತಗೊಳಿಸಿದರು. ಒಟ್ಟಾರೆ ಸುದೀರ್ಘ 16 ವರ್ಷದ ನಂತರ ಈ ರಸ್ತೆಯಲ್ಲಿ ಸಾರ್ವಜನಿಕರು ಮತ್ತೆ ಓಡಾಡುವಂತಾಗಿದೆ.

ನ್ಯಾಯಾಲಯದ ಆದೇಶ ಪ್ರತಿ ತರಿಸಿಕೊಂಡು ನಂತರ ಸೂಕ್ತ ಕ್ರಮ



ಮೈಸೂರು, ಜೂ.8(ಆರ್‌ಕೆ)–ಮಕ್ಕಾಜಿ ಚೌಕದ ರಸ್ತೆ ತೆರವುಗೊಳಿಸಿರುವುದು ನನ್ನ ಗಮನಕ್ಕೆ ಬಂದಿದೆ. ನ್ಯಾಯಾಲಯದ ಆದೇಶ ಪ್ರತಿ ತರಿಸಿಕೊಂಡು ನೋಡಿದ ನಂತರ ಕಾನೂನು ಶಾಖೆ ಅಭಿಪ್ರಾಯ ಪಡೆದು ಮುಂದಿನ ಕ್ರಮ ಜರುಗಿಸುತ್ತೇವೆ ಎಂದು ಮೇಯರ್ ಶಿವಕುಮಾರ್ ತಿಳಿಸಿದರು. ಈ ಹಿಂದೆ ಹೈಕೋರ್ಟ್ ನೀಡಿದ್ದ ನಿರ್ಣಯದಂತೆ ಪಾಲಿಕೆಯು ಮಕ್ಕಾಜಿ ಚೌಕದ ಒಂದೂಕಾಲು ಎಕರೆ ಪ್ರದೇಶದ ಸುತ್ತ ತಂತಿಬೇಲಿ ಹಾಕಿ ಎತ್ತರದ ಶೀಟ್‌ಗಳನ್ನು ಅಳವಡಿಸಲಾಗಿತ್ತು. ಇದೀಗ ನ್ಯಾಯಾಲಯದ ನಿರ್ದೇಶನದಂತೆ ರಸ್ತೆಯನ್ನು ಅರ್ಜಿದಾರರು ತೆರವುಗೊಳಿಸಿದ್ದಾರೆಂಬ ಮಾಹಿತಿ ತಿಳಿದ ತಕ್ಷಣವೇ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿ ನ್ಯಾಯಾಲಯದ ಆದೇಶ ಪ್ರತಿ ಲಭ್ಯವಾಗಿಲ್ಲ ಎಂದು ತಿಳಿಸಿದ್ದಾರೆ. ಪ್ರತಿ ಪಡೆದುಕೊಂಡು ಕಡತದೊಂದಿಗೆ ಚರ್ಚಿಸಲು ಹೇಳಿದ್ದೇನೆ ಎಂದರು.

ನಾಳೆ (ಜೂ.9) ಕೌನ್ಸಿಲ್ ಸಭೆ ಮುಗಿದ ಬಳಿಕ ಅಧಿಕಾರಿಗಳೊಂದಿಗೆ ಚರ್ಚಿಸಿ ಪಾಲಿಕೆಯ ಕಾನೂನು ಶಾಖೆಯಿಂದ ಅಭಿಪ್ರಾಯ ಪಡೆದು ಸೂಕ್ತ ಕ್ರಮ ಕೈಗೊಳ್ಳುತ್ತೇವೆ ಎಂದು ಮೇಯರ್ ಶಿವಕುಮಾರ್ ನುಡಿದರು.

ಶಾಸಕರಿಗೆ ಲೋಕಸಭೆ ಚುನಾವಣೆ ಜವಾಬ್ದಾರಿ

ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಮಾಹಿತಿ




ಬೆಂಗಳೂರು, ಜೂ.8 (ಕೆಎಂಶಿ)–ಲೋಕಸಭೆ ಚುನಾವಣೆಗೆ ಶಾಸಕರಿಗೆ ಗುರಿ ನೀಡುವ ಕುರಿತು ಸಭೆಯಲ್ಲಿ ಚರ್ಚೆ ಮಾಡಲಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ನಡೆದ ನೂತನ ಶಾಸಕರ ಅಭಿನಂದನಾ ಸಮಾರಂಭದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೂತನ ಶಾಸಕರಿಗೆ ಅಭಿನಂದನೆ ಸಲ್ಲಿಸಲಾಗಿದೆ. ವಿಧಾನಾಸಭೆ ಚುನಾವಣಾ ಸಂದರ್ಭದಲ್ಲಿ ಏನೆಲ್ಲಾ ಮಾಡಬಹುದಿತ್ತು ಅನ್ನುವ ಬಗ್ಗೆಯೂ ಚರ್ಚೆಯಾಗಿದೆ ಎಂದರು. ಕೇಂದ್ರ ಸರ್ಕಾರ 9 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಯೋಜನೆ ಜನರಿಗೆ ತಲುಪಿಸಲು ಮುಂದೆ ಏನೆಲ್ಲಾ ಮಾಡಬೇಕು ಎನ್ನುವ ಕುರಿತಂತೆ ಚರ್ಚೆ ಮಾಡಲಾಗಿದೆ ಎಂದರು. ಇದೇ ವೇಳೆ ವಿಧಾನಸಭೆ ಪ್ರತಿಪಕ್ಷದ ನಾಯಕನ ಆಯ್ಕೆ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ವಿಪಕ್ಷ ನಾಯಕರ ಆಯ್ಕೆ ಕುರಿತು ಈ ಸಭೆಯಲ್ಲಿ ಚರ್ಚೆಗೆ ಬಂದಿಲ್ಲ. ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಅವರು ಶಾಸಕರ ಅಭಿಪ್ರಾಯ ಸಂಗ್ರಹ ಮಾಡಿದ್ದಾರೆ. ಕೋರ್ ಕಮಿಟಿ ಸಭೆಯನ್ನು ಪಕ್ಷದ ರಾಜ್ಯಾಧ್ಯಕ್ಷರು ಕರೆಯುತ್ತಾರೆ ಎಂದು ಹೇಳಿದರು.

ಆರ್‌ಎಸ್‌ಎಸ್ ಸಂಸ್ಥಾಪಕ ಹೆಡಗೇವಾರ್ ಅಧ್ಯಾಯ ಕೈಬಿಡಲು ಸರ್ಕಾರ ನಿರ್ಧಾರ!

ಬೆಂಗಳೂರು, ಜೂ.8– ಕಳೆದ ಶೈಕ್ಷಣಿಕ ವರ್ಷದಲ್ಲಿ ರಾಜ್ಯ ಪಠ್ಯಕ್ರಮದಲ್ಲಿ ಸೇರಿಸಲಾಗಿದ್ದ ಆರ್‌ಎಸ್‌ಎಸ್ ಸಂಸ್ಥಾಪಕ ಹೆಡಗೇವಾರ್ ಅವರ ಕುರಿತ ಅಧ್ಯಾಯವನ್ನು ಕೈಬಿಡಲು ರಾಜ್ಯ ಸರ್ಕಾರ ನಿರ್ಧಾರ ಕೈಗೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಸಚಿವ ಮಧು ಬಂಗಾರಪ್ಪ ನೇತೃತ್ವದಲ್ಲಿ ನಡೆದ ಶೈಕ್ಷಣಿಕ ಸುಧಾರಣೆಗಳ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿದುಬಂದಿದೆ.



ಸಭೆ ಬಳಿಕ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ ಹಾಗೂ ಮಧು ಬಂಗಾರಪ್ಪ ಅವರು, ಹಿಂದಿನ ಬಿಜೆಪಿ ಸರ್ಕಾರವು ಶಾಲಾ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವಾಗ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಜಾರಿಗೊಳಿಸುವಾಗ ಮಾಡಿದ ಬದಲಾವಣೆಗಳನ್ನು ರದ್ದುಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

ಸಭೆಯ ಬಳಿಕ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ ಸಿದ್ದರಾಮಯ್ಯ ಅವರು, ಬಿಜೆಪಿ ಸರ್ಕಾರವು ಪಠ್ಯಪುಸ್ತಕಗಳಲ್ಲಿ ಸೇರಿಸಿರುವ ಅಧ್ಯಾಯಗಳನ್ನು ಅಧ್ಯಯನ ಮಾಡಲು ಮತ್ತು ಪರಿಷ್ಕರಿಸಲು ಸಮಿತಿ ರಚಿಸುವಂತೆ ಸೂಚಿಸಿದರು ಎಂದು ಮೂಲಗಳು ತಿಳಿಸಿವೆ. ಶಿಕ್ಷಣ ಇಲಾಖೆ ಮೂಲಗಳ ಪ್ರಕಾರ, ಪರಿಷ್ಕರಣೆ ಕುರಿತು ಶೀಘ್ರದಲ್ಲೇ ಸುತ್ತೋಲೆ ಹೊರಡಿಸಲು ಸರ್ಕಾರ ನಿರ್ಧರಿಸಿದೆ. ಆದರೆ ಈಗಾಗಲೇ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ವಿತರಿಸಿರುವುದರಿಂದ ಪರಿಷ್ಕರಣೆ ಸಾಧ್ಯವಾಗಿಲ್ಲ. ಹೀಗಾಗಿ ಆ ಪಾಠಗಳನ್ನು ಕೈಬಿಡುವಂತೆ ಶಿಕ್ಷಕರಿಗೆ ಸೂಚಿಸುವ ಸಾಧ್ಯತೆಗಳಿವೆ ಎಂದು ತಿಳಿದುಬಂದಿದೆ.

2022–23 ಶೈಕ್ಷಣಿಕ ವರ್ಷಕ್ಕೆ ಮುಂಚಿತವಾಗಿ, ರಾಜ್ಯ ಪಠ್ಯಕ್ರಮದ ಪಠ್ಯಪುಸ್ತಕಗಳನ್ನು ಪರಿಷ್ಕರಿಸಲಾಗಿತ್ತು. 10ನೇ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿ ಆರ್‌ಎಸ್‌ಎಸ್ ಸಂಸ್ಥಾಪಕರ ಕುರಿತ ಅಧ್ಯಾಯವನ್ನು ಸೇರಿಸಲಾಗಿತ್ತು. ಇದು ಸಾಕಷ್ಟು ವಿವಾದಕ್ಕೆ ಕಾರಣವಾಗಿತ್ತು. ಬಿಜೆಪಿ ಸರ್ಕಾರವು ಶಾಲಾ ಹಂತದಲ್ಲಿ ಶಿಕ್ಷಣದ "ಕೇಸರೀಕರಣ"ವನ್ನು ಪ್ರೋತ್ಸಾಹಿಸುತ್ತಿದೆ ಎಂದು ಆರೋಪಿಸಿ ಆಗಿನ ಪ್ರತಿಪಕ್ಷ ಕಾಂಗ್ರೆಸ್ ಈ ಕ್ರಮವನ್ನು ಬಲವಾಗಿ ಟೀಕಿಸಿತ್ತು.

ಈ ವರ್ಷವೇ ಪಠ್ಯಪುಸ್ತಕ ಪರಿಷ್ಕರಣೆ



ಬೆಂಗಳೂರು, ಜೂ.8– ಈ ವರ್ಷವೇ ರಾಜ್ಯದ ಶಾಲಾ ಪಠ್ಯಪುಸ್ತಕಗಳನ್ನು ಪರಿಷ್ಕರಿಸಲಾಗುವುದು ಎಂದು ಕರ್ನಾಟಕ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಗುರುವಾರ ಸ್ಪಷ್ಟಪಡಿಸಿದ್ದಾರೆ.

ಈ ವರ್ಷ ಪಠ್ಯಪುಸ್ತಕಗಳಲ್ಲಿ ಏನಿರಬೇಕು ಮತ್ತು ಏನಿರಬಾರದು ಎಂಬುದನ್ನು ಪರಿಶೀಲಿಸಿದ ಬಳಿಕ ತಜ್ಞರು ಪಠ್ಯಪುಸ್ತಕಗಳನ್ನು ಪರಿಷ್ಕರಿಸುತ್ತಾರೆ. ಸಚಿವ ಸಂಪುಟದಲ್ಲೂ ಇದೇ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿದರು.

ಆರಂಭದಲ್ಲಿ, ದೈಹಿಕ ತರಗತಿಗಳಿಗೆ ಹಾಜರಾಗದ ಕಾರಣ ವಿದ್ಯಾರ್ಥಿಗಳು ತಪ್ಪಿಸಿಕೊಂಡ ಪಾಠಗಳನ್ನು ಬೋಧಿಸಲು ಸಹಾಯ ಮಾಡುವ ಸೇತು ಬಂಧ ಯೋಜನೆ ಇರುತ್ತದೆ. ಪಠ್ಯಪುಸ್ತಕದಲ್ಲಿ ಏನಿರಬೇಕು, ಯಾವುದನ್ನು ತೆಗೆಯಬೇಕು ಎಂಬುದನ್ನು ತಜ್ಞರು ನಿರ್ಧರಿಸುತ್ತಾರೆ. ಮೇಲಾಗಿ ಈ ಹಿಂದೆಯೂ ಹೆಚ್ಚುವರಿ ಪರಿಷ್ಕರಣೆ ನಡೆದಿದೆ ಎಂದು ಅವರು ಹೇಳಿದರು.

ಪಠ್ಯಪುಸ್ತಕ ಪರಿಷ್ಕರಣೆ ಮಾಡುತ್ತೇವೆ ಎಂದು ಪ್ರಣಾಳಿಕೆಯಲ್ಲಿ ಹೇಳಿದ್ದೆವು. ಮಕ್ಕಳ ಹಿತದೃಷ್ಟಿಯಿಂದ ಕ್ರಮ ಕೈಗೊಳ್ಳಲಾಗುವುದು. ಈ ವಿಚಾರದಲ್ಲಿ ಸ್ವತಃ ಮುಖ್ಯಮಂತ್ರಿಗಳೇ ವಿಶೇಷ ಕಾಳಜಿ ವಹಿಸುತ್ತಿರುವುದು ಸಂತಸದ ಸಂಗತಿ. ಇದಲ್ಲದೆ, ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ತೊಡಗುವ ತಜ್ಞರು ಯಾವುದೇ ಪಕ್ಷಗಳಿಗೆ ಸೀಮಿತವಾಗಿಲ್ಲ. ಅವರ ಸಲಹೆಯನ್ನು ಪರಿಗಣಿಸಲಾಗುವುದು ಮತ್ತು ತಪ್ಪು ತಿಳುವಳಿಕೆಯನ್ನು ತಕ್ಷಣವೇ ನಿಲ್ಲಿಸಬೇಕು ಎಂದರು.

ಬೆಂಗಳೂರಿನಲ್ಲಿ ನಡೆದ ಶಿಕ್ಷಕರ ನೇಮಕಾತಿ ಪರಿಸ್ಥಿತಿ ಕುರಿತು ಮಾತನಾಡಿದ ಅವರು, 'ಶಿಕ್ಷಕರ ನೇಮಕಾತಿಯಲ್ಲಿ ಎರಡು ಸಮಸ್ಯೆಗಳಿವೆ. ಕಾನೂನು ಸಮಸ್ಯೆಯಿದ್ದು, ಈ ಸಂಬಂಧ ಅಟಾರ್ನಿ ಜನರಲ್ ಚರ್ಚಿಸಲಿದ್ದಾರೆ. ಎರಡನೆಯದಾಗಿ ಶಿಕ್ಷಕರು ಮತ್ತು ಅತಿಥಿ ಶಿಕ್ಷಕರ ಕೊರತೆಯಿದೆ. ಆದ್ದರಿಂದ ಸಾಧ್ಯವಾದಷ್ಟು ಬೇಗ ಅದನ್ನು ಪರಿಹರಿಸಲಾಗುವುದು' ಎಂದು ಹೇಳಿದರು.

ರಾಜ್ಯದಲ್ಲಿ ವರ್ಗಾವಣೆ ದಂಧೆ: ಪ್ರತಿ ಹುದ್ದೆಗೂ ರೇಟ್ ಫಿಕ್ಸ್

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ವಾಗ್ದಾಳಿ



ಬೆಂಗಳೂರು, ಜೂ.8(ಕೆಎಂಶಿ)– ರಾಜ್ಯದಲ್ಲಿ ವರ್ಗಾವಣೆ ದಂಧೆ ಶುರುವಾಗಿದ್ದು, ಪ್ರತಿ ಹುದ್ದೆಗೂ ರೇಟ್ ಫಿಕ್ಸ್ ಮಾಡಲಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನೇರ ಆರೋಪ ಮಾಡಿದರು.

ಪಕ್ಷದ ಕೇಂದ್ರ ಕಚೇರಿ ಜೆಪಿ ಭವನದಲ್ಲಿ ವಿವಿಧ ಜಿಲ್ಲೆಗಳ ಮುಖಂಡರ ಆತ್ಮಾವಲೋಕನ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದಿನ ಬಿಜೆಪಿ ಸರ್ಕಾರವನ್ನು ಟೀಕೆ ಮಾಡುತ್ತಿದ್ದ ಇದೇ ಕಾಂಗ್ರೆಸ್ ನಾಯಕರು ಈಗ ಪ್ರತಿ ಹುದ್ದೆಗೆ ರೇಟ್ ಫಿಕ್ಸ್ ಮಾಡಿದ್ದಾರೆ. ಹಿಂದಿನ ಮುಖ್ಯಮಂತ್ರಿಗಳ ಬಗ್ಗೆ ಇವರೇ ಪೇ ಸಿಎಂ ಎಂದು ಪ್ರಚಾರ ಮಾಡಿದರು. ಆದರೆ, ಅದಕ್ಕಿಂತ ಜಾಸ್ತಿ ಈ ಸರ್ಕಾರ ನಡೆಸುತ್ತಿದೆ. ಇದನ್ನು ಎಷ್ಟು ಪರ್ಸೆಂಟ್ ಸರ್ಕಾರ ಎಂದು ಕರೆಯಬೇಕು? ಎಂದು ಕುಮಾರಸ್ವಾಮಿ ಖಾರವಾಗಿ ಪ್ರಶ್ನಿಸಿದರು.

ಪೇ ಸಿಎಂ ಪ್ರಚಾರ ನಡೆಸಿದ್ದ ಇವರ ಬಗ್ಗೆಯೂ ನಾವು ಹಾದಿ ಬೀದಿಯಲ್ಲಿ ಪ್ರಚಾರ ನಡೆಸಬೇಕಿದೆ. ಗೋಡೆಗಳ ಮೇಲೆ ಪೋಸ್ಟರ್ ಅಂಟಿಸಬೇಕಿದೆ. ಸ್ವತಃ ಅಧಿಕಾರಿಗಳಲ್ಲೇ ರೇಟ್ ಫಿಕ್ಸ್ ಆಗಿದೆ ಅಂತ ಮಾತಾಡ್ತಾ ಇದ್ದಾರೆ ಎಂದು ದೂರಿದರು. ಈಗ ಇವರು ಏನು ಮಾಡ್ತಾ ಇದ್ದಾರೆ ಎನ್ನುವುದನ್ನು ಜನ ಗಮನಿಸುತ್ತಿದ್ದಾರೆ. ಇದನ್ನು ಸಾಬೀತು ಮಾಡಿ ಅಂದರೆ ಹೇಗೆ ಮಾಡೋದು. ಹಿಂದೆ 40% ಆರೋಪವನ್ನು ಸಾಬೀತು ಮಾಡಿದ್ದರಾ ಎಂದು ಪ್ರಶ್ನಿಸಿದ ಅವರು, ಈಗ ಅವರದೇ ಸರ್ಕಾರ ಬಂದಿದೆ, ಪರ್ಸೆಂಟೇಜ್ ಆರೋಪವನ್ನು ಸಾಬೀತು ಮಾಡಲಿ ಎಂದು ಸವಾಲು ಹಾಕಿದರು.

ಬಿಡಿಎ ಸೇರಿದಂತೆ ಹತ್ತು ನಗರಾಭಿವೃದ್ಧಿ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾಗಿ ಹಿರಿಯ ಐಎಎಸ್ ಅಧಿಕಾರಿ ರಾಕೇಶ್ ಸಿಂಗ್ ನೇಮಕ

ಇವುಗಳಲ್ಲಿ ಅಧಿಕಾರ ಹಿಡಿಯಲು ಲಾಬಿ ಮಾಡುತ್ತಿದ್ದ ಮಾಜಿ ಸಚಿವರು, ಶಾಸಕರಿಗೆ ಭಾರಿ ನಿರಾಸೆ

ಬೆಂಗಳೂರು, ಜೂ.8(ಕೆಎಂಶಿ)– ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) ಸೇರಿದಂತೆ ಹತ್ತು ವಿವಿಧ ನಗರಾಭಿವೃದ್ಧಿ ಮತ್ತು ಯೋಜನಾ ಪ್ರಾಧಿಕಾರಗಳ ಅಧ್ಯಕ್ಷರಾಗಿ ಹಿರಿಯ ಐಎಎಸ್ ಅಧಿಕಾರಿ ರಾಕೇಶ್ ಸಿಂಗ್ ಅವರನ್ನು ರಾಜ್ಯ ಸರ್ಕಾರ ನೇಮಕ ಮಾಡಿದೆ.



ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತಾಧಿಕಾರಿಯಾಗಿರುವ ರಾಕೇಶ್ ಸಿಂಗ್ ಅವರನ್ನು ವಿವಿಧ ಯೋಜನಾ ಪ್ರಾಧಿಕಾರಗಳ ಅಧ್ಯಕ್ಷರನ್ನಾಗಿಯೂ ನೇಮಕ ಮಾಡಿ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಇದು ರಾಜಕೀಯ ವಲಯ ಹಾಗೂ ಅಧಿಕಾರಿ ವರ್ಗದಲ್ಲಿ ಹುಬ್ಬೇರಿಸುವಂತೆ ಮಾಡಿದೆ. ರಾಕೇಶ್‌ಸಿಂಗ್ ಅವರನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧ್ಯಕ್ಷಗಾದಿ ಜೊತೆಗೆ ಹತ್ತು ಯೋಜನಾ ಪ್ರಾಧಿಕಾರಗಳ ಅಧ್ಯಕ್ಷರನ್ನಾಗಿಯೂ ನೇಮಕ ಮಾಡಿ ಸರ್ಕಾರ ತಕ್ಷಣದಿಂದಲೇ ಜಾರಿಗೆ ಬರುವಂತೆ ಆದೇಶಿಸಿದೆ. ಬಿಡಿಎ, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನವಲ್ಲದೆ, ಆನೇಕಲ್ ಯೋಜನಾ ಪ್ರಾಧಿಕಾರ, ಹೊಸಕೋಟೆ ಯೋಜನಾ ಪ್ರಾಧಿಕಾರ, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ, ಮಾಗಡಿ, ಚನ್ನಪಟ್ಟಣ, ಕನಕಪುರ, ನೆಲಮಂಗಲ, ಉಪನಗರ ವರ್ತುಲ ರಸ್ತೆ ಯೋಜನೆ ಹಾಗೂ ಗ್ರೇಟರ್ ಬೆಂಗಳೂರು–ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರಗಳ ಅಧ್ಯಕ್ಷ ಸ್ಥಾನಗಳನ್ನು ರಾಕೇಶ್ ಸಿಂಗ್ ಅವರಿಗೆ ನೀಡಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನದ ನಿರೀಕ್ಷೆಯಲ್ಲಿ ಸಚಿವ ಸ್ಥಾನ ಸಿಗದ ಹಲವು ಶಾಸಕರಿದ್ದರು. ರಾಕೇಶ್ ಸಿಂಗ್ ನೇಮಕದಿಂದ ಬಿಡಿಎ ಅಧ್ಯಕ್ಷಗಾದಿ ಮೇಲೆ ಆಸೆ ಇಟ್ಟುಕೊಂಡು ಲಾಬಿ ಮಾಡುತ್ತಿದ್ದ ಮಾಜಿ ಸಚಿವರು ಮತ್ತು ಶಾಸಕರಿಗೆ ತೀವ್ರ ನಿರಾಸೆ ಉಂಟಾಗಿದೆ. ಸರ್ಕಾರ ಬಿಡಿಎ ಅಧ್ಯಕ್ಷ ಸ್ಥಾನವನ್ನು ರಾಜಕಾರಣಿಗಳಿಗೆ ನೀಡುವ ಬದಲು ಹಿರಿಯ ಅಧಿಕಾರಿಗೆ ಮಣೆ ಹಾಕಿದೆ.

ಇಂದಿನಿಂದ ಗಣಾರಾಧನಾ ಮಹೋತ್ಸವ

ಮೈಸೂರು, ಜೂ.8–ಮೈಸೂರಿನ ಅಗ್ರಹಾರ ಬಸವೇಶ್ವರ ರಸ್ತೆ ಶ್ರೀ ಕುದೇರು ಮಠದಲ್ಲಿ ಶ್ರೀ ಗುರುಲಿಂಗಸ್ವಾಮಿಗಳ 32ನೇ ವಾರ್ಷಿಕ ಗಣಾರಾಧನಾ ಮಹೋತ್ಸವ ಜೂ.9 ಹಾಗೂ 10ರಂದು ನಡೆಯಲಿದೆ. ಶ್ರೀ ಮನ್ನಿರಂಜನ ಮಹಾತ್ಮ ಶ್ರೀ ಗುರುಮಲ್ಲೇಶ್ವರ ಮಹಾಪ್ರಭುಗಳವರ 124ನೇ ಪ್ರಮಥರ ಗಣಾರಾಧನೆ ಹಾಗೂ ಲಿಂಗೈಕ್ಯ ಶ್ರೀ ಗುರುಲಿಂಗಸ್ವಾಮಿಗಳ 32ನೇ ಗಣಾರಾಧನಾ ಸಮಾರಂಭದ ಅಂಗವಾಗಿ ಶುಕ್ರವಾರ ಸಂಜೆ 7ಕ್ಕೆ ಶ್ರೀ ಬಸವೇಶ್ವರಮೂರ್ತಿ ಹಾಗೂ ಶ್ರೀ ಗುರುಮಲ್ಲೇಶ್ವರ ಮೂರ್ತಿ ಮೆರವಣಿಗೆ ನೆರವೇರಲಿದೆ. ಜೂ.10 ರಂದು ಮುಂಜಾನೆ 4 ಗಂಟೆಯಿಂದಲೇ ವಿಶೇಷ ಪೂಜಾ ಕೈಂಕರ್ಯಗಳು ನಡೆಯಲಿದ್ದು, ಬೆಳಗ್ಗೆ 8ಕ್ಕೆ ಷಟ್‌ಸ್ಥಲ ಧ್ವಜಾರೋಹಣ, 10ಕ್ಕೆ ದಿವ್ಯ ಪಾದಪೂಜೆ ನೆರವೇರಲಿದೆ. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಸೇರಿದಂತೆ ವಿವಿಧ ಮಠಾಧೀಶರು ಭಾಗವಹಿಸಲಿದ್ದಾರೆ.

ಶಿವಪ್ರಸಾದ್‌ಗೆ ಪಿಹೆಚ್.ಡಿ ಪದವಿ



ಮೈಸೂರು,ಜೂ.8–ಡಾ.ಕೆ.ಎಸ್.ಕೀರ್ತಿಪ್ರಸಾದ್ ಅವರ ಮಾರ್ಗದರ್ಶನದಲ್ಲಿ ಎಸ್.ಶಿವಪ್ರಸಾದ್ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಆಧುನಿಕ ಕರ್ನಾಟಕದ ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 139ನೇ ಜಯಂತಿಯನ್ನು ಗೋಕುಲಂನ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಆಚರಿಸಲಾಯಿತು. ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ವಿ.ಮಧು, ಎಸ್.ಬಿ.ಶಿವು, ಫಾಲ್ಕನ್ ಪ್ರಸನ್ನ, ಆನಂದ, ರಮೇಶ್, ಸೀನಪ್ಪ, ಸಿ.ಡಿ.ಕುಮಾರ್, ಸಿ.ಸಂತೋಷ, ಪ್ರಕಾಶ್, ಮಹೇಶ್ ಮತ್ತಿತರರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ. 8– ಮೈಸೂರಿನ ಶ್ರೀ ಕೃಷ್ಣ ಮಿತ್ರ ಮಂಡಳಿಯು ಜಿಲ್ಲೆಯ ಪ್ರತಿಭಾವಂತ ತ್ರಿಮತಸ್ಥ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ. 2022–23ನೇ ಸಾಲಿನ ಶೈಕ್ಷಣಿಕ ವರ್ಷದ ಸ್ಟೇಟ್ ಹಾಗೂ ಸೆಂಟ್ರಲ್ ಸಿಲಬಸ್ ಪಠ್ಯಕ್ರಮ ಆಧಾರಿತವಾಗಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ. 96ಕ್ಕಿಂತ ಹೆಚ್ಚು ಅಂಕ ಗಳಿಸಿ ತೇರ್ಗಡೆ ಹೊಂದಿದ ಸಮುದಾಯದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅರ್ಜಿಯನ್ನು ಜೂ. 15ರಂದು ಸಂಜೆ 5 ಗಂಟೆಯೊಳಗೆ ಅಂಕಪಟ್ಟಿಯೊಂದಿಗೆ ಸಲ್ಲಿಸಬಹುದು. ಮಾಹಿತಿಗೆ ದೂರವಾಣಿ 0821–2544004 ಸಂಪರ್ಕಿಸಬಹುದು.

ಆ.1ರಿಂದ ಸಚಿವ ಜಮೀರ್ ಅಹಮದ್ ಜನತಾ ದರ್ಶನ; ಜನಗಳ ಬಳಿಗೇ ಹೋಗಿ ಅಹವಾಲು ಸ್ವೀಕಾರ, ಪರಿಹಾರಕ್ಕೆ ನಿರ್ಧಾರ

ಪ್ರತಿ ತಿಂಗಳು ಒಂದೊಂದು ಜಿಲ್ಲೆಯಲ್ಲಿ 2 ದಿನ ಜನತಾ ದರ್ಶನ

ಬೆಂಗಳೂರು, ಜೂ.8 (ಕೆಎಂಶಿ)–ರಾಜ್ಯಾದ್ಯಂತ ಜಿಲ್ಲಾ ಮಟ್ಟದಲ್ಲಿ ಆಗಸ್ಟ್ ಒಂದರಿಂದ ಜನತಾ ದರ್ಶನ ಆರಂಭಿಸುವುದಾಗಿ ವಸತಿ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ ಸಚಿವ ಜಮೀರ್ ಅಹಮದ್ ಇಂದಿಲ್ಲಿ ಘೋಷಿಸಿದ್ದಾರೆ.

ವಸತಿ ಹಾಗೂ ಅಲ್ಪಸಂಖ್ಯಾತರ ಇಲಾಖೆ ವ್ಯಾಪ್ತಿಯ ಸವಲತ್ತು ಮತ್ತು ಸೌಲಭ್ಯಗಳಿಗಾಗಿ ಸಾರ್ವಜನಿಕರು ಬೆಂಗಳೂರಿನವರೆಗೆ ಬರುವುದನ್ನು ತಪ್ಪಿಸಲು ಜನರ ಬಳಿಗೆ ನಾನೇ ಹೋಗಲು ನಿರ್ಧರಿಸಿದ್ದೇನೆ ಎಂದರು.

ಕೊಳಗೇರಿ ಅಭಿವೃದ್ಧಿ ಮಂಡಳಿಯ ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದ ಅವರು, ಪ್ರತಿ ತಿಂಗಳು ಒಂದೊಂದು ಜಿಲ್ಲೆಯಲ್ಲಿ ಎರಡು ದಿನ ಜನತಾ ದರ್ಶನ ನಡೆಸಲಿದ್ದೇನೆ. ಜಿಲ್ಲೆ ವ್ಯಾಪ್ತಿಯ ಎರಡೂ ಇಲಾಖೆಗಳ ಎಲ್ಲ ತಾಲೂಕು ಮಟ್ಟದ ಅಧಿಕಾರಿಗಳು ಅಲ್ಲಿರಲಿದ್ದಾರೆ ಎಂದು ಹೇಳಿದರು.

ಆಗಸ್ಟ್ ಒಳಗೆ ಎರಡೂ ಇಲಾಖೆಗಳಿಗೆ ಸಂಬಂಧಿಸಿದ ಯಾವುದೇ ಸಮಸ್ಯೆ ಇದ್ದರೆ ಪರಿಹರಿಸಲು ಅಧಿಕಾರಿಗಳಿಗೆ ಎರಡು ತಿಂಗಳ ಗಡುವು ನೀಡುತ್ತಿದ್ದೇನೆ ಎಂದು ಸೂಚನೆ ನೀಡಿದರು.



ಜನತಾ ದರ್ಶನ ಸಂದರ್ಭದಲ್ಲಿ ಏನಾದರೂ ಸಮಸ್ಯೆ ಕಂಡು ಬಂದರೆ ಅಥವಾ ಅಧಿಕಾರಿಗಳ ಮಟ್ಟದಲ್ಲಿ ತಪ್ಪು ನಡೆದಿದ್ದರೆ ದೂರುಗಳು ಬಂದರೆ ಅಂತಹವರ ವಿರುದ್ಧ ಸ್ಥಳದಲ್ಲೇ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಗೃಹಮಂಡಳಿ, ರಾಜೀವ್ ಗಾಂಧಿ ವಸತಿ ನಿಗಮ, ಕೊಳಗೇರಿ ಅಭಿವೃದ್ಧಿ ಮಂಡಳಿ, ಅಲ್ಪಸಂಖ್ಯಾತರ ಇಲಾಖೆಗೆ ಸಂಬಂಧಿಸಿದ ಕಾರ್ಯಕ್ರಮಗಳು ಮತ್ತು ಯೋಜನೆಗಳು ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಯಾವುದೇ ದುರುಪಯೋಗ ಇಲ್ಲದಂತೆ ಜಾರಿಗೊಳಿಸುವ ಹೊಣೆಗಾರಿಕೆ ಅಧಿಕಾರಿಗಳ ಮೇಲಿದೆ. ಕೊಳೇಗೇರಿಗಳಲ್ಲಿ ವಾಸಿಸುತ್ತಿರುವ ಲಕ್ಷಾಂತರ ಜನರು ಕಡುಬಡವರಿದ್ದು, ನೀವು ಮಾಡುವ ಕೆಲಸ ದೇವರು ಮೆಚ್ಚುವಂತೆ ಇರಬೇಕು ಎಂದು ಕಿವಿಮಾತು ಹೇಳಿದರು.

ಎರಡೂ ಇಲಾಖೆಗಳು ಬಡ ಹಾಗೂ ಮಧ್ಯಮ ವರ್ಗದ ಜನರ ಕಲ್ಯಾಣಕ್ಕೆ ಇರುವ ಇಲಾಖೆಗಳು. ಇಲ್ಲಿ ಕೆಲಸ ಮಾಡುವುದು ಪುಣ್ಯದ ಕೆಲಸ ಎಂದರು.

ರಾಜ್ಯದಲ್ಲಿ ಹೊಸದಾಗಿ ಘೋಷಿಸಿರುವ ಬೆಂಗಳೂರಿನ 25 ಸೇರಿದಂತೆ 154 ಕೊಳೆಗೇರಿಗಳಲ್ಲಿ ಮೂಲಸೌಕರ್ಯ ಸೇರಿ ಇತರೆ ಅಭಿವೃದ್ಧಿ ಕಾರ್ಯ ಒಂದು ತಿಂಗಳಲ್ಲಿ ಪ್ರಾರಂಭಿಸಬೇಕು. ತಿಂಗಳ ಗಡುವು ನಂತರ ನಾನೇ ಖುದ್ದಾಗಿ ದಿಢೀರ್ ಭೇಟಿ ನೀಡಿ ಪರಿಶೀಲಿಸುತ್ತೇನೆ ಎಂದು ತಿಳಿಸಿದರು.

ಕೊಳೇಗೇರಿ ಅಭಿವೃದ್ಧಿ ಮಂಡಳಿಗೆ ಅನುದಾನ ಕಡಿಮೆ ಇದ್ದು ನಿರೀಕ್ಷಿತ ಪ್ರಮಾಣದಲ್ಲಿ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ. ಚಾಲ್ತಿ ಯೋಜನೆಗಳಿಗೂ ಅನುದಾನ ಕೊರತೆ ಇದೆ. ಸಿಬ್ಬಂದಿಗೆ ವೇತನ ಭತ್ಯೆಗೂ ಕಷ್ಟ ಆಗಿದೆ ಎಂದು ಸಭೆಯಲ್ಲಿ ಪ್ರಸ್ತಾಪ ಆದಾಗ ಮಧ್ಯ ಪ್ರವೇಶ ಮಾಡಿದ ಸಚಿವರು, ಬಜೆಟ್‌ಗೆ ಮುನ್ನ ಯಾವೆಲ್ಲಾ ಯೋಜನೆ ಕಾರ್ಯಕ್ರಮಗಳಿಗೆ ಅನುದಾನದ ಅಗತ್ಯ ಇದೆ ಎಂಬುದರ ಬಗ್ಗೆ ಪ್ರಸ್ತಾವನೆ ಸಲ್ಲಿಸಿ ಕೊಳೇಗೇರಿ ಅಭಿವೃದ್ಧಿ ಮಂಡಳಿಗೆ ವಾರ್ಷಿಕ 500 ಕೋಟಿ ರೂ. ಅನುದಾನಕ್ಕೆ ಸರ್ಕಾರದ ಮುಂದೆ ಬೇಡಿಕೆ ಇಡೋಣ ಎಂದು ಸೂಚಿಸಿದರು.

ಪ್ರಸ್ತುತ ಮಂಡಳಿ ಬಳಿ ಇರುವ 49 ಕೋಟಿ ರೂ. ಕೊಳೇಗೇರಿಗಳಲ್ಲಿ ತುರ್ತು ಅಭಿವೃದ್ಧಿ ಕಾರ್ಯಗಳಿಗೆ ಬಳಕೆ ಮಾಡಿಕೊಳ್ಳಿ ಎಂದು ನಿರ್ದೇಶನ ನೀಡಿದರು.

ಕೊಳೇಗೇರಿ ಅಭಿವೃದ್ಧಿ ಮಂಡಳಿ ಬೇರೆ ಬೇರೆ ಇಲಾಖೆಗಳಿಗೆ ಕಟ್ಟಡ ನಿರ್ಮಾಣ ಕಾರ್ಯದ ಉಸ್ತುವಾರಿ ವಹಿಸಿದರೆ ಯೋಜನಾ ಮೊತ್ತದ ಶೇ.10ರಷ್ಟು ಸೇವಾ ಶುಲ್ಕ ಪಡೆಯಲು ನಿರ್ಣಯ ಕೈಗೊಳ್ಳಿ. ಇದರಿಂದ ಮಂಡಳಿಗೆ ಆರ್ಥಿಕವಾಗಿ ಶಕ್ತಿ ಬರುತ್ತದೆ ಎಂದು ಜಮೀರ್ ಅಹಮದ್ ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ 90 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಕೊಳೇಗೇರಿ ಅಭಿವೃದ್ಧಿ ಮಂಡಳಿಯ ನೂತನ ಸಮುಚ್ಚಯ ಕಾಮಗಾರಿ ವೀಕ್ಷಿಸಿ ಆದಷ್ಟು ಬೇಗ ಪೂರ್ಣ ಗೊಳಿಸುವಂತೆ ನಿರ್ದೇಶನ ನೀಡಿದರು. ಪ್ರಗತಿ ಪರಿಶೀಲನೆಗೆ ಗೈರು ಹಾಜರಾದ ಅಧಿಕಾರಿಗಳ ವಿರುದ್ಧ ಸಿಡಿಮಿಡಿ ಗೊಂಡ ಜಮೀರ್ ಅಹಮದ್, ಮೇಲಧಿಕಾರಿಗಳ ಅನುಮತಿ ಪಡೆಯದೇ ಸಕಾಲಿಕ ಕಾರಣ ಕೊಡದೇ ಗೈರು ಹಾಜರಾದವರ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಸೂಚಿಸಿದರು. ಇದೇ ವೇಳೆ ಆಯುಕ್ತರ ಅನುಮತಿ ಪಡೆಯದೆ ಸಭೆಗೆ ಗೈರು ಆಗಿದ್ದ ಮಂಡ್ಯ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರ ದರ್ಶನ್ ಜೈನ್ ಅವರನ್ನು ಅಮಾನತು ಮಾಡುವಂತೆ ಸ್ಥಳದಲ್ಲೇ ಆದೇಶಿಸಿದರು.





ಬುಧವಾರ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ಪಾಲಿಕೆ 44ನೇ ವಾರ್ಡಿನ ಜೆಡಿಎಸ್ ಮುಖಂಡ, ಸಮಾಜ ಸೇವಕ ಸುರೇಶ್ ಅವರನ್ನು ಯೋಗಾದಿ 2ನೇ ಹಂತದ ದುರ್ಗಾ ಗ್ರೂಪ್ ಸ್ನೇಹಿತರು ಅಭಿನಂದಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಕೆ.ಚಂದ್ರಶೇಖರ್, ವಕೀಲ ಸಿದ್ದರಾಜು, ಆನಂದ್, ಕೇಬಲ್ ರವಿ, ರಾಜು, ಟೆಂಟ್ ರವಿ, ತೋಂಟದಾರ್ಯ, ಶ್ಯಾಮ್, ಶಂಭೇಗೌಡ, ಶಿವು, ಸ್ವಾಮಿ, ಮಂಜು, ಲೋಕೇಶ್, ಮಹೇಶ್ ಇದ್ದಾರೆ. ಇದೇ ವೇಳೆ ಮರಟಿಕ್ಯಾತನಹಳ್ಳಿಯ ಸ್ನೇಹಿತರಾದ ಅಂಗಡಿ ಶೇಖರ್, ಸತೀಶ್, ಶೇಖರ್, ಫೋಟೋ ಕುಮಾರ್, ದಿನೇಶ್, ಸ್ವಾಮಿ ಸಹ ಅಭಿನಂದಿಸಿದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : "ಕೋಲಾರದಲ್ಲಿ ಚಿನ್ನದ ಗಣಿ ಇದೆ. ಕುದುರೆ ಮುಖದಲ್ಲಿ ಏನಿದೆ?"

ಓರ್ವ ವಿದ್ಯಾರ್ಥಿ : "ಕಣ್ಣು, ಕಿವಿ, ಬಾಯಿ, ಮೂಗು ಎಲ್ಲಾ ಇದೆ. ನೀವು ಕುದುರೆ ಮುಖ ನೋಡಿಲ್ವಾ ಟೀಚರ್"

ಮೈಸೂರು ಮಿತ್ರ
ಶುಕ್ರವಾರ, 9 ಜೂನ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಅನುಭವವು ಮನುಷ್ಯನ ಮುಂದಿನ ಮಾರ್ಗಕ್ಕೆ ಬೆಳಕಿನಂತೆ. –ಸುಭಾಷಿತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪಂಜರದಲ್ಲಿ ಕಾಗೆ ಇಟ್ಟರೆ ಪಂಚಮ ಸ್ವರ ಕೊಟ್ಟೀತೆ?

ನಿಮ್ಮ ಪತ್ರಗಳು

ಸರ್ದಾರ್ ವಲ್ಲಭಬಾಯ್ ಪಟೇಲ್ ನಗರದ ಸಮಸ್ಯೆ ಬಗೆಹರಿಸಿ

ಮಾನ್ಯರೇ,

ಮೈಸೂರು ನಗರದ ಹೊರವಲಯದಲ್ಲಿರುವ ಸರ್ದಾರ್ ವಲ್ಲಭಭಾಯ್ ಪಟೇಲ್ ನಗರದ ನಿವಾಸಿಗಳ ಗೋಳು ಹೇಳತೀರದಾಗಿದೆ.

ಇಲ್ಲಿ ಹತ್ತಾರು ಸಮಸ್ಯೆಗಳು ತುಂಬಿ ತುಳುಕುತ್ತಿವೆ. ಅದರಲ್ಲಿ ಮುಖ್ಯವಾಗಿ ಬೀದಿ ನಾಯಿಗಳ ಹಾವಳಿ. ಜೊತೆಗೆ ಖಾಲಿ ನಿವೇಶನದಲ್ಲಿ ಅನಧಿಕೃತವಾಗಿ ತಲೆ ಎತ್ತಿರುವ ನಾಯಿ ಮನೆ. ಪಕ್ಕದ ಮನೆಯನ್ನು ಬಾಡಿಗೆಗೆ ಪಡೆದು 40–60 ಅಳತೆಯ ಸಂಪೂರ್ಣ ನಿವೇಶನವನ್ನು ನಾಯಿಗಾಗಿಯೇ ಮೀಸಲಿರಿಸಿದ್ದಾರೆ. ಇದರಿಂದಾಗಿ ಅಕ್ಕ ಪಕ್ಕದ 3–4 ಬೀದಿಯ ಜನರಿಗೆ ನೆಮ್ಮದಿಯ ನಿದ್ದೆ ಇಲ್ಲದೆ ತಿಂಗಳುಗಳು ಕಳೆದಿವೆ. ಮಕ್ಕಳಿಗೆ ಓದಲು ತುಂಬಾ ಕಷ್ಟವಾಗುತ್ತಿದೆ. ಅಲ್ಲಿನ ತ್ಯಾಜ್ಯವನ್ನು ವಿಲೇವಾರಿ ಮಾಡದ ಕಾರಣ ಸಾಂಕ್ರಾಮಿಕ ರೋಗ ಭೀತಿಯಲ್ಲಿಯೇ ಬದುಕುವಂತಾಗಿದೆ. ಮನೆಯ ಮಾಲೀಕರು ಮನೆ ಖಾಲಿ ಮಾಡಿ ಎಂದರೂ ಬಾಡಿಗೆ ಮನೆಯ ವಾಯಿದೆ ಮುಗಿದಿದ್ದರೂ ಮನೆ ಖಾಲಿ ಮಾಡದೆ ಅನಧಿಕೃತವಾಗಿ ಬಾಡಿಗೆ ಮನೆಯಿಂದಲೇ ವಿದ್ಯುತ್ ಲೈನ್ ಎಳೆದುಕೊಂಡು ಬಳಸುತ್ತಿದ್ದಾರೆ. ಪೊಲೀಸಿನವರು, ಪಟ್ಟಣ ಪಟ್ಟಣ ಪಂಚಾಯಿತಿಯವರು ಯಾರೂ ಕೂಡ ದೂರು ದಾಖಲಿಸಿಕೊಳ್ಳುತ್ತಿಲ್ಲ. ನಾಯಿ ಮಾಲೀಕರಲ್ಲಿ ವಿನಂತಿಸಿಕೊಂಡರೂ ಯಾವುದೇ ಪ್ರಯೋಜನವಾಗಿಲ್ಲ. ಬದಲಿಗೆ ನನ್ನ ಜಾಗ ನಾನು ಏನಾದರು ಮಾಡುತ್ತೇನೆ. ಕೇಳಲು ನೀವು ಯಾರು ಎಂಬ ದರ್ಪದ ಮಾತುಗಳು. ನಾಯಿಯ ವಿಚಾರಕ್ಕೇ ನಿರಂತರವಾಗಿ ನಡೆಯುತ್ತಿರುವ ಜಗಳಗಳಿಂದಾಗಿ ನೆಮ್ಮದಿಯೇ ಇಲ್ಲದಂತಾಗಿದೆ. ನಮ್ಮೆಲ್ಲರಲ್ಲೂ ಕಾಡುತ್ತಿರುವ ಪ್ರಶ್ನೆಗಳೆಂದರೆ ನಗರ ವಾಸಿಗಳು ವಾಸಿಸಲೆಂದೇ ನಿರ್ಮಿಸಿರುವ ಬಡಾವಣೆಗಳಲ್ಲಿ ಫಾರಂ ಹೌಸ್ ರೀತಿಯಲ್ಲಿ ನಾಯಿ ಸಾಕಾಣಿಕೆಗೆ ಅವಕಾಶವಿದೆಯೇ? ಒಬ್ಬರು ಇಬ್ಬರಿಗೆ ಹೀಗೆ ಅವಕಾಶಗಳನ್ನು ನೀಡಿದರೆ ಕೇವಲ ನಾಯಿಗಾಗಿಯೇ ಮನೆ ಮಾಡಿ ಸಾಕಾಣಿಕೆ ಮಾಡುವವರ ಸಂಖ್ಯೆ ಹೆಚ್ಚಾಗುವುದಿಲ್ಲವೇ? ಇದಕ್ಕೊಂದು ಶಾಶ್ವತವಾದ ಪರಿಹಾರ ದೊರಕಿಸಿ ಕೊಡಬೇಕೆಂದು ಸಂಬಂಧಪಟ್ಟವರಲ್ಲಿ ಮನವಿ.

–ನೊಂದ ಸರ್ದಾರ್ ವಲ್ಲಭಭಾಯಿ ಪಟೇಲ್ ನಗರದ ನಿವಾಸಿಗಳು, ಮೈಸೂರು.

ರಾಜೀವ್‌ನಗರದಲ್ಲಿ ಚೆಸ್ಕಾಂ ತುರ್ತು ನಿರ್ವಹಣಾ ಸಿಬ್ಬಂದಿ, ಸರ್ವೀಸ್ ವಾಹನ ಒದಗಿಸಿ

ಮಾನ್ಯರೆ,

ಮೈಸೂರಿನ ರಾಜೀವ್‌ನಗರವು ವಿಶಾಲವಾದ, ಹೆಚ್ಚಿನ ಜನಸಂಖ್ಯೆಯುಳ್ಳ ಪ್ರದೇಶವಾಗಿದ್ದು, ಇಲ್ಲಿ ಲಕ್ಷಾಂತರ ಜನರು ವಾಸಿಸುತ್ತಿದ್ದಾರೆ. ಅನೇಕ ಶಿಕ್ಷಣ ಸಂಸ್ಥೆಗಳೂ ಇವೆ. ಈ ಪ್ರದೇಶದಲ್ಲಿ ಸಾರ್ವಜನಿಕರು ತಮ್ಮ ವಿದ್ಯುತ್ ಸ್ಥಗಿತ, ತಂತಿಗಳ ಜೋಡಣೆ ಸಡಿಲ ಇತ್ಯಾದಿಗಳ ಸಮಸ್ಯೆಗಳಿಗೆ ಚೆಸ್ಕಾಂ ಸಿಬ್ಬಂದಿಗಳಿಗೆ ದೂರು ನೀಡಿದಾಗ ಅವರು ತಕ್ಷಣ ಆಗಮಿಸಿ ಸರಿಪಡಿಸುವುದಿಲ್ಲ. ಒಂದು ಸಣ್ಣ ತೊಂದರೆಗೂ ದಿನಗಟ್ಟಲೆ ಕಾಯುವ ಪರಿಸ್ಥಿತಿ ಇದೆ. ಚೆಸ್ಕಾಂ ಸಿಬ್ಬಂದಿಗೆ ದೂರು ನೀಡಿದರೆ, ಅವರು ಮತ್ತೊಬ್ಬರನ್ನು ಸಂಪರ್ಕಿಸಿ ಎಂದು ಹೇಳಿ ನುಣುಚಿಕೊಳ್ಳುತ್ತಾರೆ. ಚೆಸ್ಕಾಂ ಕಛೇರಿಯಲ್ಲಿ ಬಿಲ್ ಕಲೆಕ್ಟರ್ ಬಿಟ್ಟರೆ, ಸಾರ್ವಜನಿಕರ ದೂರುಗಳನ್ನು ಸ್ವೀಕರಿಸುವ ಸಿಬ್ಬಂದಿ ಇರುವುದಿಲ್ಲ.

ಆದ ಕಾರಣ ಚೆಸ್ಕಾಂ ಅಧೀಕ್ಷರು ಈ ಬಗ್ಗೆ ಕೂಡಲೇ ಗಮನಹರಿಸಿ, ಈ ಪ್ರದೇಶಕ್ಕೆ ಹೆಚ್ಚಿನ ಲೈನ್‌ಮನ್ ಮತ್ತು ತುರ್ತು ನಿರ್ವಹಣಾ ಸಿಬ್ಬಂದಿಗಳನ್ನು ನಿಯೋಜಿಸಿ, ಹೆಚ್ಚಿನ ಸರ್ವಿಸ್ ವಾಹನಗಳನ್ನು ಒದಗಿಸಿಕೊಟ್ಟು, ಸಾರ್ವಜನಿಕರ ದೂರುಗಳನ್ನು ಶೀಘ್ರವಾಗಿ ಪರಿಹರಿಸಿಕೊಡಬೇಕಾಗಿ, ಹಾಗೂ ಪ್ರತಿ ತಿಂಗಳು ಸಾರ್ವಜನಿಕ ಕುಂದುಕೊರತೆಗಳ ಸಭೆಗಳನ್ನು ಕರೆಯಬೇಕಾಗಿ, ಉದಯಗಿರಿ ಪಿ&ಟಿ ಕ್ವಾಟ್ರಸ್ ಮತ್ತು ಸುತ್ತಮುತ್ತಲಿನ ಪ್ರದೇಶದ ನಿವಾಸಿಗಳ ಕಳಕಳಿಯ ಮನವಿ.

–ಮಿರ್ಜಾ ಜಂಷೀದ್ ಬೇಗ್, ವಕ್ತಾರರು

ಬಿಜೆಪಿಯೊಂದಿಗೆ ಜೆಡಿಎಸ್ ಮೈತ್ರಿ ಮರಣಶಾಸನ

ಮಾನ್ಯರೆ,

ಇತ್ತೀಚೆಗೆ ಕೆಲವು ದಿನ ಪತ್ರಿಕೆಗಳಲ್ಲಿ ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಮಾಡಿಕೊಂಡು ಸ್ಪರ್ಧೆ ಮಾಡುತ್ತದೆ ಎಂದು ಹೇಳುತ್ತಿದ್ದಾರೆ. ಇದು ನಿಜವಾದರೆ, ಮೈತ್ರಿ ಮಾಡಿ ಕೊಂಡು ಸ್ಪರ್ಧಿಸಿದರೆ, ಅದು ಜೆಡಿಎಸ್ ಪಾಲಿಗೆ ಮರಣ ಶಾಸನವಿದ್ದಂತೆ, ಜಾತ್ಯತೀತ ನಿಲುವುಳ್ಳ ಪ್ರಾದೇಶಿಕ ಪಕ್ಷವೊಂದು ತನ್ನ ಅಸ್ತಿತ್ವ ಉಳಿಸಿಕೊಳ್ಳಲು ರಾಷ್ಟ್ರೀಯ ಪಕ್ಷದ ಜೊತೆಗೆ ಮೈತ್ರಿ ಮಾಡಿಕೊಳ್ಳುತ್ತಿರುವುದು ಎಷ್ಟರ ಮಟ್ಟಿಗೆ ಸರಿ? ಬಿಜೆಪಿಯನ್ನು ವಿರೋಧ ಕಟ್ಟಿಕೊಂಡು ಗ್ರಾಮೀಣ ಪ್ರದೇಶದಲ್ಲಿ ಪಕ್ಷ ಕಟ್ಟಿದ ಕಾರ್ಯಕರ್ತರ ಗತಿ ಏನಾಗಬೇಡ. ಹೀಗಾದರೆ ಮುಂದಿನ ದಿನಗಳಲ್ಲಿ ಇಲ್ಲಿರುವ ಕಾರ್ಯಕರ್ತರು, ಅರ್ಧದಷ್ಟು ಕಾಂಗ್ರೆಸ್ ಪಕ್ಷಕ್ಕೂ, ಇನ್ನರ್ಧ ಬಿಜೆಪಿಯನ್ನು ಆಶ್ರಯಿಸಬೇಕಾಗಬಹುದು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ರಸ್ತೆಯ ಗುಂಡಿ ಮುಚ್ಚಲು ಮನವಿ



ಮಾನ್ಯರೆ,

ನಂಜನಗೂಡು ತಾಲೂಕಿನ ಹುಲ್ಲಹಳ್ಳಿ – ಮೈಸೂರಿನ ಮುಖ್ಯರಸ್ತೆಯ ಮಾರ್ಗದಲ್ಲಿ ಕಬಿನಿ ನದಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆಯ ರಸ್ತೆಯು ಗುಂಡಿಮಯವಾಗಿದ್ದು, ಕಬ್ಬಿಣದ ಸರಳುಗಳು ಮೇಲ್ಭಾಗಕ್ಕೆ ಕಾಣುತ್ತಿವೆ. ವಾಹನ ಸವಾರರು ಸರ್ಕಸ್ ಮಾಡಿಕೊಂಡು ಜೀವಭಯದಿಂದ ವಾಹನಗಳನ್ನು ಚಲಾಯಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ಸುಮಾರು ವರ್ಷಗಳಿಂದ ಇದೇ ಸ್ಥಿತಿಯಲ್ಲಿದ್ದು, ಸೇತುವೆಯ ಮುಂಭಾಗದ ರಸ್ತೆಯೂ ಕೂಡ ಅನೇಕ ಗುಂಡಿಗಳಿಂದ ಕೂಡಿದೆ. ಮಳೆಗಾಲದಲ್ಲಿ ರಸ್ತೆಯು ಇನ್ನೂ ಹದಗೆಟ್ಟು ಗುಂಡಿ ಕಾಣದೆ, ದ್ವಿಚಕ್ರ ವಾಹನ ಸವಾರರು ಆಯಾ ತಪ್ಪಿ ಬಿದ್ದು ಕೈಕಾಲುಗಳನ್ನು ಮುರಿದುಕೊಂಡಿರುವ ಅನೇಕ ಘಟನೆಗಳು ನಡೆದಿವೆ. ಈ ರಸ್ತೆಯು ಮುಖ್ಯ ರಸ್ತೆ ಆಗಿರುವುದರಿಂದ ಸಾರ್ವಜನಿಕರು, ವಿದ್ಯಾರ್ಥಿಗಳು, ನೌಕರ ವರ್ಗದವರು, ವ್ಯಾಪಾರಸ್ಥರು ಈ ಮಾರ್ಗದಲ್ಲೇ ಸಂಚರಿಸ ಬೇಕಾಗಿರುವುದರಿಂದ ಹಾಗೂ ಹಲವು ಗ್ರಾಮಗಳ ಸಂಪರ್ಕದ ರಸ್ತೆಯಾಗಿರುವುದರಿಂದ ಸುಗಮವಾಗಿ ಸಂಚರಿಸಲು ತುಂಬಾ ಅನಾನುಕೂಲವಾಗುತ್ತದೆ. ಅನೇಕ ಬಾರಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಗಮನಕ್ಕೆ ತಂದಿದ್ದರೂ ಪ್ರಯೋಜನವಾಗಿಲ್ಲ. ಸಂಬಂಧಪಟ್ಟವರು ಗುಂಡಿಗಳನ್ನು ಮುಚ್ಚಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಪತಂಜಲಿಯ ಯೋಗಸೂತ್ರಗಳು

ನವೆಂಬರ್ ತಿಂಗಳಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಕನ್ನಡ ರಾಜ್ಯೋತ್ಸವದ ಸಂಭ್ರಮ ಗರಿಗೆದರುವಂತೆ ಜೂನ್ ತಿಂಗಳಿನಲ್ಲಿ ಸಮಸ್ತ ಭರತ ಖಂಡದಲ್ಲಿ, ಅಷ್ಟೇ ಅಲ್ಲ ಜಗತ್ತಿನ ಅನೇಕ ದೇಶಗಳಲ್ಲಿ ಯೋಗದ ಉತ್ಸವ – ಉತ್ಸಾಹಗಳು ಉದಯಿಸುತ್ತವೆ. ಇದು ಶುಭ ಲಕ್ಷಣ. ಸಾವಿರಾರು ಸಂಖ್ಯೆಯಲ್ಲಿ, ಲಕ್ಷಾಂತರ ಸಂಖ್ಯೆಯಲ್ಲಿ ಇಂದು ಯುವಕರೂ, ಯುವತಿಯರೂ, ಮಕ್ಕಳೂ ಭಾರತೀಯ ಸಂಸ್ಕೃತಿಯ ಹೆಗ್ಗುರುತಾದ ಯೋಗವಿದ್ಯೆಯನ್ನು ನಿಷ್ಠೆಯಿಂದ ಕಲಿಯುತ್ತಿದ್ದಾರೆ. ಯೋಗ ಶಾಲೆಗಳು ಪ್ರಪಂಚದ ಎಲ್ಲಾ ಪ್ರದೇಶಗಳಲ್ಲಿ ಕಂಡು ಬರುತ್ತಿವೆ. ಈ ಸಂದರ್ಭದಲ್ಲಿ ಯೋಗ ಶಾಸ್ತ್ರದ ಇತಿಹಾಸವನ್ನು ಮತ್ತು ಬೆಳವಣಿಗೆಯನ್ನೂ ನೋಡೋಣ.

ಯೋಗವು ಎಂದು ಹುಟ್ಟಿತೆಂದರೆ ಅದು ಸಾರ್ವಕಾಲಿಕ. ವಿಶ್ವದ ಅತ್ಯಂತ ಪ್ರಾಚೀನ ಸಂರಕ್ಷಿತ ಸಾಹಿತ್ಯವಾದ ವೇದಗಳಲ್ಲಿ, ಉಪನಿಷತ್ತುಗಳಲ್ಲಿ ಯೋಗದ ವಿಚಾರವಿದೆ. ಅನೇಕ ಉಪನಿಷತ್ತುಗಳು ಯೋಗವನ್ನೇ ಪ್ರಧಾನವಾಗಿ ತಿಳಿಸಿವೆ. ಸಿಂಧೂ ಸರಸ್ವತೀ ಸಂಸ್ಕೃತಿಯಲ್ಲಿ ಯೋಗಾಭ್ಯಾಸವಿತ್ತೆಂಬುದು ಅಲ್ಲಿರುವ ಮುದ್ರಾಂಕಿತ ವಸ್ತುಗಳಿಂದ ತಿಳಿದುಬರುತ್ತದೆ. ಭಗವದ್ಗೀತೆಯನ್ನು ಯೋಗಶಾಸ್ತ್ರ ಎಂದೂ ಶ್ರೀ ಕೃಷ್ಣನನ್ನು ಯೋಗೇಶ್ವರನೆಂದೂ ಕರೆಯುತ್ತಾರೆ.

ಯೋಗಶಾಸ್ತ್ರವನ್ನು ಒಂದು ಜೀವನ ದರ್ಶನವನ್ನಾಗಿ ಮಾಡಿ ವೈಜ್ಞಾನಿಕವಾಗಿ ವಿಮರ್ಶಿಸಿ ಅದರ ನಿರ್ದಿಷ್ಟ ರೂಪವನ್ನು ಸೂತ್ರಗಳಲ್ಲಿ ಕೊಟ್ಟವನು ಪತಂಜಲಿ ಮಹರ್ಷಿ. ಯೋಗ ಸೂತ್ರಗಳ ರಚನೆ ಸುಮಾರು 2200 ವರ್ಷಗಳ ಹಿಂದೆ, ಎಂದರೆ ಕ್ರಿ.ಪೂ. ಎರಡನೆಯ ಶತಮಾನದಲ್ಲಿ ಆಗಿರಬಹುದು. ವ್ಯಾಕರಣ ಶಾಸ್ತ್ರದ ಮಹಾಭಾಷ್ಯವನ್ನು ರಚಿಸಿದವನೂ ಒಬ್ಬ ಪತಂಜಲಿ. ಯೋಗಶಾಸ್ತ್ರ ಸೂತ್ರಗಳನ್ನೂ ವ್ಯಾಕರಣ ಮಹಾಭಾಷ್ಯವನ್ನು ರಚಿಸಿದ ವ್ಯಕ್ತಿ ಒಬ್ಬನೋ ಅಥವಾ ಇಬ್ಬರೋ ಎಂಬುದು ಖಚಿತವಾಗಿ ನಮಗೆ ತಿಳಿಯದು.

ಪತಂಜಲಿಯು ರಚಿಸಿದ ಯೋಗಸೂತ್ರಗಳಿಗೆ ಕ್ರಿ.ಶ. ನಾಲ್ಕನೆಯ ಅಥವಾ ಐದನೆಯ ಶತಮಾನದಲ್ಲಿದ್ದ ವ್ಯಾಸ ಎಂಬ ವಿದ್ವಾಂಸನು ಭಾಷ್ಯವನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದ್ದಾನೆ. ಇದೊಂದು ಅತ್ಯುತ್ತಮ ಗ್ರಂಥ. ಸೂತ್ರಗಳ ಅರ್ಥವನ್ನು ತಿಳಿದುಕೊಳ್ಳುವುದಕ್ಕೆ ಇದರ ಅಧ್ಯಯನ ಅತ್ಯಾವಶ್ಯಕ. ಇದರ ಮೇಲೆ ಕ್ರಿ.ಶ. ಸುಮಾರು ಹತ್ತನೆಯ ಶತಮಾನದಲ್ಲಿದ್ದ ಮಹಾಪಂಡಿತ ವಾಚಸ್ಪತಿ ಮಿಶ್ರನು ರಚಿಸಿದ ತತ್ತ್ವ ವೈಶಾರದೀ ಎಂಬ ವ್ಯಾಖ್ಯಾನವೂ ಜಿಜ್ಞಾಸುಗಳಿಗೆ ಅತ್ಯಂತ ಉಪಕಾರವಾಗಿದೆ. ವಿಜ್ಞಾನ ಭಿಕ್ಷುವಿನ ಯೋಗ ಸಾರಸಂಗ್ರಹ ಎಂಬ ಗ್ರಂಥವೂ ಅಧ್ಯಯನಕ್ಕೆ ಯೋಗ್ಯವಾಗಿದೆ. ಆಧುನಿಕ ಕಾಲದಲ್ಲಿ ಇಂಗ್ಲಿಷ್, ಕನ್ನಡ ಮುಂತಾದ ಭಾಷೆಗಳಲ್ಲಿ ನೂರಾರು ಅನುವಾದಗಳು ಮತ್ತು ವ್ಯಾಖ್ಯಾನಗಳು ಲಭ್ಯವಾಗಿವೆ.

ಯೋಗ ಸೂತ್ರಗಳು (ಪತಂಜಲಿ ಪ್ರಣೀತವಾದವು) ನಾಲ್ಕು ಪಾದಗಳಲ್ಲಿ ವಿಭಕ್ತವಾಗಿವೆ. ಸಮಾಧಿಪಾದ, ಸಾಧನಪಾದ, ವಿಭೂತಿ ಪಾದ, ಕೈವಲ್ಯಪಾದ ಎಂದು ಪಾದಗಳ ಹೆಸರು. ಇವುಗಳಲ್ಲಿ 196 ಸೂತ್ರಗಳು ಅಡಕವಾಗಿವೆ. ಸೂತ್ರ ಎಂದರೆ ಸಾರವತ್ತಾದ ಅರ್ಥವನ್ನು ಸಂಕ್ಷಿಪ್ತವಾಗಿ ತಿಳಿಸುವ ಪದಸಮೂಹ.

ಅಲ್ಪಾಕ್ಷರ ಮಸಂದಿಗ್ಧಂ ಸಾರವದ್
ವಿಶ್ವತೋಮುಖಮ್ ।
ಅಸ್ತೋಭಮನವದ್ಯಂ ಚ ಸೂತ್ರಂ
ಸೂತ್ರವಿದೋ ವಿದುಃ॥

ಎಂದು ಸೂತ್ರ ಲಕ್ಷಣವನ್ನು ವಿದ್ವಾಂಸರು ಹೇಳಿದ್ದಾರೆ.

ಸಮಾಧಿ ಪಾದ : ಮೊದಲನೆಯದಾದ ಸಮಾಧಿ ಪಾದದಲ್ಲಿ ಸಂಪ್ರಜ್ಞಾತ ಮತ್ತು ಅಸಂಪ್ರಜ್ಞಾತ ಎಂಬ ಎರಡು ಪ್ರಕಾರದ ಸಮಾಧಿಗಳನ್ನು ವಿವರಿಸಿರುವುದರಿಂದ ಈ ಹೆಸರು. ಯೋಗದ ಲಕ್ಷಣ, ಐದು ಚಿತ್ತ ವೃತ್ತಿಗಳು, ಯೋಗದರ್ಶನವು ಒಪ್ಪಿಕೊಂಡಿರುವ ಪ್ರತ್ಯಕ್ಷ, ಅನುಮಾನ, ಆಗಮ ಎಂಬ ಮೂರು ಪ್ರಮಾಣಗಳು, ಈಶ್ವರನ ಸ್ವರೂಪ, ವಿತರ್ಕ, ವಿಚಾರ, ಆನಂದ, ಅಸ್ಮಿತಾ ಎಂಬ ನಾಲ್ಕು ಸಮಾಪತ್ತಿಗಳು, ಋತಂಭರಾ ಎಂಬ ಪ್ರಜ್ಞೆ ಮುಂತಾದ ಅನೇಕ ವಿಷಯಗಳು ಇಲ್ಲಿ ಚರ್ಚಿತವಾಗಿವೆ. ಇದರಿಂದ ಪಾತಂಜಲ ಯೋಗ ದರ್ಶನವು ಒಂದು ಆಸ್ತಿಕ ದರ್ಶನ, ಈಶ್ವರ (ದೇವರು) ಎಂಬ ತತ್ತ್ವವನ್ನು ಇದು ಒಪ್ಪಿಕೊಂಡಿದೆ ಎಂಬುದು ಸಿದ್ಧವಾಗುತ್ತದೆ. ಈಶ್ವರನ ಅಸ್ತಿತ್ವವನ್ನು ಸಾಧಿಸಲು ಪತಂಜಲಿಯು ಪ್ರಯತ್ನಿಸಿಲ್ಲ. ಆತ್ಮ ತತ್ತ್ವವನ್ನು ಪುರುಷ ಎಂಬ ಶಬ್ದದಿಂದ ಹೇಳಲಾಗಿದೆ. ಇದರಿಂದ ಅತ್ಯಂತ ಪ್ರಾಚೀನವಾಗಿದ್ದ ಸಾಂಖ್ಯದರ್ಶನವನ್ನು ಪತಂಜಲಿ ಅನುಸರಿಸಿದ್ದಾನೆ ಎಂದು ಹೇಳಬಹುದು. ಅದಕ್ಕೆ ಅನುಸಾರವಾಗಿ ಪುರುಷರ (ಆತ್ಮಗಳ) ಸಂಖ್ಯೆ ಅನಂತ. ಪ್ರತಿಯೊಂದು ಆತ್ಮವೂ ಕೈವಲ್ಯವೆಂಬ ಮೋಕ್ಷಕ್ಕಾಗಿ ಪ್ರಯತ್ನಿಸಬೇಕು. ಅದರ ಮಾರ್ಗ ಯೋಗ. ಅದನ್ನೇ ಪತಂಜಲಿ ಮಹರ್ಷಿ ತಿಳಿಸಿಕೊಟ್ಟಿರುವುದು.

ಸಾಧನಪಾದ : ಇದರಲ್ಲಿ ಪೂರ್ವಜನ್ಮ ಸಂಸ್ಕಾರವುಳ್ಳವರಿಗಾಗಿ ಕ್ರಿಯಾ ಯೋಗವನ್ನು ಸಾಮಾನ್ಯ ಮಾನವರಿಗಾಗಿ ಅಷ್ಟಾಂಗ ಯೋಗವನ್ನು ಕೈವಲ್ಯದ ಸಾಧನವಾಗಿ ನಿರೂಪಿಸಲಾಗಿದೆ. ಕ್ರಿಯಾ ಯೋಗಕ್ಕೆ ಅರ್ಹರಾದವರು ನೇರವಾಗಿ ತಪಸ್ಸು, ಸ್ವಾಧ್ಯಾಯ, ಈಶ್ವರ ಪ್ರಣಿಧಾನಗಳಿಂದ ಸಿದ್ಧಿಯನ್ನು ಪಡೆಯಬಹುದು. ಇಂತಹವರು ಲೋಕದಲ್ಲಿ ತುಂಬ ವಿರಳ. ಸಾಮಾನ್ಯ ಮಾನವರು ಅಷ್ಟಾಂಗ ಯೋಗದಿಂದ ಸಿದ್ಧಿಯನ್ನು ಪಡೆಯಬೇಕು. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ ಎಂಬವು ಯೋಗದ ಎಂಟು ಅಂಗಗಳು. ಇವುಗಳ ಆಚರಣೆಯಿಂದ ಚಿತ್ತದ ಅಶುದ್ಧಿಗಳು ಕ್ಷಯ ಹೊಂದಿ ಜ್ಞಾನದ ಬೆಳಕಿಗೆ ಅವಕಾಶವನ್ನು ಕೊಡುತ್ತವೆ. ಇವುಗಳಲ್ಲಿ ಮೊದಲನೆಯ ಐದು ಅಂಗಗಳು ಬಹಿರಂಗ ಅಥವಾ ಹೊರಗಿನವು. ಅವನ್ನು ಸಾಧನ ಪಾದದಲ್ಲಿ ನಿರೂಪಿಸಲಾಗಿದೆ. ಧಾರಣಾ, ಧ್ಯಾನ, ಸಮಾಧಿಗಳು ಸಾಕ್ಷಾತ್ ಚಿತ್ತಕ್ಕೆ ಸಂಬಂಧಿಸಿರುವುವು ಅಂತರಂಗಗಳು. ಇವನ್ನು ವಿಭೂತಿಪಾದದಲ್ಲಿ ವಿವರಿಸಲಾಗಿದೆ.

ವಿಭೂತಿಪಾದ : ವಿಭೂತಿ ಎಂದರೆ ಐಶ್ವರ್ಯ, ಮಾನವಾತೀತವಾದ ಶಕ್ತಿ ಅಥವಾ ಲೋಕೋತ್ತರವಾದ ಸಿದ್ಧಿ. ಈ ಶಕ್ತಿಗಳು ಸತತ ಯೋಗಾಭ್ಯಾಸದಿಂದ ದೊರಕುತ್ತವೆ ಎಂದು ಯೋಗ ಸೂತ್ರಗಳಲ್ಲಿ ಹೇಳಲಾಗಿದೆ.

ಪರಿಣಾಮತ್ರಯ ಸಂಯಮಾತ್
ಅತೀತಾನಾಗತ ಜ್ಞಾನಮ್ (3.16)

ಎಂಬ ಸೂತ್ರವಿದೆ. ಸಂಯಮ ಎಂದರೆ ಧಾರಣಾ–ಧ್ಯಾನ–ಸಮಾಧಿಗಳು. ಮೂರು ಪರಿಣಾಮಗಳ ಮೇಲೆ ಸಂಯಮವನ್ನು ಮಾಡಿದರೆ ಯೋಗಿಗೆ ಭೂತ ಮತ್ತು ಭವಿಷ್ಯದ ಜ್ಞಾನ ಉಂಟಾಗುವುದು ಎಂದು ಅರ್ಥ. ಈ ಸಿದ್ಧಿಯನ್ನು ಪಡೆದ ಯೋಗಿಯು ಸಹಸ್ರಾರು ವರ್ಷಗಳ ಹಿಂದೆ ನಡೆದುದನ್ನೂ ಮುಂದೆ ಎಂದೋ ನಡೆಯಬಹುದಾದುದನ್ನೂ ಅರಿತುಕೊಳ್ಳಬಲ್ಲನು ಎಂದು ಇದರ ತಾತ್ಪರ್ಯ. ಇದೆಲ್ಲ ಇಂದು ಸಾಧ್ಯವೋ ಇಲ್ಲವೋ ನನಗೆ ತಿಳಿಯದು. ಬೇರೆಯವರ ಮನಸ್ಸಿನಲ್ಲಿ ಏನು ನಡೆಯುತ್ತಿದೆಯೆಂಬುದನ್ನು ತಿಳಿದುಕೊಳ್ಳಬಹುದು ಎಂದೂ ಇಲ್ಲಿ ಹೇಳಲಾಗಿದೆ.

ಕೈವಲ್ಯ ಪಾದ : ಕೈವಲ್ಯ ಎಂಬುದು ಮಾನವ ಜೀವನದ ಮುಖ್ಯ ಗುರಿ. ಪುರುಷನು, ಎಂದರೆ ಆತ್ಮನು, ಪ್ರಕೃತಿಯ ಬಲೆಯಲ್ಲಿ ಬಿದ್ದು ಜನನ, ಜರಾ, ಮರಣಗಳಿಂದ ದುಃಖವನ್ನು ಅನುಭವಿಸುತ್ತಿದ್ದಾನೆ. ಈ ಬಲೆಯಿಂದ ಬಿಡಿಸಿಕೊಂಡು ನಿಜವಾದ ಅರ್ಥದಲ್ಲಿ ಸ್ವತಂತ್ರನಾಗುವುದು ಕೈವಲ್ಯ. ಪ್ರಕೃತಿಯು ಕಟ್ಟಿ ಹಾಕುವುದು ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ, ಅಭಿನಿವೇಶ ಎಂಬ ಐದು ಕ್ಲೇಶಗಳಿಂದ. ವಸ್ತುತಃ ಪುರುಷನು ನಿರ್ಲೇಪ. ಆದರೆ ಬುದ್ಧಿ ಸತ್ತ್ವ, ರಜಸ್, ತಮಸ್ ಎಂಬ ಗುಣಗಳಿಗೆ ಪಕ್ಕಾಗಿದೆ. ರಜೋಗುಣ ಸಂಪರ್ಕದಿಂದ ದುಃಖ. ಬುದ್ಧಿಯ ವಿಕಾರಗಳು ಆತ್ಮನಲ್ಲಿ ಪ್ರತಿಫಲನಗೊಳ್ಳುವುದರಿಂದ ತನಗೇ ಆ ದುಃಖವಾಗುತ್ತಿದೆ ಎಂಬ ಭ್ರಾಂತಿ ಉಂಟಾಗಿದೆ. ಪ್ರಕೃತಿ–ಪುರುಷರ ನಿಜ ಸ್ವಭಾವದ ಅರಿವು ಉಂಟಾದಾಗ ಭ್ರಾಂತಿ ತೊಲಗುತ್ತದೆ. ಆ ಅರಿವು ಅಸಂಪ್ರಜ್ಞಾತ ಸಮಾಧಿಯಲ್ಲಿ ತಾವೇ ಹುಟ್ಟುತ್ತದೆ. ಆ ಸ್ಥಿತಿಯನ್ನು ಮುಟ್ಟಿದ ಯೋಗಿಯು ಜೀವನ್ಮುಕ್ತನಾಗುತ್ತಾನೆ. ಎಂದರೆ, ಇನ್ನೂ ಶರೀರವನ್ನು ಧರಿಸಿದ್ದರೂ ಎಲ್ಲಾ ಬಂಧನಗಳಿಂದ ಮುಕ್ತನಾಗಿರುತ್ತಾನೆ. ಅವನ ಸಂಚಿತ ಕರ್ಮಗಳಿಗೂ ಆಗಾಮಿಕರ್ಮಗಳೂ ಭಸ್ಮವಾಗುತ್ತವೆ. ಹಾಗೆಂದರೆ ಅವೆಲ್ಲ ನಿಷ್ಕ್ರಿಯ ವಾಗುತ್ತವೆ. ಯಾವ ಫಲವನ್ನೂ ಅವು ಕೊಡುವುದಿಲ್ಲವೆಂದು ಅರ್ಥ.

ವಿಭೂತಿಪಾದದಲ್ಲಿ ಹೇಳಿದ ಸಿದ್ಧಿಗಳು, ಶಕ್ತಿಗಳು, ಅಲೌಕಿಕ ಸಾಮರ್ಥ್ಯ ಇವೆಲ್ಲ ಲೋಕದಲ್ಲಿ ಗೌರವವನ್ನೂ ಸಂಮಾನವನ್ನೂ ತಂದುಕೊಡಬಹುದು. ಆದರೆ ಮುಖ್ಯ ಗುರಿಯಾದ ಕೈವಲ್ಯವನ್ನು ಉದ್ದೇಶಿಸಿದಾಗ, ಸಿದ್ಧಿಗಳೆಲ್ಲ ವಿಘ್ನಗಳು.

ತೇ ಸಮಾಧಾವುಪಸರ್ಗಾಃ ವ್ಯುತ್ಥಾನೇ
ಸಿದ್ಧಯಃ (3.37)

ಎಂಬ ಸೂತ್ರವು ಇದನ್ನು ಸ್ಪಷ್ಟಪಡಿಸಿದೆ. ಆದ್ದರಿಂದ ಯೋಗಿಯು ಅಂತಹ ಸಿದ್ಧಿಗಳನ್ನು ಪಡೆಯುವ ಹಂಬಲವನ್ನಿಟ್ಟುಕೊಳ್ಳಬಾರದು. ಸತ್ತ್ವ, ರಜಸ್, ತಮಸ್ ಎಂಬ ಗುಣಗಳು ಆತ್ಮನನ್ನು ಬಿಟ್ಟು ಪ್ರಕೃತಿಯಲ್ಲಿ ಲೀನವಾದಾಗ ಕೈವಲ್ಯ. ಆಗ ಚೈತನ್ಯವು ಸ್ವರೂಪದಲ್ಲಿ ಸ್ಥಿರವಾಗಿ ನಿಲ್ಲುವುದು ಎಂದು ಪತಂಜಲಿ ಮಹರ್ಷಿಯ ಸಿದ್ಧಾಂತ.

ಪುರುಷಾರ್ಥಶೂನ್ಯಾನಾಂ ಗುಣಾನಾಂ
ಪ್ರತಿಪ್ರಸವಃ ಕೈವಲ್ಯಂ
ಸ್ವರೂಪಪ್ರತಿಷ್ಠಾ ವಾ ಚಿತಿಶಕ್ತಿರಿತಿ॥ (4.34)

ಎಂಬ ಸೂತ್ರವು ಈ ಸಿದ್ಧಾಂತವನ್ನು ಪ್ರತಿಪಾದಿಸಿದೆ. ಪ್ರಕೃತಿ, ಪುರುಷ ಎಂಬ ಎರಡು ತತ್ತ್ವಗಳೂ ಅನಾದಿ. ಎರಡೂ ನಿತ್ಯ– ಪುರುಷನು ಚೇತನ, ನಿರ್ಲೇಪ. ಸ್ವರೂಪ ಜ್ಞಾನವಿಲ್ಲದೆ ಭ್ರಾಂತನಾಗಿ ಹುಟ್ಟು, ಮುಪ್ಪು, ಸಾವುಗಳ ಪ್ರಪಂಚದಲ್ಲಿ ದುಃಖಾನುಭವವನ್ನು ಮಾಡುತ್ತಿದ್ದಾನೆ. ಇದಕ್ಕೆ ಅವನಲ್ಲಿರುವ ರಾಗದ್ವೇಷಾದಿಗಳು ಕಾರಣ. ಯಮನಿಯಮಾದಿಗಳ ಅನುಷ್ಠಾನದಿಂದ ರಾಗದ್ವೇಷಾದಿಗಳು ದೂರವಾಗುತ್ತವೆ. ಆಗ ಸಮಾಧಿಯ ಸಿದ್ಧಿ, ಅದರಿಂದ ಕೈವಲ್ಯ. ಇದನ್ನೆಲ್ಲ ತಿಳಿಸಿಕೊಟ್ಟಿರುವ ಪತಂಜಲಿ ಮಹರ್ಷಿಗೆ ನಮ್ಮ ನಮನಗಳು.

ಯೋಗೇನ ಚಿತ್ತಸ್ಯ ಪದೇನ ವಾಚಾಂ
ಮಲಂ ಶರೀರಸ್ಯ ಚ ವೈದ್ಯಕೇನ।
ಯೋಽಪಾಕರೋತ್ತಂ ಪ್ರವರಂ ಮುನೀನಾಂ
ಪತಂಜಲಿಂ ಪ್ರಾಂಜಲಿರಾನತೋಽಸ್ಮಿ॥

ಪರಿಸರ ಸಂರಕ್ಷಣೆ ನಿತ್ಯವೂ ನಡೆಯಬೇಕು

ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಅಭಿಮತ

ಸುಯೋಗ್ ಆಸ್ಪತ್ರೆ ವತಿಯಿಂದ ರಾಮಕೃಷ್ಣನಗರ ಹಸಿರು ಯೋಜನೆಗೆ ಚಾಲನೆ



'ಪರಿಸರ ಪೋಷಕ' ಪ್ರಶಸ್ತಿ

ಗಿಡ ನೆಟ್ಟು ಒಮ್ಮೆ ನೀರೆರೆದರೆ ಸಾಲದು. ಅದು ಎತ್ತರವಾಗುವವರೆಗೆ ಹಸು ಇನ್ನಿತರ ಪ್ರಾಣಿಗಳಿಗೆ ತುತ್ತಾಗದಂತೆ ರಕ್ಷಣೆ ಮಾಡಿಕೊಳ್ಳಬೇಕು. ಇಲ್ಲವಾದರೆ ಮರವಾಗುವ ಮುನ್ನವೇ ಸಸಿ ಜೀವ ಕಳೆದುಕೊಳ್ಳುತ್ತದೆ. ಇದನ್ನು ಮನನಗಂಡ ಮೈಸೂರಿನ ರಘುಲಾಲ್ ಅಂಡ್ ಕಂಪನಿಯ ರಾಘವನ್ ಅವರು ಸಹಸ್ರಾರು ಸಸಿಗಳಿಗೆ ರಕ್ಷಾಕವಚ(ಟ್ರೀ ಗಾರ್ಡ್)ಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಈಗಲೂ ಈ ಸೇವೆಯನ್ನು ಮುಂದುವರೆಸಿರುವ ಇವರಿಗೆ ಕಾರ್ಯಕ್ರಮದಲ್ಲಿ 'ಪರಿಸರ ಪೋಷಕ' ಪ್ರಶಸ್ತಿ ಪ್ರದಾನ ಮಾಡಿ, ಆತ್ಮೀಯವಾಗಿ ಗೌರವಿಸಲಾಯಿತು.

ಮೈಸೂರು, ಜೂ.8(ಎಸ್‌ಬಿಡಿ)– ಪರಿಸರ ಸಂರಕ್ಷಣೆ ನಿತ್ಯ ನಿರಂತರವಾಗಿರಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಹೇಳಿದರು.

ಮೈಸೂರು ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ ಹಾಗೂ ಸುಯೋಗ್ ಕಾಲೇಜ್ ಆಫ್ ನರ್ಸಿಂಗ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗುರುವಾರ ಆಯೋಜಿಸಿದ್ದ ರಾಮಕೃಷ್ಣನಗರ ಹಸಿರೀಕರಣ ಯೋಜನೆ ಹಾಗೂ ಪರಿಸರ ಪೋಷಕ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಉದ್ಘಾಟಿಸಿ, ನಂತರ ಅವರು ಮಾತನಾಡಿದರು.

ಪರಿಸರ ದಿನಾಚರಣೆಯಂದು ಮಾತ್ರ ಪ್ರಕೃತಿ ಸಂರಕ್ಷಣೆಯ ಸಂದೇಶ ಸಾರಿದರೆ ಸಾಲದು. ಗಿಡ–ಮರ ಪೋಷಣೆ ಒಂದು ದಿನಕ್ಕಷ್ಟೇ ಸೀಮಿತವಾಗಬಾರದು. ಪ್ರತಿಯೊಬ್ಬರೂ ದಿನನಿತ್ಯ ಪರಿಸರವನ್ನು ಸಂರಕ್ಷಣೆಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು. ಪ್ಲಾಸ್ಟಿಕ್ ಮಾಲಿನ್ಯ ತಡೆಗಟ್ಟೋಣ ಎಂಬ ಘೋಷ ವಾಕ್ಯದೊಂದಿಗೆ ಈ ಬಾರಿ ಪರಿಸರ ದಿನವನ್ನು ಆಚರಿಸಲಾಗಿದೆ. ಒಮ್ಮೆ ಬಳಸಿ ಬಿಸಾಡುವ ಪ್ಲಾಸ್ಟಿಕ್ ವಸ್ತುಗಳನ್ನು ತ್ಯಜಿಸಬೇಕು. ಮನಸೋಇಚ್ಛೆ ಪ್ಲಾಸ್ಟಿಕ್ ಬಳಕೆ ಮಾಡಿ ಎಲ್ಲೆಂದರಲ್ಲಿ ಬಿಸಾಡಿದರೆ ಅದರ ಪರಿಣಾಮ ಗಂಭೀರವಾಗಿರುತ್ತದೆ. ಎಲ್ಲರಲ್ಲೂ ಪರಿಸರ ಪ್ರೇಮ ಜಾಗೃತ ವಾಗಬೇಕು. ಈ ನಿಟ್ಟಿನಲ್ಲಿ ಸುಯೋಗ್ ಸಂಸ್ಥೆ ಹಸರೀಕರಣ ಕಾರ್ಯಕ್ರಮ ಹಮ್ಮಿಕೊಂಡಿರುವುದು ಪ್ರಶಂಸನೀಯ ಎಂದರು.



ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗುರುವಾರ ಗಣ್ಯರು ಸಸಿ ನೆಟ್ಟು, ನೀರೆರೆದರು.

ಹಿರಿಯ ಪರಿಸರ ಅಧಿಕಾರಿ ಪ್ರಕಾಶ್ ಮಾತನಾಡಿ, ಪ್ರತಿ ಮನೆಯಲ್ಲಿ ಕಸ ವಿಂಗಡಿಸುವ ಮೂಲಕ ಪರಿಸರ ಸಂರಕ್ಷಣೆಗೆ ಕೈಜೋಡಿಸಬೇಕು. ಹಸಿ ಮತ್ತು ಒಣ ಕಸವನ್ನು ಬೇರ್ಪಡಿಸಿದರೆ ವಿಲೇವಾರಿ ಸುಲಭವಾಗುತ್ತದೆ. ಅಲ್ಲದೆ ಪ್ಲಾಸ್ಟಿಕ್ ಇನ್ನಿತರ ವಸ್ತುಗಳ ವೈಜ್ಞಾನಿಕ ಸಂಸ್ಕರಣೆಗೆ ಅನುಕೂಲವಾಗುತ್ತದೆ. ಹಾಗಾಗಿ ನಗರ ಪ್ರದೇಶದಲ್ಲಿ ಮನೆ ಬಳಿ ಸಂಗ್ರಹಣೆಗೆ ಬಂದಾಗ ಕಸವನ್ನು ಬೇರ್ಪಡಿಸಿ ನೀಡಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ. ಯೋಗಣ್ಣ ಮಾತನಾಡಿ, ಹಸಿರು ನಾಶವಾದರೆ ಪ್ರಕೃತಿ ಸಮತೋಲನ ತಪ್ಪುತ್ತದೆ. ಸಸ್ಯ ಸಂಪತ್ತು ಪ್ರಕೃತಿಯ ರಕ್ಷಾ ಕವಚವಿದ್ದಂತೆ. ಮೈಸೂರು ಹಚ್ಚಹಸಿರಿನಿಂದ ನಳನಳಿಸಬೇಕು. ಇದಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕೆಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಸುಯೋಗ್ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ಸುಯೋಗ್ ಯೋಗಣ್ಣ, ವೈದ್ಯಕೀಯ ನಿರ್ದೇಶಕ ಡಾ.ರಾಜೇಂದ್ರಪ್ರಸಾದ್, ಟ್ರಸ್ಟಿ ಸುಧಾ ಯೋಗಣ್ಣ, ನಿರ್ದೇಶಕಿ ಡಾ.ಸೀಮಾ ಯೋಗಣ್ಣ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಂ.ವಿ.ಮಂಜುನಾಥ್, ಸಸ್ಯದಾನಿ ಲೋಕೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಬಾಂಬ್ ಬೆದರಿಕೆ: 2 ಗಂಟೆ ದೆಹಲಿ–ಮುಂಬೈ ವಿಮಾನ ಹಾರಾಟ ವಿಳಂಬ

ನವದೆಹಲಿ: ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಹ ಪ್ರಯಾಣಿಕರೊಬ್ಬರು ತನ್ನ ಬ್ಯಾಗ್‌ನಲ್ಲಿ ಬಾಂಬ್ ಇರುವ ಬಗ್ಗೆ ಮಾತನಾಡುತ್ತಿರುವುದನ್ನು ಕೇಳಿಸಿಕೊಂಡಿರುವುದಾಗಿ ಪ್ರಯಾಣಿಕರೊಬ್ಬರು ಹೇಳಿದ ನಂತರ ದೆಹಲಿಯಿಂದ ಮುಂಬೈಗೆ ತೆರಳುವ ವಿಸ್ತಾರ ಏರ್‌ಲೈನ್ಸ್ ವಿಮಾನ ಹಾರಾಟದಲ್ಲಿ 2 ಗಂಟೆ ಕಾಲ ವಿಳಂಬವಾಯಿತು. ನಂತರ ಅದು ಸುಳ್ಳು ಎಂದು ಘೋಷಿಸಲಾಯಿತು ಎಂದು ಮೂಲಗಳು ತಿಳಿಸಿವೆ. ಬುಧವಾರ 4–55ಕ್ಕೆ ನಿರ್ಗಮಿಸಬೇಕಾಗಿದ್ದ ದೆಹಲಿ–ಮುಂಬೈ ನಡುವಿನ ವಿಮಾನ ಸಂಖ್ಯೆ ಯುಕೆ–941ರಲ್ಲಿ ಇಂತಹ ಬೆದರಿಕೆ ಕಂಡುಬಂದ ನಂತರ ನಿಲ್ದಾಣದಲ್ಲಿನ ಬಹು ಭದ್ರತೆ, ಗುಪ್ತಚರ, ವಿಮಾನ ನಿಲ್ದಾಣ ಕಾರ್ಯಾಚರಣೆಗಳು ಮತ್ತು ವಾಯುಯಾನ ಏಜೆನ್ಸಿಯ ಸಮಿತಿ ಸಭೆ ಸುಮಾರು ಸಂಜೆ 6–10ರ ವೇಳೆಗೆ ನಡೆದಿತ್ತು.

ಬ್ಯಾಗ್‌ನಲ್ಲಿರುವ ಬಾಂಬ್‌ನ್ನು ಸಿಐಎಸ್‌ಎಫ್ ಪತ್ತೆ ಹಚ್ಚಲು ಸಾಧ್ಯವಾಗಲಿಲ್ಲ ಎಂದು ಪುರುಷ ಪ್ರಯಾಣಿಕರೊಬ್ಬರು ಫೋನ್‌ನಲ್ಲಿ ಹೇಳುತ್ತಿದ್ದನ್ನು ಕೇಳಿಸಿಕೊಂಡಿದ್ದಾಗಿ ಮಹಿಳಾ ಪ್ರಯಾಣಿಕರೊಬ್ಬರು ವಿಮಾನದ ಸಿಬ್ಬಂದಿ ವರದಿ ಮಾಡಿದ್ದಾಗಿ ಮೂಲಗಳು ತಿಳಿಸಿವೆ. ದೇಶದಲ್ಲಿನ 66 ನಾಗರಿಕ ವಿಮಾನ ನಿಲ್ದಾಣಗಳಿಗೆ ಬೆದರಿಕೆ ಹಿನ್ನೆಲೆಯಲ್ಲಿ ಭದ್ರತಾ ಪಡೆಗಳು ಪ್ರಯಾಣಿಕರು ಮತ್ತು ಅವರ ಲಗ್ಗೇಜ್‌ನ್ನು ತಪಾಸಣೆ ಮಾಡುತ್ತಾರೆ. ವಿಮಾನದಲ್ಲಿದ್ದ ಸಿಬ್ಬಂದಿ ಕೂಡಲೇ ಭದ್ರತಾ ಸಿಬ್ಬಂದಿ ಮತ್ತು ಸಿಐಎಸ್‌ಎಫ್ ಪಡೆಗೆ ಮಾಹಿತಿ ನೀಡಿದ್ದರಿಂದ ವಿಮಾನದ ಟೇಕಾಫ್ 2 ಗಂಟೆ ವಿಳಂಬವಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಶುಕ್ರವಾರ 9-06-2023

ಬೆಳ್ಳಿ ಬೆಳಕು

ಮೈಸೂರು ಮಿತ್ರ

• ಸತ್ಯಮೂರ್ತಿ ತೋಳಹುಣಸೆ

ಸಿನಿಮಾ ಪುರವಣಿ

‘ಐರಾವನ್’ ಚಿತ್ರದಲ್ಲಿ ಜಯರಾಂ ಕಾರ್ತೀಕ್, ಅದ್ವಿತಿ ಶೆಟ್ಟಿ



ಅಶ್ವಿನಿ ನಕ್ಷತ್ರ ಸೀರಿಯಲ್ ಮೂಲಕ ಕನ್ನಡಿಗರ ಮನೆ ಮಾತಾಗಿದ್ದ ನಟ ಜೆಕೆ ಅಲಿಯಾಸ್ ಜಯರಾಂ ಕಾರ್ತೀಕ್ ನಂತರ ಸೀತೆಯರಾಮ ಧಾರಾವಾಹಿಯಲ್ಲಿ ಪ್ರಚಂಡ ರಾವಣನಾಗಿ ಘರ್ಜಿಸಿದ್ದರು. ಇದೀಗ ಜೆಕೆ ನಾಯಕನಾಗಿ ಅಭಿನಯಿಸಿದ ಮತ್ತೊಂದು ಚಿತ್ರ ‘ಐರಾವನ್’ ಬಿಡುಗಡೆಗೆ ಸಿದ್ಧವಾಗಿದೆ. ಇದೇ ತಿಂಗಳ 16 ರಂದು ರಾಜ್ಯಾದ್ಯಂತ ತೆರೆಕಾಣಲಿರುವ ಈ ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ಈಗಾಗಲೇ ಒಂದಷ್ಟು ಚಿತ್ರಗಳಿಗೆ ಸಹ, ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವ ರಾಮ್ಸ್ ರಂಗ ಅವರು ಈ ಚಿತ್ರದ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ರಾವ್ಸ್ ರಂಗ ಅವರಿಗೆ ಇದು ಚೊಚ್ಚಲ ನಿರ್ದೇಶನದ ಚಿತ್ರವಾಗಿದ್ದು, ಈ ಚಿತ್ರಕ್ಕೆ ನಿರಂತರ್ ಪ್ರೊಡಕ್ಷನ್ಸ್ ಮೂಲಕ ನಿರಂತರ್ ಅವರು ಬಂಡವಾಳ ಹೂಡಿದ್ದಾರೆ. ಈ ಚಿತ್ರದಲ್ಲಿ ಜಯರಾಮ್ ಕಾರ್ತೀಕ್ ಅವರ ಜೊತೆ ನಟಿ ಅದ್ವಿತಿ ಶೆಟ್ಟಿ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ನಟ ಜೆಕೆ ‘ಐರಾವನ್’ ಚಿತ್ರದ ಕುರಿತಂತೆ ಮಾತನಾಡುತ್ತಾ, ಕೋವಿಡ್ ಸಮಯದಲ್ಲಿ ನಿರ್ಮಾಣವಾದ ಚಿತ್ರವಿದು. ಈ ಚಿತ್ರದಲ್ಲಿ ಹೀರೊ, ವಿಲನ್ ಅಂತ ಯಾರೂ ಇಲ್ಲ. ಇಲ್ಲಿ ಕಥೆಯೇ ಎಲ್ಲಾ. ಕ್ರೈಂ ಮತ್ತು ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ನಡೆಯೋ ಕೊಲೆಯನ್ನು ಯಾರು ಮಾಡಿದ್ದಾರೆ ಎನ್ನುವುದು ಕೊನೆಯವರೆಗೂ ಗೊತ್ತಾಗೋದೇ ಇಲ್ಲ. ಪ್ರೇಕ್ಷಕನಿಗೆ ಅಲ್ಲಿದ್ದ ಎಲ್ಲರ ಮೇಲೂ ಅನುಮಾನ ಬರುತ್ತದೆ. ಚಿತ್ರದ ಕಂಟೆಂಟ್ ಬಹಳ ಚೆನ್ನಾಗಿದೆ. ಸಾಮಾನ್ಯವಾಗಿ ಒಂದು ಕಮರ್ಷಿಯಲ್ ಸಿನಿಮಾದಲ್ಲಿ ಇರುವಂತೆ ಭಾರೀ ಫೈಟ್, ಭರ್ಜರಿ ಹಾಡುಗಳು ಇದ್ಯಾವುದೂ ಈ ಚಿತ್ರದಲ್ಲಿಲ್ಲ ಎಂದು ಹೇಳಿದರು. ನಂತರ ನಿರ್ದೇಶಕ ರಾವ್ಸ್‌ರಂಗ ಮಾತನಾಡುತ್ತಾ ನನ್ನ ನಿರ್ದೇಶನದ ಮೊದಲ ಚಿತ್ರ. ಬಿಡಗಡೆಗೆ ಸಿದ್ಧವಾಗಿದ್ದು, ಜೂನ್ 16ಕ್ಕೆ ರಿಲೀಸ್ ಮಾಡುತ್ತಿದ್ದೇವೆ. ‘ಐರಾವನ್’ ಎಂದರೆ, ಅರ್ಜುನನ ಮೂರನೇ ಮಗ. ಅದು ರಾಕ್ಷಸರೂಪ. ಆ ರೂಪವನ್ನು ಈಗಿನ ಕಾಲಘಟ್ಟಕ್ಕೆ ತಕ್ಕಂತೆ ಬದಲಿಸಿಕೊಂಡಿದ್ದೇವೆ. ಆ ಕುತೂಹಲ ಏನೆಂದು ಚಿತ್ರದಲ್ಲಿ ಹೇಳಿದ್ದೇವೆ ಎಂದರು. ಇನ್ನು ಚಿತ್ರಕ್ಕೆ ಎಸ್.ಪ್ರದೀಪ್‌ವರ್ಮಾ ಸಂಗೀತ ಸಂಯೋಜನೆ, ದೇವೇಂದ್ರರ ಕ್ಯಾಮೆರಾ ವರ್ಕ್ ಇದೆ.

ಜೂನ್ 16ಕ್ಕೆ ತೆರೆಗೆ ಐರಾವನ್

ಹಾಲಿವುಡ್ ನಿರ್ದೇಶಕರ ಕನ್ನಡ ಚಿತ್ರ ರೋಡ್ ಕಿಂಗ್



ಮತೀನ್ ಹುಸೇನ್ ಅಭಿನಯದ ‘ರೋಡ್ ಕಿಂಗ್’ ಚಿತ್ರ ಜೂನ್ 23ಕ್ಕೆ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ವಿಶೇಷವೆಂದರೆ, ಹಾಲಿವುಡ್ ನಿರ್ದೇಶಕ ರ್‍ಯಾಂಡಿ ಕೆಂಟ್ ಅವರು ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ‘ರೋಡ್ ಕಿಂಗ್’ ಚಿತ್ರದ ನಾಯಕ ಮತ್ತು ನಿರ್ಮಾಪಕರೂ ಆಗಿರುವ ಮತೀನ್ ಹುಸೇನ್, ಮೂಲತಃ ಬೆಂಗಳೂರಿನವರಾದರೂ ಬೆಳೆದಿದ್ದೆಲ್ಲಾ ಅಮೇರಿಕಾದಲ್ಲಿ. ಕೋಲಾರದಲ್ಲಿ ನಡೆದ ನೈಜ ಘಟನೆಯನ್ನು ಆಧರಿಸಿ ಚಿಕ್ಕ ಬಜೆಟ್ ನಲ್ಲಿ ಈ ಚಿತ್ರವನ್ನು ಮಾಡಲು ಹೊರಟಾಗ ಅವರಿಗೆ ನೆನಪಾಗಿದ್ದೇ ರ್‍ಯಾಂಡಿ ಕೆಂಟ್. ಮತೀನ್ ಮತ್ತು ರಾಂಡಿ ಹಳೆಯ ದೋಸ್ತಿಗಳು. ಚಿತ್ರನಿರ್ದೇಶನ ಮಾಡಿಕೊಡಲು ಕೇಳಿದಾಗ, ಕನ್ನಡ ಭಾಷೆ ಗೊತ್ತಿಲ್ಲದ ಕಾರಣ ರ್‍ಯಾಂಡಿ ಹಿಂದೇಟು ಹಾಕಿದ್ದಾರೆ. ಕೊನೆಗೆ ಒಪ್ಪಿ ನಿರ್ದೇಶನಕ್ಕೆ ಕೈಹಾಕಿದ್ದಾರೆ.

ಅಂದಹಾಗೆ, ಈ ಚಿತ್ರದ ನಿರ್ದೇಶನವನ್ನು ದೂರದ ಅಮೇರಿಕಾದಲ್ಲಿದ್ದುಕೊಂಡು ಸ್ಕೈಪ್ ಮೂಲಕವೇ ಮಾಡಿದ್ದಾರೆ. ಅದಕ್ಕೆ ಕಾರಣವೂ ಇದೆ. ಈ ಬಗ್ಗೆ ಮಾತನಾಡಿದ ಮತೀನ್, ಚಿತ್ರೀಕರಣಕ್ಕೆ ಎಲ್ಲ ತಯಾರಿಯೂ ಆಗಿತ್ತು. ಆದರೆ, ರಾಂಡಿಗೆ ವೀಸಾ ಸಿಗಲಿಲ್ಲ. ಎರಡನೆಯ ಬಾರಿಗೂ ಅದೇ ರೀತಿ ಆಯಿತು. ಕೊನೆಗೆ ಅವರು ಸ್ಕೈಪ್ ಮೂಲಕವೇ ಚಿತ್ರ ನಿರ್ದೇಶನ ಮಾಡಿದ್ದಾರೆ ಎಂದು ಹೇಳಿದರು.

ಇದೇ ಮೊದಲ ಬಾರಿಗೆ ನಾಯಕನಾಗಿ ಕಾಣಿಸಿಕೊಳ್ಳುತ್ತಿರುವ ಮತೀನ್ ಜೊತೆ ನಾಯಕಿಯಾಗಿ ರನ್ ಆಂಟೋನಿ ಖ್ಯಾತಿಯ ರುಕ್ಸರ್ ನಟಿಸಿದ್ದು, ಲೀಲಾ ಮೋಹನ್, ಹರೀಶ್, ನಯನಾ ಶೆಟ್ಟಿ ಉಳಿದ ಪಾತ್ರಗಳಲ್ಲಿ ನಟಿಸಿದ್ದಾರೆ. ಚಿತ್ರಕ್ಕೆ ಆರಿಫ್ ಲಲಾನಿ ಛಾಯಾಗ್ರಹಣ ಮಾಡಿದ್ದು, ಹಾಲಿವುಡ್‌ನ ಜನಪ್ರಿಯ ಸೌಂಡ್ ಡಿಸೈನರ್ ಸ್ಕಾಟ್ ವುಲ್ಫ್ ಈ ಚಿತ್ರಕ್ಕೆ ಸೌಂಡ್ ಡಿಸೈನ್ ಮಾಡಿದ್ದಾರೆ.

ಈಗಾಗಲೇ ಹಲವು ಅಂತಾರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನವಾಗುವುದರ ಜೊತೆಗೆ ಪ್ರಶಸ್ತಿಗಳನ್ನು ಬಾಚಿಕೊಂಡಿರುವ ‘ರೋಡ್ ಕಿಂಗ್’ ಚಿತ್ರಕ್ಕೆ ಚಂದನ್ ಶೆಟ್ಟಿ ಅವರ ಸಂಗೀತ ಮತ್ತು ಶ್ರೀ ಕ್ರೇಜಿ ಮೈಂಡ್ಸ್ ಸಂಕಲನವಿದೆ.

‘ಯಾವ ಮೋಹನ ಮುರಳಿ ಕರೆಯಿತು’ ಟೀಸರ್ ಬಿಡುಗಡೆ



ಗೋಪಾಲಕೃಷ್ಣ ಅಡಿಗರ ‘ಯಾವ ಮೋಹನ ಮುರಳಿ ಕರೆಯಿತು’ ಜನಪ್ರಿಯ ಭಾವಗೀತೆ. ಈ ಹಾಡಿನ ಮೊದಲ ಸಾಲೇ ಈಗ ಚಿತ್ರದ ಶೀರ್ಷಿಕೆಯಾಗಿದೆ. ಇತ್ತೀಚಿಗೆ ಈ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ಫಿಲ್ಮ್ ಚೇಂಬರ್ ಅಧ್ಯಕ್ಷ ಭಾ.ಮಾ.ಹರೀಶ್ ಟೀಸರ್ ಬಿಡುಗಡೆ ಮಾಡಿ, ಚಿತ್ರಕ್ಕೆ ಶುಭ ಕೋರಿದರು. ‘ಯಾವ ಮೋಹನ ಮುರಳಿ ಕರೆಯಿತು’ ಮನುಷ್ಯ ಹಾಗೂ ಶ್ವಾನದ ನಡುವಿನ ಬಾಂಧವ್ಯದ ಕಥೆ ಹೇಳುವ ಚಿತ್ರ. ಭರವಸೆಯ ಹುಡುಕಾಟದಲ್ಲಿರುವ ಅಂಗವಿಕಲ ಬಾಲಕಿಗೆ, ಪ್ರೀತಿಯನ್ನು ಅರಸಿ ಹೊರಟಿದ್ದ ಶ್ವಾನವೊಂದು ಸಿಗುತ್ತದೆ. ಇವರಿಬ್ಬರ ನಡುವೆ ಉತ್ತಮ ಬಾಂಧವ್ಯ ಬೆಳೆಯುತ್ತದೆ. ಆ ಸಮಯದಲ್ಲಿ ಇವರಿಬ್ಬರ ನಡುವೆ ಮತ್ತೊಬ್ಬ ವ್ಯಕ್ತಿ ಪ್ರವೇಶಿಸುತ್ತಾನೆ. ನಂತರ ಏನಾಗುತ್ತದೆ ಎಂಬುದೇ ಚಿತ್ರದ ಕಥೆ. ಈಗಾಗಲೇ ಚಿತ್ರೀಕರಣ ಮುಗಿಸಿಕೊಂಡು ಬಿಡುಗಡೆಗೆ ಸಿದ್ಧವಾಗಿರುವ ಈ ಚಿತ್ರದಲ್ಲಿ ಮೂರು ಹಾಡುಗಳಿವೆ ಎಂದು ನಿರ್ದೇಶಕ ವಿಶ್ವಾಸ್ ಕೃಷ್ಣ ಹೇಳಿದರು. ಚಿತ್ರದ ನಿರ್ಮಾಪಕ ಶರಣಪ್ಪ ಗೌರಮ್ಮ ಮಾತನಾಡಿ, ನಾನು ಕಿಕ್ ಬಾಕ್ಸಿಂಗ್‌ನಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದು, ಸಿನಿಮಾ ಬಗ್ಗೆ ಅಷ್ಟು ಗೊತ್ತಿಲ್ಲ. ಸಾಹಿತಿ ಗೌಸ್ ಫಿರ್ ಅವರ ಮೂಲಕ ನಿರ್ದೇಶಕರ ಪರಿಚಯವಾಯಿತು. ಅವರು ಹೇಳಿದ ಕಥೆ ಇಷ್ಟವಾಗಿ ಚಿತ್ರ ನಿರ್ಮಾಣಕ್ಕೆ ಕೈಹಾಕಿದೆ ಎಂದು ತಿಳಿಸಿದರು.


ಚಿತ್ರದ ಪ್ರಮುಖ ಪಾತ್ರಧಾರಿ ಬೇಬಿ ಪ್ರಕೃತಿ, ನಾಯಕ ಮಾಧವ, ನಾಯಕಿ ಸ್ವಪ್ನಾ ಶೆಟ್ಟಿಗಾರ್, ಪಟೇಲ್ ವರುಣ್ ರಾಜ್ ಹಾಗೂ ಸಂಗೀತ ನಿರ್ದೇಶಕ ಅನಿಲ್ ಸಿ ಜೆ ಚಿತ್ರದ ಕುರಿತು ಮಾತನಾಡಿದರು. ವಿಶೇಷವಾಗಿ ಪತ್ರಿಕಾ ಗೋಷ್ಠಿಯಲ್ಲಿ ರಾಕಿ(ಶ್ವಾನ) ಕೂಡ ಹಾಜರಿತ್ತು.

ಪವಿತ್ರಾ ಲೋಕೇಶ್‌ರ ‘ಮತ್ತೆ ಮದುವೆ’ ಇಂದು ತೆರೆಗೆ

ಕಥೆಯ ಮೂಲಕ ಗಮನ ಸೆಳೆದಿದ್ದ ‘ಮತ್ತೆ ಮದುವೆ’ ಚಿತ್ರವು ಇಂದು ತೆರೆಕಂಡಿದೆ. ಕಳೆದವಾರ ತೆಲುಗಿನಲ್ಲಿ ‘ಮಳ್ಳಿ ಪೆಳ್ಳಿ’ ಹೆಸರಿನಲ್ಲಿ ತೆರೆಕಂಡ ಈ ಸಿನಿಮಾಗೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ದೊರೆಯಿತು. ಈಗ ಕನ್ನಡದಲ್ಲಿ ಬಿಡುಗಡೆಯಾಗುತ್ತಿದೆ. ಈಚೆಗೆ ಆರ್‌ವಿ ಥಿಯೇಟರ್ ನಲ್ಲಿ ಹಮ್ಮಿಕೊಳ್ಳಲಾಗಿದ್ದ ಪತ್ರಿಕಾ ಗೋಷ್ಠಿಯಲ್ಲಿ ಈ ಜೋಡಿ ಮತ್ತೆ ಮದುವೆ ಬಗ್ಗೆ ಸಾಕಷ್ಟು ವಿಷಯ ಹಂಚಿಕೊಂಡರು. ನಟ ನರೇಶ್ ಮಾತನಾಡಿ, ಈಗಾಗಲೇ ತೆಲುಗಿನಲ್ಲಿ ‘ಮಳ್ಳಿ ಪೆಳ್ಳಿ’ ಸಿನಿಮಾ ಬಿಡುಗಡೆಯಾಗಿ ಸಿನಿ ಪ್ರೇಕ್ಷಕರನ್ನು ರಂಜಿಸಿದೆ ಎಂದರು.

ಸಿನಿಪದಬಂಧ-477

ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.ಬ್ರಹ್ಮ ಮತ್ತು ಜೀವ ಬೇರೆಯಲ್ಲ ಒಂದೇ ಆಗಿದೆ ಇದು ನಟ ಚೇತನ್ ಪ್ರತಿಪಾದನೆ 3
2.ಬಿ. ಎಲ್. ವೇಣು ಕಾಲ್ಪನಿಕ ಪ್ರೇಮಕತೆಗೆ ಟಿ. ಎಸ್. ನಾಗಾಭರಣ ನಿರ್ದೇಶನವಿದೆ 7
4. ಹದ್ದಾಗಿ ಕುಕ್ಕಿದ ಮುದ್ದಿನ ಪಕ್ಷಿ 5
8. ಈ ಹಾಸ್ಯ ನಟ ಹೆಸರಿನಲ್ಲಿ ಸಂಗೀತಾಕ್ಷರಗಳನ್ನು ಇರಿಸಿಕೊಂಡಿದ್ದಾನೆ 6
9. ಕುಮಾರ್ ಬಂಗಾರಪ್ಪ ಕೋಪದಿ ಹೆಡೆ ಎತ್ತಿದ್ದಾನೆ 6
14. ಅಂಬರೀಷ್ – ಪ್ರಿಯಾಂಕ ಅಭಿನಯಕ್ಕೆ ಹೆಚ್. ಆರ್.ಭಾರ್ಗವ ನಿರ್ದೇಶಕ 6
17.ರಾಮಕೃಷ್ಣನ ಭವ್ಯ ಬಂಗಲೆಗೆ ಪ್ರೆಸ್ಟೀಜ್ ಇದೆ 6
19. "ಜೀವನದಿ"ಯ ದಡ 5
20." ಒಲವೇ ಹೂವಾಗಿ ಹೊಸ ಆಸೆ ತೋರಿಸಿದೆ...
ಒಲವೇ ಸವಿಜೇನು ನೀನು _ _ _ _ _ _ _ ಒಲವೇ.....", 7
21. ಯಮನಿಂದ ಪತಿಯನ್ನು ರಕ್ಷಿಸಿದ ಸತಿ 3

ಮೇಲಿನಿಂದ ಕೆಳಕ್ಕೆ

1. ನಿಗದಿತ ರಹಸ್ಯ ಸ್ಥಳಕ್ಕೆ ತನ್ನ ಪ್ರೇಮಿಯ ಭೇಟಿಗೆ ಹೋದವಳು ! 5
2.ಕುಮಾರ್ ಗೋವಿಂದ್ – ಶಿಲ್ಪಾ ಅಭಿನಯದ ಚೌಕಾಕಾರದ ಕೊಳ 3
3. ಜಂಗ್ಲಿ ಚಿತ್ರದ ನೀನೆಂದರೆ ನನ್ನೊಳಗೆ ಹಾಡಿನಲ್ಲಿ ಪುಷ್ಪ ವೃಷ್ಟಿಯಾಗಿದೆ 5
5.ಕೊಂಡುವ, ಕೊಳ್ಳುವ ನಡುವೆ ಬಂದ ಮಧ್ಯವರ್ತಿ 3
6.ಆರ್. ಎಕ್ಸ್ ನೊಂದಿಗಿನ ದುನಿಯಾ ವಿಜಯ್ 2
7.ಅಗ್ನಿ ಐ ಪಿ ಎಸ್ ಚಿತ್ರದ ನಾಯಕಿ 3
8.ಹಾವಿಲ್ಲ, ಆದರೂ ಇದು ಪೊಲೀಸರ ಬಿಗಿ ರಕ್ಷಣೆ 5
10. ದರ್ಶನ್ – ರಮ್ಯ ಅಭಿನಯದ ಚಿತ್ರ 2
11.ವೃತ್ತಿ ಜೀವನದಲ್ಲಿ ಅಂಬಿಗೆ ಈ ಚಿತ್ರ ಮೈಲಿಗಲ್ಲು 2
12. ಬಣ್ಣದ ಗೆಜ್ಜೆ ಕಟ್ಟಿದ ನಟಿಗೆ ಮತ್ತೇರಿದೆ 3
13.ಅಗ್ನಿ ಶ್ರೀಧರ್ ಕಾದಂಬರಿಯಲ್ಲಿ ಆದಿತ್ಯನ "ಗಟ್ಸ್" 5
15. ಅದಿ ಲೋಕೇಶ್ ಲಾಂಗು ಹಿಡಿದ ಉಪಾಸಕ 3
16.ಸುನಾದ್ ರಾಜ್ – ಸುಚಿತ್ರಳಾ ಗೆಳೆತನ ಸಿಹಿಯಾಗಿದೆ 5
18.ಈಕೆ 70–80 ರ ದಶಕದ ಕ್ಯಾಬರೆ ತಾರೆ 2
19."ಮಳೆ ನಿಂತು ಹೋದ ಮೇಲೆ ಹನಿಯೊಂದು ಮೂಡಿದೆ...
ಮಾತೆಲ್ಲ ಮುಗಿದ ಮೇಲೆ ದನಿಯೊಂದು _ _ _", 3

ವಿಜೇತರು: ಪರೀಕ್ಷಿತ್ ಕೆ.ಎಸ್, 332, 9-ಸಿ ಕ್ರಾಸ್, ಮಾಧವ ಪಾರ್ಕ್ ಹತ್ತಿರ, ಇ-ಎಫ್ ಬ್ಲಾಕ್, ರಾಮಕೃಷ್ಣನಗರ, ಮೈಸೂರು-22

ಸಿನಿ ಪದಬಂಧ 476ರ ಸರಿ ಉತ್ತರ

ಮುಂ	ದೈ	ತೆ	ಊ	ರ	ಹ	ಬ್ಬ		ಅ		
ಜಾ			ರಿ		ರಿ			ಜೇ		ಅ
ನೆ		ಹೊಂ	ಗೆ		ಹ	ರ	ಕೆ	ಯ	ಕು	ರಿ
ಯ			ಉ	ತ್ತ	ರ					ವು
ಮಂ	ಕು		ಪ		ನ್		ಭ	ವಾ	ನಿ	
ಜು			ಕಾ				ಕ್ತ			ಜ
	ಕ	ಶಾ	ರಿ		ರ		ಕ		ಮೂ	ಗ
ಅಂ					ತಿ	ಲ್ಲಾ	ನ			ದೇ
ಬಿ	ಸ	ರೋ	ಜಾ	ದೇ	ವಿ		ಕ	ರ್ಣ		ಕ
ಕಾ		ಹಿ			ಜ್ಞಾ		ದಾ			ವೀ
		ಣಿ		ಮಾ	ನ	ಸ	ಸ	ರೋ	ವ	ರ

ಮೈಸೂರು ಮಿತ್ರ ಶುಕ್ರವಾರ 9 ಜೂನ್ 2023

ನಾಳೆ ಮಂಡ್ಯ ನೂತನ ಶಾಸಕರಿಗೆ ಅಭಿನಂದನೆ

ಮಂಡ್ಯ, ಜೂ.8– ಕರ್ನಾಟಕ ಸಂಘದಿಂದ ಜೂ.10ರಂದು ಸಂಜೆ 4 ಗಂಟೆಗೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಂಡ್ಯ ಜಿಲ್ಲೆಯ 7 ಮಂದಿ ನೂತನ ಶಾಸಕರ ಅಭಿನಂದನಾ ಸಮಾರಂಭ ನಡೆಯಲಿದೆ ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶ್‌ಗೌಡ ತಿಳಿಸಿದರು.

ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಕೊಮ್ಮೇರಹಳ್ಳಿ ವಿಶ್ವಮಾನವ ಕ್ಷೇತ್ರದ ಶ್ರೀಪುರುಷೋತ್ತಮಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ವಿಧಾನಪರಿಷತ್ ಮಾಜಿ ಸದಸ್ಯ ಬಿ.ರಾಮಕೃಷ್ಣ ಅಧ್ಯಕ್ಷತೆ ವಹಿಸುವರು ಎಂದರು.

ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ರಮೇಶ್‌ಬಾಬು ಬಂಡಿಸಿದ್ದೇಗೌಡ, ಗಣಿಗ ರವಿಕುಮಾರ್, ಕೆ.ಎಂ. ಉದಯ್, ಎಚ್.ಟಿ.ಮಂಜು, ದರ್ಶನ್ ಪುಟ್ಟಣ್ಣಯ್ಯ ಅವರನ್ನು ಅಭಿನಂದಿಸುವರು. ವಿಶ್ರಾಂತ ಪ್ರಾಚಾರ್ಯ ಡಾ.ಎಸ್.ಬಿ.ಶಂಕರಗೌಡ ಅಭಿನಂದನಾ ಭಾಷಣ ಮಾಡುವರು. ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಮಧು ಜಿ. ಮಾದೇಗೌಡ, ದಿನೇಶ್ ಗೂಳಿಗೌಡ, ಮಾಜಿ ಶಾಸಕರಾದ ಎಂ.ಶ್ರೀನಿವಾಸ್, ಕೆ.ಟಿ.ಶ್ರೀಕಂಠೇಗೌಡ, ಜೆಡಿಎಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಫ್ರುಲ್ಲಾಖಾನ್ ಭಾಗವಹಿಸುವರು ಎಂದರು.

ಗೋಷ್ಠಿಯಲ್ಲಿ ಸಂಘದ ಸದಸ್ಯರಾದ ಹೆಚ್.ಬಿ.ನಾಗಪ್ಪ, ಮೋಹನ್‌ಪಾಪು, ಶಿವರುದ್ರ, ಸೋಮಶೇಖರ್ ಇದ್ದರು.

ಕಂದಾಯ, ಸುಂಕ ಹೆಚ್ಚಳ: ನಗರಸಭೆ ವಿರುದ್ಧ ಪ್ರತಿಭಟನೆ



ಮಂಡ್ಯ, ಜೂ.8– ಕಂದಾಯ ಹಾಗೂ ಸುಂಕ ಹೆಚ್ಚಿಸಿರುವ ನಗರಸಭೆ ಕ್ರಮ ಖಂಡಿಸಿ ಕರ್ನಾಟಕ ರಾಜ್ಯ ನಿವೇಶನ ಮತ್ತು ಕಟ್ಟಡ ಆಸ್ತಿ ತೆರಿಗೆದಾರರ ಒಕ್ಕೂಟದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಇಲ್ಲಿನ ನಗರಸಭೆ ಎದುರು ಪ್ರತಿಭಟನೆ ನಡೆಸಿದ ಒಕ್ಕೂಟದ ಕಾರ್ಯಕರ್ತರು, ನಗರಸಭೆಯವರು ಕಂದಾಯ ಹಾಗೂ ಘನ ತ್ಯಾಜ್ಯ ವಿಲೇವಾರಿಗಳ ಸುಂಕ ಹಾಗೂ ಅನಧಿಕೃತ ಕಟ್ಟಡಗಳ ಕಂದಾಯವನ್ನು ಅವೈಜ್ಞಾನಿಕವಾಗಿ ಏರಿಕೆ ಮಾಡಿರುವುದನ್ನು ಪರಿಷ್ಕರಣೆ ಮಾಡಲೇಬೇಕೆಂದು ಆಗ್ರಹಿಸಿ ಘೋಷಣೆ ಕೂಗಿದರು.

ಬಳಿಕ ನಗರಸಭೆ ಆಯುಕ್ತ ಮಂಜುನಾಥ್‌ಗೆ ಮನವಿ ಸಲ್ಲಿಸಿ ಮಾತನಾಡಿದ ಕಾಂಗ್ರೆಸ್ ಮುಖಂಡ ದೇವಯ್ಯ, ಕಳೆದ 2 ವರ್ಷಗಳಿಂದ ನಗರಸಭೆ ಮತ್ತು ವ್ಯಾಪ್ತಿಗೆ ಬರುವ ನಿವೇಶನ ಮತ್ತು ಕಟ್ಟಡದ ಆಸ್ತಿ ತೆರಿಗೆಯನ್ನು ಏಕಾಏಕಿ ಅವೈಜ್ಞಾನಿಕವಾಗಿ ಸಾವಿರಾರು ರೂ. ಹೆಚ್ಚುವರಿಯಾಗಿ ಪಾವತಿಸುವಂತೆ ಮಾಲೀಕರ ಮೇಲೆ ಅಧಿಕಾರಿಗಳು ಹೊರೆ ಹಾಕುತ್ತಾರೆ. ಅಲ್ಲದೇ ಘನ ತ್ಯಾಜ್ಯ ವಿಲೇವಾರಿ ಮತ್ತು ಯುಜಿಡಿ ಸುಂಕವನ್ನು ಕೂಡ ಈ ಹಿಂದೆ ಇದ್ದ ದರಕ್ಕಿಂತ 10 ಪಟ್ಟು ಹೆಚ್ಚು ಮಾಡಿದ್ದಾರೆ. ಮನೆ ಕಟ್ಟಲು ಅನುಮೋದನೆಗೆ ವಿಳಂಬ, ನೀರು ಸರಬರಾಜಿನಲ್ಲಿ ವಿಳಂಬ ನೀತಿ ಅನುಸರಿಸುತ್ತಿದ್ದು, ಅನಧಿಕೃತ ಕಟ್ಟಡಗಳು ಒಂದು ಚದರ ಇದ್ದು ಅಧಿಕೃತವಾಗಿ 10 ಚದರದ ಕಟ್ಟಡ ಇದ್ದರೆ ಪೂರ್ತಿ ಹತ್ತು ಚದುರಕ್ಕೂ ಅನಧಿಕೃತವಾಗಿ ಎರಡು ಪಟ್ಟು ಕಂದಾಯವನ್ನು ಕಾನೂನುಬಾಹಿರವಾಗಿ ವಸೂಲಿ ಮಾಡಲಾಗುತ್ತಿದೆ. ಈ ಹಿಂದೆ ಅಧಿಕೃತ ಕಟ್ಟಡಕ್ಕಿಂತ ಹೆಚ್ಚುವರಿ ಅನಧಿಕೃತ ಕಟ್ಟಡ ನಿರ್ಮಾಣಕ್ಕೆ ಮಾತ್ರ ಕಂದಾಯ ನಿಗದಿ ಮಾಡಿಕೊಂಡು ಬರಲಾಗಿತ್ತು ಎಂದು ಆಯುಕ್ತರ ಗಮನಕ್ಕೆ ತಂದರು.

ನೀರಿನ ಕಂದಾಯವಂತೂ ಅವೈಜ್ಞಾನಿಕವಾಗಿದ್ದು, ಈಗಾಗಲೇ ವಿಧಾನಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ ಹಾಗೂ ದಿನೇಶ್ ಗೂಳಿಗೌಡರು ಮಧ್ಯಪ್ರವೇಶಿಸಿ 200 ರೂ. ಗಳಿಗೆ ಶುಲ್ಕ ಇಳಿಸಿದ್ದರು. ಅದನ್ನು ಜಲ ಮಂಡಳಿ ಅಧಿಕೃತವಾಗಿ ಜಾರಿಗೆ ತಂದಿಲ್ಲ. ಇನ್ನು 2 ಸಾವಿರಕ್ಕೂ ಹೆಚ್ಚಿನ ನಿವೇಶನಗಳಿಗೆ 40 ವರ್ಷಗಳ ಹಿಂದೆಯೇ ಕಿಮ್ಮತ್ತು ಪಾವತಿಸಿಕೊಂಡು ಎಂಡಾರ್ಸ್‌ಮೆಂಟ್ ಹಾಗೂ ಎಲ್ಲಾ ಸೌಲಭ್ಯಗಳನ್ನು ನೀಡಿದ್ದರು. ಇದುವರೆಗೂ ನಗರಸಭೆಯಿಂದ ಹಕ್ಕುಪತ್ರಗಳನ್ನು ನೀಡಿಲ್ಲ, ಖಾತೆ ಮಾಡಿಕೊಟ್ಟಿಲ್ಲ. ಆದ್ದರಿಂದ ಕೂಡಲೇ ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು. ನ್ಯಾಯಯುತವಾಗಿ ಕಂದಾಯ ನಿಗದಿಪಡಿಸಿ ಗಣಕೀಕೃತ ಈ ಸ್ವತ್ತು ನಮೂನೆ ಮೂರು ಮತ್ತು ಖಾತೆ ಮಾಡುವುದರಲ್ಲಿ ವಿಳಂಬವನ್ನು ತಪ್ಪಿಸಬೇಕು ಎಂದು ಆಗ್ರಹಿಸಿದರು. ಈ ವೇಳೆ ಆಸ್ತಿ ತೆರಿಗೆದಾರರ ಒಕ್ಕೂಟದ ಜಿ.ಶಿವಲಿಂಗಯ್ಯ, ಎಂ.ಚಂದ್ರು, ಬೋರೇಗೌಡ, ಸಿದ್ದಯ್ಯ, ಸಿದ್ದೇಗೌಡ ಇದ್ದರು.

ರೈತರಿಗೆ ತೊಂದರೆಯಾಗದಂತೆ ಕಾರ್ಯ ನಿರ್ವಹಿಸಿ

ಶ್ರೀಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ ಉಪಾಧ್ಯಕ್ಷ ಮಣಿ ತಾಕೀತು



ಭಾರತೀನಗರ, ಜೂ.8– ರೈತರಿಗೆ ತೊಂದರೆಯಾಗದಂತೆ ಕಾರ್ಯ ನಿರ್ವಹಿಸಿ ಎಂದು ಕಬ್ಬು ವಿಭಾಗದ ಕ್ಷೇತ್ರ ಸಿಬ್ಬಂದಿಗಳಿಗೆ ಶ್ರೀ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ ಉಪಾಧ್ಯಕ್ಷ ಮಣಿ ತಾಕೀತು ಮಾಡಿದರು.

ಕಾರ್ಖಾನೆ ಅತಿಥಿ ಗೃಹದಲ್ಲಿ ನಡೆದ ಕಬ್ಬು ವಿಭಾಗದ ಕ್ಷೇತ್ರ ಸಿಬ್ಬಂದಿಗಳ ಸಭೆಯಲ್ಲಿ ಮಾತನಾಡಿದ ಅವರು, ರೈತರಿಗೆ ಕಬ್ಬಿನ ದರದ ಬಗ್ಗೆ ಮನವರಿಕೆ ಮಾಡಿಕೊಡುವ ಜೊತೆಗೆ ರೈತರ ಕಬ್ಬನ್ನು ಸಕಾಲಕ್ಕೆ ಕಾರ್ಖಾನೆಗೆ ಸಾಗಿಸುವ ಕೆಲಸವನ್ನು ಕಟ್ಟುನಿಟ್ಟಾಗಿ ಮಾಡಬೇಕೆಂದರು. ರೈತರಿಗೆ ಸಕಾಲದಲ್ಲಿ ಕಟಾವು ಆದೇಶ ನೀಡಿ ಯಾವುದೇ ತೊಂದರೆಯಾಗದಂತೆ ಕಾರ್ಖಾನೆಗೆ ಕಬ್ಬನ್ನು ಸರಬರಾಜು ಮಾಡಬೇಕು. ಕಾರ್ಖಾನೆ ಕಬ್ಬು ಅಭಿವೃದ್ಧಿ ಕಾರ್ಯಕ್ರಮಗಳಾದ ಕಾಂಪೋಸ್ಟ್ ನೀಡುವುದು. ಹೊಸ ತಳಿ ಮತ್ತು ಮಾದರಿ ತಾಕುಗಳ ಅಭಿವೃದ್ಧಿ ಯೋಜನೆಯನ್ನು ರೈತರಿಗೆ ತಲುಪಿಸಬೇಕು. ರೈತರು ಹೆಚ್ಚು ಕಬ್ಬು ಇಳುವರಿ ಪಡೆಯುವ ಮೂಲಕ ಹೆಚ್ಚು ಲಾಭ ಪಡೆಯುವಂತೆ ಮನವರಿಕೆ ಮಾಡಿಕೊಡಬೇಕು ಎಂದರು.

ಕಬ್ಬು ಸರಬರಾಜು ಮಾಡಿದ ರೈತರಿಗೆ ತಿಂಗಳೊಳಗೆ ಹಣ ಬಟವಾಡೆ ಮಾಡಲಾಗುವುದು. ಪ್ರಸಕ್ತ ಸಾಲಿನಲ್ಲಿ ಟನ್ ಕಬ್ಬಿಗೆ ಮುಂಗಡ 2864 ರೂ. ನೀಡಲಾಗುವುದು. ನಂತರ ಸರ್ಕಾರ ನಿಗದಿಪಡಿಸುವ ಎಫ್‌ಆರ್‌ಪಿ ದರ ಕೊಡಲು ಆಡಳಿತ ಮಂಡಳಿ ಬದ್ಧವಾಗಿದೆ ಎಂದರು.

ಇದೇ ವೇಳೆ ಕಬ್ಬು ವಿಭಾಗದ ಸಹಾಯಕ ಪ್ರಧಾನ ವ್ಯವಸ್ಥಾಪಕ ಎಸ್.ಎನ್.ಮಹದೇವ ಪ್ರಭು, ವ್ಯವಸ್ಥಾಪಕ ಶಿವಪ್ಪ, ಹಿರಿಯ ಸಲಹೆಗಾರರಾದ ಗಣೇಶನ್, ಸಿ.ನಾಗರಾಜು, ಆಡಳಿತಾಧಿಕಾರಿ ನಿತೀಶ್, ನಿಂಗಯ್ಯ, ಸೇರಿದಂತೆ ಹಲವರಿದ್ದರು.

ಭರವಸೆಯಂತೆ ಐದು ಗ್ಯಾರಂಟಿ ಜಾರಿ

ಯಾವುದೇ ಅನುಮಾನ ಬೇಡ: ಸಚಿವ ಚೆಲುವರಾಯಸ್ವಾಮಿ



ಮದ್ದೂರು, ಜೂ.8– ಕಾಂಗ್ರೆಸ್ ಪಕ್ಷ ಚುನಾವಣಾ ಪೂರ್ವದಲ್ಲಿ ನೀಡಿದ ಭರವಸೆಯಂತೆ ಐದು ಗ್ಯಾರಂಟಿಗಳನ್ನು ಜಾರಿಗೊಳಿಸಲಿದೆ. ಈ ಬಗ್ಗೆ ರಾಜ್ಯದ ಜನರಿಗೆ ಯಾವುದೇ ಅನುಮಾನ ಬೇಡ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ತಾಲೂಕಿನ ಕೊಪ್ಪದಲ್ಲಿ ನಡೆದ ಕೃತಜ್ಞತಾ ಸಭೆಯಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಅಧಿಕಾರಕ್ಕೆ ಬಂದ ತಕ್ಷಣ ಭರವಸೆಗಳನ್ನು ಈಡೇರಿಸಿದ ಪಕ್ಷ ಇದ್ದರೇ ಅದು ಕಾಂಗ್ರೆಸ್. ಇದನ್ನು ಸಹಿಸಿಕೊಳ್ಳದ ವಿಪಕ್ಷದವರು ಬಾಲ ಸುಟ್ಟ ಬೆಕ್ಕಿನಂತೆ ಆಡುತ್ತಿದ್ದಾರೆ ಎಂದು ವ್ಯಂಗವಾಡಿದರು.

ಕೊಪ್ಪ ಭಾಗದಲ್ಲಿ ಗಾರ್ಮೆಂಟ್ಸ್, ಸಬ್‌ರಿಜಿಸ್ಟರ್ ಕಚೇರಿ, ಪ್ರತಿ ಗ್ರಾಮಕ್ಕೂ ಕುಡಿಯುವ ನೀರು, ರಸ್ತೆ, ನಾಡ ಕಚೇರಿ ಸೇರಿದಂತೆ ಮೂಲ ಸೌಕರ್ಯಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು ಎಂದ ಅವರು, ಮಂಡ್ಯದ ಮೈಷುಗರ್ ಸಕ್ಕರೆ ಕಾರ್ಖಾನೆ ಪುನಶ್ಚೇತನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ 50 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದಾರೆ. ಸದ್ಯದಲ್ಲೇ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಕಾರ್ಯ ಆರಂಭವಾಗಲಿದೆ ಎಂದರು.

ಈ ವೇಳೆ ನಾಗಮಂಗಲ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಎನ್.ದಿವಾಕರ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಕೆ.ಸಿ.ಜೋಗಿಗೌಡ, ವಕೀಲ ರಾಮಕೃಷ್ಣ ಮುಖಂಡರಾದ ಡಿ.ಸಿ.ಕೃಷ್ಣೇಗೌಡ, ಹರೀಶ್, ರಮೇಶ್, ಸಿ.ತಮ್ಮಯ್ಯ, ಕರಿಗೌಡ, ಚಂದ್ರಣ್ಣ, ಮೋಹನ್, ಶ್ರೀನಿವಾಸ್, ಆನಂದ್, ಪುಟ್ಟಸ್ವಾಮಿ, ರಾಮಕೃಷ್ಣ, ಪುಟ್ಟಸ್ವಾಮಿ, ತಾಪಂ ಮಾಜಿ ಉಪಾಧ್ಯಕ್ಷ ರಘು, ಸದಸ್ಯ ತೋಂಯಾಜಾಕ್ಷ ಇದ್ದರು.

ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧ

ಮಂಡ್ಯ, ಜೂ.8– ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ 2023ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆ ಜೂ.12ರಿಂದ 19 ರವರೆಗೆ ನಡೆಯಲಿದೆ.

ಪರೀಕ್ಷೆ ಸುಗಮವಾಗಿ ನಡೆಯಲು ಜಿಲ್ಲಾ ವ್ಯಾಪ್ತಿಯ 9 ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಪರೀಕ್ಷಾ ದಿನಗಳಂದು 200 ಮೀಟರ್ ವ್ಯಾಪ್ತಿ ಪ್ರದೇಶವನ್ನು ನಿಷೇಧಿತ ಪ್ರದೇಶ ವೆಂದು ಘೋಷಿಸಿದೆ.

ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಇರುವ ಜೆರಾಕ್ಸ್ ಮತ್ತು ಕಂಪ್ಯೂಟರ್/ಸೈಬರ್ ಅಂಗಡಿಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಜಿಲ್ಲಾಧಿಕಾರಿ ಡಾ. ಹೆಚ್.ಎನ್. ಗೋಪಾಲಕೃಷ್ಣ ಅವರು ಆದೇಶ ಹೊರಡಿಸಿದ್ದಾರೆ.

ಪರೀಕ್ಷಾರ್ಥಿಗಳು ಮತ್ತು ಪರೀಕ್ಷಾ ಕಾರ್ಯಕ್ಕೆ ನೇಮಕಗೊಂಡ ಅಧಿಕಾರಿಗಳು/ ಸಿಬ್ಬಂದಿ ಹೊರತುಪಡಿಸಿ ಇತರರು ನಿಷೇಧಿತ ಪ್ರದೇಶದೊಳಗೆ ಪ್ರವೇಶಿಸುವಂತಿಲ್ಲ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಹಬ್ಬ ಹರಿದಿನ ನಮ್ಮ ಸಂಸ್ಕೃತಿಯ ಪ್ರತೀಕ: ಮಲ್ಲಿಕಾರ್ಜುನ್



ಕೆ.ಆರ್.ಪೇಟೆ, ಜೂ.8– ಗುಡಿ–ಗೋಪುರ, ಹಬ್ಬ–ಹರಿದಿನ, ಜಾತ್ರೆ–ಉತ್ಸವಗಳು ನಮ್ಮ ಸಂಸ್ಕೃತಿಯ ಪ್ರತೀಕ ಎಂದು ಸಮಾಜ ಸೇವಕ ಹಾಗೂ ಆರ್‌ಟಿಓ ಅಧಿಕಾರಿ ಮಲ್ಲಿಕಾರ್ಜುನ್ ತಿಳಿಸಿದರು.

ತಾಲೂಕಿನ ಚಿಲ್ಲದಹಳ್ಳಿ ಗ್ರಾಮದಲ್ಲಿ 80 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಗ್ರಾಮದೇವತೆ ಶ್ರೀಮಾಯಮ್ಮ ದೇವಿ ದೇವಾಲಯದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಮಾನವ ಶಾಂತಿ, ನೆಮ್ಮದಿಯನ್ನು ಮಾರುಕಟ್ಟೆಯಲ್ಲಿ ಕೊಳ್ಳಲು ಸಾಧ್ಯವಿಲ್ಲ. ಬದಲಿಗೆ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ಬಡವರಿಗೆ ಕೈಲಾದ ದಾನ ಧರ್ಮ ಮಾಡಿದಾಗ ಮಾತ್ರ ಶಾಂತಿ, ನೆಮ್ಮದಿ ಪಡೆಯಬಹುದು. ಗ್ರಾಮೀಣ ದೇವಾಲಯದ ಅಭಿವೃದ್ಧಿಗೆ ಪ್ರತಿಯೊಬ್ಬರೂ ಶ್ರಮಿಸಬೇಕು ಎಂದ ಅವರು, ಚಿಲ್ಲದಹಳ್ಳಿ ಗ್ರಾಮಸ್ಥರು 1ವರ್ಷದ ಅವಧಿಯಲ್ಲಿ ಶ್ರೀಮಾಯಮ್ಮ ದೇವಿ ದೇವಾಲಯವನ್ನು ಸುಂದರವಾಗಿ ನಿರ್ಮಿಸಿರುವುದು ಶ್ಲಾಘನೀಯ ಎಂದರು.

ಮಿತ್ರ ಫೌಂಡೇಷನ್ ಅಧ್ಯಕ್ಷ ಮತ್ತು ಕಾಂಗ್ರೆಸ್ ಮುಖಂಡ ವಿಜಯ್ ರಾಮೇಗೌಡ ಮಾತನಾಡಿ, ನಮ್ಮ ಹಿರಿಯರು ಹಬ್ಬ ಹರಿದಿನಗಳಲ್ಲಿ ಒಂದೆಡೆ ಸೇರಿ ಪೂಜೆ ಸಲ್ಲಿಸಿ ಪರಸ್ಪರ ಶುಭಾಷಯ ವಿನಿಮಯ ಮಾಡಿಕೊಳ್ಳುತ್ತಿದ್ದರು. ಇದರಿಂದ ಜನರು ಸಂತೋಷ, ಪರಸ್ಪರ ಸೌಹಾರ್ದತೆಯಿಂದ ಜೀವನ ನಡೆಸಲು ಸಹಕಾರಿಯಾಗಿತ್ತು. ಈ ನಿಟ್ಟಿನಲ್ಲಿ ಚಿಲ್ಲದಹಳ್ಳಿ ಗ್ರಾಮಸ್ಥರು ಶಿಥಿಲಾವಸ್ಥೆಯಲ್ಲಿದ್ದ ಶ್ರೀಮಾಯಮ್ಮ ದೇವಾಲಯವನ್ನು ಪುನರ್ ನಿರ್ಮಾಣ ಮಾಡಿರುವುದು ಶ್ಲಾಘನೀಯ ಎಂದರು.

ಇದೇ ವೇಳೆ ಕಿರುತೆರೆ ಕಲಾವಿದ ಅಬಾರಾಶೆ ಚಂದ್ರಶೇಖರ್ ನೇತೃತ್ವ ಕಲಾವಿದರು ದೇವರ ಭಕ್ತಿ ಗೀತಗಾಯನ ಕಾರ್ಯಕ್ರಮ ನಡೆಸಿಕೊಟ್ಟರು.

ದೇವಾಲಯದ ಟ್ರಸ್ಟ್ ಅಧ್ಯಕ್ಷ ಪಟೇಲ್ ನಾಗೇಗೌಡ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ತಾಪಂ ಮಾಜಿ ಸದಸ್ಯ ಮಾಧವ ಪ್ರಸಾದ್, ದಾನಿಗಳಾದ ಇಂಜಿನಿಯರ್ ಚಂದ್ರೇಗೌಡ, ಜಯರಾಮು, ದೇವರಾಜು, ಜವರಣ್ಣನ ರಮೇಶ್, ಮೆಣಸ ರಮಾನಂದ್, ಶಿಕ್ಷಣ ಇಲಾಖೆ ಅಕ್ಷರ ದಾಸೋಹ ಅಧಿಕಾರಿ ಸಿ.ಎನ್.ಯತೀಶ್, ಕೆ.ಬಿ.ಸಿ.ಮಂಜುನಾಥ್, ಕೆ.ಚಂದನ್ ಗೌಡ, ಗ್ರಾಪಂ ಸದಸ್ಯರಾದ ಆರ್.ಶ್ರೀನಿವಾಸ್, ರಮೇಶ್, ರಮಾನಂದ್, ದೇವಾಲಯ ಟ್ರಸ್ಟ್ ಉಪಾಧ್ಯಕ್ಷ ವೆಂಕಟೇಶ್, ರಘು, ಕಾರ್ಯದರ್ಶಿ ಜಯರಾಮೇಗೌಡ, ಖಜಾಂಚಿ ಮಹೇಂದ್ರ, ಪಟೇಲ್ ಬಲರಾಮೇಗೌಡ, ಮಂಜೇಗೌಡ, ಪೂಜಾರಿ ಕೃಷ್ಣೇಗೌಡ, ಬಸವರಾಜು, ಸಿ.ಎನ್.ಸತೀಶ್, ಮಂಜೇಗೌಡ, ಕುಮಾರ್, ರಮೇಶ್, ಮಾಯಣ್ಣ, ತಮ್ಮಯ್ಯಣ್ಣ, ಎ.ಬಿ.ಸುಬ್ಬೇಗೌಡ, ಎ.ಸಿ.ಕಾಂತರಾಜು, ಎ.ಬಿ.ಅಶೋಕ್ ಸೇರಿದಂತೆ ಇತರರಿದ್ದರು. 3 ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಭಕ್ತರಿಗೆ ಅನ್ನದಾನ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಜಿಲ್ಲಾಧಿಕಾರಿಗಳ ಕಚೇರಿ ಸಿದ್ಧಾರ್ಥನಗರದ ಹೊಸ ಕಟ್ಟಡಕ್ಕೆ ಸ್ಥಳಾಂತರ



ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣ

ಒಂದನೇ ಪುಟದಿಂದ

ದೊಡ್ಡ ಪ್ರಾಂಗಣ ಜಿಲ್ಲಾಧಿಕಾರಿಗಳ ನ್ಯಾಯಾಲಯವಾಗಿದೆ. ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಮಾದರಿಯ ಇಂಡೋ ಸಾರ್ಸೆನಿಕ್ ಶೈಲಿಯಲ್ಲಿ ನಿರ್ಮಿಸಿರುವ ಹೊಸ ಜಿಲ್ಲಾ ಮಟ್ಟದ ಕಚೇರಿಗಳ ಸಮುಚ್ಚಯವನ್ನು 2018ರ ಮಾರ್ಚ್ ತಿಂಗಳಲ್ಲಿ ಅಂದೂ ಸಹ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಉದ್ಘಾಟಿಸಿದ್ದರು. ಅವರೇ 2016ರ ಅಕ್ಟೋಬರ್ ತಿಂಗಳಲ್ಲಿ 84.66 ಕೋಟಿ ರೂ. ವೆಚ್ಚದಲ್ಲಿ ಈ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಮೊದಲ ದಿನವಾದ ಇಂದು ಹೊಸ ಕಚೇರಿಯ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಗಣಿ ಮತ್ತು ಭೂ ವಿಜ್ಞಾನ, ಲೋಕೋಪಯೋಗಿ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳೊಂದಿಗೆ ಜಿಲ್ಲೆಯಲ್ಲಿ ಮರಳು ಪರಿಸ್ಥಿತಿ, ಈ ಹಿಂದೆ ವಶಪಡಿಸಿಕೊಂಡಿರುವ ಮರಳನ್ನು ಸರ್ಕಾರಿ ಕಾಮಗಾರಿಗಳಿಗೆ ಬಳಸಿಕೊಳ್ಳುವ ಕುರಿತಂತೆ ಚರ್ಚಿಸಿದರು.

1895ರಲ್ಲಿ ಮೈಸೂರಿನ ಹೃದಯ ಭಾಗದಲ್ಲಿ ನಿರ್ಮಾಣವಾದ ಪಾರಂಪರಿಕ ಕಟ್ಟಡದಲ್ಲಿ ಅಂದಿನ ಮಹಾರಾಜರಾದ ಚಾಮರಾಜ ಒಡೆಯರ್ ಅವರು ಜನಪ್ರತಿನಿಧಿಗಳ ಅಧಿವೇಶನ ನಡೆಸಿದ್ದರು. ನಂತರ ಈ ಕಟ್ಟಡವು ಮೈಸೂರು ರಾಜ್ಯದ ಚೀಫ್ ಕಮಿಷ್ನರ್ ಕಚೇರಿಯಾಗಿ ಪರಿವರ್ತನೆಯಾಯಿತು. ಮುಂದೆ ಪ್ರಜಾಪ್ರಭುತ್ವ ಆಡಳಿತ ಬಂದ ನಂತರ ವಿಭಾಗೀಯ ಆಯುಕ್ತರ ಕಚೇರಿಯಾಗಿ, ಬಳಿಕ ಜಿಲ್ಲಾಧಿಕಾರಿಗಳ ಕಚೇರಿಯಾಗಿ ಬದಲಾಗಿತ್ತು.

ಹೊಸ ಕಟ್ಟಡ: ವಾಹನ ನಿಲುಗಡೆಗಾಗಿ ಸೆಲ್ಲರ್, ನೆಲಮಹಡಿ, ಮೊದಲ ಮಹಡಿ ಮತ್ತು ಎರಡನೇ ಮಹಡಿಗಳನ್ನೊಳಗೊಂಡ ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣಕ್ಕೆ ಕ್ಯಾಪ್ಸೂಲ್ ಆಕಾರದ ಲಿಫ್ಟ್ ಅಳವಡಿಸಲಾಗಿದೆ. ಜಿಲ್ಲಾಧಿಕಾರಿಗಳ ಕಚೇರಿ ಮೊದಲ ಮಹಡಿಯಲ್ಲಿ ಕಾರ್ಯ ನಿರ್ವಹಿಸಲಿದೆ. ಅದಕ್ಕೆ ಹೊಂದಿಕೊಂಡಂತಿರುವ ಕೋರ್ಟ್ ಹಾಲ್‌ನಲ್ಲಿ ಡಿಸಿ ನ್ಯಾಯಾಲಯದ ಕಲಾಪಗಳು ನಡೆಯಲಿವೆ.

ಸ್ಥಳಾಂತರಗೊಂಡ ಇಲಾಖೆಗಳು: ಈಗಾಗಲೇ ಈ ಹೊಸ ಕಟ್ಟಡಕ್ಕೆ ಆಹಾರ ಮತ್ತು ನಾಗರಿಕ ಸರಬರಾಜು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ, ನಗರ ಅಭಿವೃದ್ಧಿ ಕೋಶ, ಮುಜರಾಯಿ ಇಲಾಖೆಗಳು ಸ್ಥಳಾಂತರಗೊಂಡು ಕಾರ್ಯ ನಿರ್ವಹಿಸುತ್ತಿವೆ. ಇಂದು ಎಡಿಸಿ, ಎಸಿ ಕಚೇರಿಗಳೂ ಹೊಸ ಕಟ್ಟಡಕ್ಕೆ ಸ್ಥಳಾಂತರಗೊಂಡವು. ಜಿಲ್ಲಾ ಖಜಾನೆ ಮತ್ತು ಡಿಸಿ ನ್ಯಾಯಾಲಯವನ್ನು ಒಂದು ವಾರದೊಳಗೆ ಸ್ಥಳಾಂತರಿಸಲಾಗುವುದು ಎಂದು ಡಿಸಿ ಡಾ. ಕೆ.ವಿ.ರಾಜೇಂದ್ರ ತಿಳಿಸಿದರು.

ಚುನಾವಣಾ ಸಭೆಗಳು: 2023ರ ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಸಭೆಗಳು ಸೇರಿದಂತೆ ಪ್ರಕ್ರಿಯೆಗಳು ಈ ಹೊಸ ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣದಲ್ಲೇ ನಡೆಯುತ್ತಿದ್ದವು. ಈಗ ಸಂಪೂರ್ಣವಾಗಿ ಇಲ್ಲಿ ಕಚೇರಿ ಕೆಲಸಗಳು ನಡೆಯಲಿವೆ ಎಂದು ಅವರು ತಿಳಿಸಿದರು.

ನಿರ್ವಹಣೆಗೆ ಅನುದಾನ: ಈ ಹೊಸ ಬೃಹತ್ ಕಟ್ಟಡದ ಸ್ವಚ್ಛತೆ, ನಿರ್ವಹಣೆ ಹಾಗೂ ಅಗತ್ಯವಿರುವ ಪೀಠೋಪಕರಣ ಹಾಗೂ ಇತರ ಸಲಕರಣೆಗಳಿಗಾಗಿ ಅಂದಾಜು ರೂಪಿಸಿ, ಅನುದಾನ ತರಿಸಿಕೊಳ್ಳುತ್ತೇವೆ. ಸಾರ್ವಜನಿಕರಿಗೆ ಕುಡಿಯುವ ನೀರು, ಶೌಚಾಲಯ, ಬಸ್ ವ್ಯವಸ್ಥೆ ಸೇರಿದಂತೆ ಎಲ್ಲಾ ಮೂಲ ಸೌಕರ್ಯ ಒದಗಿಸುತ್ತೇವೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.



ಹೊಸ ಕಟ್ಟಡಕ್ಕೆ ಸಾಮಗ್ರಿ ಸ್ಥಳಾಂತರಿಸುತ್ತಿರುವುದು



ಗಣಿ ಮತ್ತು ಭೂ ವಿಜ್ಞಾನ ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ಸಭೆ ನಡೆಸಿದರು.

ಹಳೇ ಡಿಸಿ ಕಚೇರಿ ಮ್ಯೂಸಿಯಂ?

ಮೈಸೂರು, ಜೂ.8(ಆರ್‌ಕೆ)–ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿ ಹಳೇ ಪಾರಂಪರಿಕ ಕಟ್ಟಡವನ್ನು ಮ್ಯೂಸಿಯಂ ಆಗಿ ಪರಿವರ್ತಿಸಲು ಚಿಂತನೆ ನಡೆಸಲಾಗಿದೆ.

ಜಿಲ್ಲಾಧಿಕಾರಿ ಕಚೇರಿ ಹಾಗೂ ಎಲ್ಲಾ ವಿಭಾಗಗಳನ್ನು ಸಿದ್ಧಾರ್ಥನಗರದ ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣಕ್ಕೆ ಸ್ಥಳಾಂತರಿಸಿರುವುದರಿಂದ ಖಾಲಿ ಇರುವ ಈ ಹಳೇ ಪಾರಂಪರಿಕ ಕಟ್ಟಡವನ್ನು ಮೈಸೂರಿನ ಕಂದಾಯ ಇಲಾಖೆ ಕಚೇರಿ ಕಡತಗಳು, ಐತಿಹಾಸಿಕ ಹಾಗೂ ರಾಜಪ್ರಭುತ್ವದ ಆಡಳಿತ, ಪಾರಂಪರಿಕ ಸ್ಮಾರಕಗಳ ಮಾಹಿತಿ ಸೇರಿದಂತೆ ಇನ್ನಿತರ ಅಪರೂಪದ ವಸ್ತುಗಳ ಸಂಗ್ರಹಾಲಯವನ್ನಾಗಿ ಪರಿವರ್ತಿಸಿ ಪ್ರವಾಸಿಗರು, ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಕಲ್ಪಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅಭಿಪ್ರಾಯಪಟ್ಟಿದ್ದಾರೆ. ಈ ಕುರಿತು ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು, ಜನಪ್ರತಿನಿಧಿಗಳು ಹಾಗೂ ಹಿರಿಯರ ಸಲಹೆ, ಮಾರ್ಗದರ್ಶನ ಪಡೆದು ಹಳೇ ಡಿಸಿ ಕಚೇರಿ ಕಟ್ಟಡದ ಬಗ್ಗೆ ನಿರ್ಧರಿಸಲಾಗುವುದು. ಅಂತಿಮವಾಗಿ ಮುಖ್ಯಮಂತ್ರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ನಿರ್ದೇಶನದಂತೆ ಕ್ರಮ ವಹಿಸುತ್ತೇವೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಹಳೇ ಕಟ್ಟಡ



ವಿರಾಜಪೇಟೆಗೆ ಭ್ರಷ್ಟ ಅಧಿಕಾರಿಗಳು ಬೇಡ, ಪ್ರಾಮಾಣಿಕರು ಬೇಕು

ಭ್ರಷ್ಟ ಅಧಿಕಾರಿಗಳ ಪರ ವಹಿಸದಂತೆ ಕಾರ್ಯಕರ್ತರಿಗೆ ಶಾಸಕ ಎ.ಎಸ್. ಪೊನ್ನಣ್ಣ ಮನವಿ

- ಪೊಲೀಸ್ ಇಲಾಖೆ ದಕ್ಷತೆಯಿಂದ ಕೆಲಸ ಮಾಡಬೇಕು
- ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹರಡುವವರ ವಿರುದ್ಧ ಕ್ರಮ ಕೈಗೊಳ್ಳಿ
- ಗ್ಯಾರಂಟಿಗಳಿಗೆ ಕಂಡಿಷನ್‌ಗಳು ನ್ಯಾಯಸಮ್ಮತ



ವಿರಾಜಪೇಟೆ, ಜೂ.8– ತಾಲೂಕಿಗೆ ಭ್ರಷ್ಟ ಅಧಿಕಾರಿಗಳು ಬೇಡ, ಪ್ರಾಮಾಣಿಕ ಅಧಿಕಾರಿಗಳು ಬೇಕು ಎಂದು ಹೇಳುವ ಮೂಲಕ ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ತಾಲೂಕಿನಲ್ಲಿ ಭ್ರಷ್ಟಾಚಾರ ರಹಿತ ಆಡಳಿತ ನಡೆಸಲು ಮುನ್ನುಡಿ ಬರೆದಿದ್ದಾರೆ.

ಪಟ್ಟಣದ ಸೆರಿನಿಟಿ ಹಾಲ್‌ನಲ್ಲಿ ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಕೃತಜ್ಞತಾ ಸಭೆಯಲ್ಲಿ ಮಾತನಾಡಿದ ಅವರು, ಕಾರ್ಯಕರ್ತರು ದಯವಿಟ್ಟು ಭ್ರಷ್ಟ ಅಧಿಕಾರಿಗಳ ಪರ ವಹಿಸಿ ನನ್ನ ಬಳಿಗೆ ಕರೆದುಕೊಂಡು ಬರಬೇಡಿ, ನನಗೆ ಉತ್ತಮ ಮತ್ತು ಪ್ರಾಮಾಣಿಕವಾಗಿ ಕೆಲಸ ಮಾಡುವ ಅಧಿಕಾರಿಗಳು ಬೇಕು. ಅಂತಹವರಿಗೆ ಬೆಂಬಲ ಕೊಡುವುದಾಗಿ ತಿಳಿಸಿದರು.

ಪೊಲೀಸ್ ಇಲಾಖೆ ಉತ್ತಮ ರೀತಿಯಲ್ಲಿ ಕೆಲಸ ನಿರ್ವಹಿಸುವ ಮೂಲಕ ಕಾನೂನುಬಾಹಿರ ಚಟುವಟಿಕೆಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮಜರುಗಿಸಬೇಕು. ಅಕ್ರಮ ವ್ಯಾಪಾರ, ವಹಿವಾಟು ಮತ್ತು ಇಲಾಖೆಯ ಕಚೇರಿಗಳಲ್ಲಿ ಭ್ರಷ್ಟಾಚಾರ ನಡೆಯಬಾರದು ಎಂದು ಸೂಚಿಸಿದರು.

ಚುನಾವಣೆ ಸಂದರ್ಭದಲ್ಲಿ ಹಾಗೂ ನಂತರ ಕೆಲವರು ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ವಿಷಯಗಳನ್ನು ಹಬ್ಬಿಸುವ ಕೆಲಸ ಮುಂದುವರಿಸುತ್ತಿದ್ದು, ಇದರ ಬಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಮನ ಹರಿಸಿ ಅಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು. ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷ ನೀಡಿದ್ದ ಐದು ಗ್ಯಾರಂಟಿಗಳ ಬಗ್ಗೆ ವಿವರ ನೀಡಿ ಗೃಹಜ್ಯೋತಿ ಯೋಜನೆ ಬಗ್ಗೆ 200 ಯೂನಿಟ್‌ಗಿಂತ ಅಧಿಕ ವಿದ್ಯುತ್ ಬಳಸುವವರಿಗೆ ಉಚಿತ ಭಾಗ್ಯವಿಲ್ಲ ಎಂಬ ನಿಯಮ ಸಂವಿಧಾನಾತ್ಮಕವಾಗಿದೆ ಎಂದರು.

ಅದೇ ರೀತಿ ಸರ್ಕಾರಿ ಸಾಮಾನ್ಯ ಬಸ್‌ನಲ್ಲಿ ಮಹಿಳೆಯರ ಉಚಿತ ಪ್ರಯಾಣ ಸೂಕ್ತವಾಗಿದೆ ಹೈಟೆಕ್ ಬಸ್‌ನಲ್ಲಿ ಉಚಿತ ಪ್ರಯಾಣ ಎಂದಿಗೂ ಸಾಧ್ಯವಿಲ್ಲ. ಈಗಿನ ನಿಯಮ ಸೂಕ್ತವಾಗಿದೆ. ಗೃಹಲಕ್ಷ್ಮೀ ಯೋಜನೆ ಮನೆಯ ಓರ್ವ ಗೃಹಿಣಿಗೆ ಸಲ್ಲಲಿದ್ದು, ಅದಕ್ಕೆ ಸಲ್ಲಿಸುವ ಅರ್ಜಿ ಲಭ್ಯವಿದೆ. ಕಾರ್ಯಕರ್ತರು ಇದನ್ನು ಅರ್ಹರಿಗೆ ತಲುಪಿಸಬೇಕು ಎಂದರು.

ಜನರು ಮುಕ್ತವಾಗಿ ತಮ್ಮ ಸಮಸ್ಯೆಗಳನ್ನು ನನ್ನ ಬಳಿ ತಿಳಿಸಬಹುದು ಎಂದ ಪೊನ್ನಣ್ಣ ಅವರು, ಚುನಾವಣೆ ಸಂದರ್ಭ ಕಾರ್ಯಕರ್ತರು ಕುಟುಂಬ ಸದಸ್ಯರಂತೆ ಒಟ್ಟಾಗಿ ಪಕ್ಷದ ಗೆಲುವಿಗೆ ದುಡಿದಿದ್ದು ಎಲ್ಲರಿಗೂ ಕೃತಜ್ಞತೆ ಸಲ್ಲಿಸುವುದಾಗಿ ಹೇಳಿದರು.

ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಟಿ.ಪಿ. ರಮೇಶ್ ಮಾತನಾಡಿ, ಜಿಲ್ಲೆಯ ಎರಡು ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕರೇ ಇರುವುದರಿಂದ ಎಲ್ಲಾ ಸಮುದಾಯದ ಜನರಿಗೂ ಸರಿ ಸಮಾನವಾದ ಸೌಲಭ್ಯಗಳನ್ನು ಒದಗಿಸಿಕೊಡುವ ನಂಬಿಕೆ ನಮಗಿದೆ. ಮುಂದಿನ ಮೂರು ತಿಂಗಳಲ್ಲಿ ಚುನಾವಣೆ ಬರಲಿದ್ದು, ಉತ್ತಮ ನಾಯಕರನ್ನು ಆಯ್ಕೆ ಮಾಡಬೇಕಾಗಿದೆ ಎಂದರು.

ವಿಧಾನಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ ಮಾತನಾಡಿ, ಮುಂದೆ ಕಾಂಗ್ರೆಸ್ ಪಕ್ಷವನ್ನು ಉತ್ತಮ ರೀತಿ ಕಟ್ಟಬೇಕಾಗಿದ್ದು, ಕೊಡಗಿನ ಜನಸಾಮಾನ್ಯರ ಕಷ್ಟಗಳನ್ನು ಶಾಸಕರುಗಳು ಬಗೆಹರಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು ಹಾಗೂ ಜಿಲ್ಲೆಯ ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸುವ ಮೂಲಕ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಭಿವೃದ್ಧಿ ಕೆಲಸ ಮಾಡಬೇಕಾಗಿದೆ ಎಂದರು.

ವಿಧಾನಪರಿಷತ್ ಮಾಜಿ ಸದಸ್ಯ ಸಿ.ಎಸ್. ಅರುಣ್ ಮಾಚಯ್ಯ ಮಾತನಾಡಿ, ಕಳೆದ 20 ವರ್ಷಗಳಿಂದ ಕಾಣದಂತ ಐತಿಹಾಸಿಕ ಹರ್ಷವನ್ನು ಆಚರಿಸುತ್ತಿದ್ದೇವೆ. ವಿರಾಜಪೇಟೆ ಕ್ಷೇತ್ರದಲ್ಲಿ ಉತ್ತಮ ನಾಯಕನ ಆಯ್ಕೆಯಾಗಿದೆ. ಸಂಘಟನೆಗಳ ಹೋರಾಟಕ್ಕೆ ಜಯ ಸಿಕ್ಕಿದಂತಾಗಿದೆ. ಜನರ ಕಷ್ಟಗಳಿಗೆ ನಾವು ಸ್ಪಂದಿಸಬೇಕಾಗಿದೆ. ಕಾಂಗ್ರೆಸ್ ಪಕ್ಷದ ಸಂಘಟನೆಗೆ ಜಿಲ್ಲಾ ಮಟ್ಟದ ಸಮಿತಿಯ ಆಯ್ಕೆ ನಡೆಯಲಿದೆ ಎಂದರು.

ಸಭೆಯನ್ನುದ್ದೇಶಿಸಿ ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷ ಮುಕ್ಕಾಟಿರ ಶಿವು ಮಾದಪ್ಪ, ಜಿಲ್ಲಾ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಉಸ್ಮಾನ್, ಎಸಿಸಿ ಸದಸ್ಯೆ ತಾರ ಅಯ್ಯಮ್ಮ ಅವರುಗಳು ಮಾತನಾಡಿದರು. ಇದೇ ವೇಳೆ ಕಾಂಗ್ರೆಸ್ ಕಾರ್ಯಕರ್ತರು, ಪ್ರಮುಖರು ನೂತನ ಶಾಸಕ ಪೊನ್ನಣ್ಣ ಅವರಿಗೆ ಸನ್ಮಾನಿಸಿ, ನೆನಪಿನ ಕಾಣಿಕೆ ನೀಡಿದರು.

ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪಕ್ಷದ ಜಿಲ್ಲಾ ಸಮಿತಿ ಸದಸ್ಯ ನರೇಂದ್ರ ಕಾಮತ್, ನಗರ ಕಾಂಗ್ರೆಸ್ ಅಧ್ಯಕ್ಷ ಮಾದಂಡ ತಿಮ್ಮಯ್ಯ ಬ್ಲಾಕ್ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಪೊನ್ನಕ್ಕಿ, ನಾಪೋಕ್ಲು ಬ್ಲಾಕ್ ಅಧ್ಯಕ್ಷ ಇಸ್ಮಾಯಿಲ್, ಕೆಪಿಸಿಸಿ ಸದಸ್ಯ ರಮಾನಾಥ್, ಪಕ್ಷದ ಪ್ರಮುಖರಾದ ಕೋಳಮಂಡ ರಫೀಕ್, ಫರೂಕ್, ಚೆಲ್ಲವಂಡ ಕಾವೇರಪ್ಪ, ಪರಿಶಿಷ್ಟ ಜಾತಿ ಘಟಕದ ಮಹದೇವ ಮತ್ತು ಸಿದ್ದರಾಜು, ಹಿಂದುಳಿದ ಘಟಕದ ಸಿ.ಕೆ.ಪೃಥ್ವಿನಾಥ್, ಎಂ.ಎ.ಹನೀಫ್ ಹಾಗೂ ಪಕ್ಷದ ಪ್ರಮುಖರು ಉಪಸ್ಥಿತರಿದ್ದರು. ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯ ದರ್ಶಿ ಜಾನ್ಸನ್ ಸ್ವಾಗತಿಸಿದರೆ, ನಗರ ಕಾರ್ಯದರ್ಶಿ ಎಂ.ಎಂ. ಶಶಿಧರನ್ ನಿರೂಪಿಸಿ, ವಂದಿಸಿದರು.


ಇಂದು ಕೂರ್ಗ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ 'ಎನ್‌ಕ್ಲೇವ್–2023, ವಾರ್ಷಿಕೋತ್ಸವ ಸಮಾರಂಭ

ಮಡಿಕೇರಿ, ಜೂ.8– ಕೊಡವ ಎಜುಕೇಷನ್ ಸೊಸೈಟಿ ವತಿಯಿಂದ ನಡೆಯುತ್ತಿರುವ ಪೊನ್ನಂಪೇಟೆ ತಾಲೂಕಿನ ಕೂರ್ಗ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ 24ನೇ ಕಾಲೇಜು ವಾರ್ಷಿಕೋತ್ಸವ 'ಎನ್‌ಕ್ಲೇವ್–2023' ಜೂನ್ 9 ರಂದು ಬೆಳಗ್ಗೆ 10.30ಕ್ಕೆ ಏರ್ಪಡಿಸಲಾಗಿದೆ.

ಮುಖ್ಯ ಅತಿಥಿಗಳಾಗಿ ವಿರಾಜಪೇಟೆ ಶಾಸಕರೂ ಆದ ಹಿರಿಯ ನ್ಯಾಯವಾದಿ ಅಜ್ಜಿಕುಟ್ಟೀರ ಎ.ಎಸ್. ಪೊನ್ನಣ್ಣ ಮತ್ತು ಬೆಳಗಾವಿ ವಿಟಿಯು ಕುಲಪತಿ ಡಾ. ಎಸ್. ವಿದ್ಯಾಶಂಕರ್ ಭಾಗವಹಿಸಲಿದ್ದಾರೆ. ಗೌರವ ಅತಿಥಿಗಳಾಗಿ ಮ್ಯಾಕ್ಸ್‌ಲೈಫ್ ಜಾಯಿಂಟ್ ವೆಂಚರ್ ಆಕ್ಸಿಸ್ ಬ್ಯಾಂಕ್‌ನ ಕರ್ನಾಟಕ ಮುಖ್ಯಸ್ಥ ಹಾಗೂ ಪ್ರಾದೇಶಿಕ ಉಪಾಧ್ಯಕ್ಷ ಕೆ. ಸುಧಾಕರ್ ಶೆಟ್ಟಿ ಮತ್ತು ಆಲ್ಫಾ ಫ್ಲಾಟ್‌ಫಾರಂ ಮ್ಯಾನೇಜ್‌ಮೆಂಟ್ ಪ್ರಾಜೆಕ್ಟ್ ಮ್ಯಾನೇಜರ್ ಮೇಜರ್ ಟಿ.ಎಂ. ರೋಹನ್ ಕುಟ್ಟಪ್ಪ (ನಿವೃತ್ತ) ಭಾಗವಹಿಸಲಿದ್ದಾರೆ. ಕೊಡವ ಎಜುಕೇಷನ್ ಸೊಸೈಟಿ ಅಧ್ಯಕ್ಷ ಡಾ. ಎಂ.ಸಿ. ಕಾರ್ಯಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಮಡಿಕೇರಿಯಲ್ಲಿ ಕುಡಿಯುವ ನೀರಿಗೆ ಹಾಹಾಕಾರ

ಕೂಟುಹೊಳೆಗೆ ಶಾಸಕ ಡಾ. ಮಂಥರ್‌ಗೌಡ ಭೇಟಿ, ನಗರಸಭಾ ಅಧಿಕಾರಿಗಳ ಕಾರ್ಯವೈಖರಿಗೆ ತರಾಟೆ





ಮಡಿಕೇರಿ, ಜೂ.8– ಮಡಿಕೇರಿ ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಕೂಟುಹೊಳೆ ಕೇಂದ್ರದಲ್ಲಿ 300 ಹೆಚ್‌ಪಿ ಸಾಮರ್ಥ್ಯದ ಎರಡು ಮೋಟರ್ ಕೆಟ್ಟು ಹೋಗಿರುವ ಹಿನ್ನೆಲೆಯಲ್ಲಿ ಮಡಿಕೇರಿ ನಗರದಲ್ಲಿ ಕುಡಿಯುವ ನೀರಿಗೆ ತತ್ವಾರ ತಲೆದೋರಿದೆ.

ಮೋಟಾರು ದುರಸ್ತಿ ಮಾಡದಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಕೇಳಿ ಬರುತ್ತಿರುವ ಹಿನ್ನೆಲೆಯಲ್ಲಿ ಮಡಿಕೇರಿ ಕ್ಷೇತ್ರ ಶಾಸಕ ಡಾ.ಮಂಥರ್‌ಗೌಡ ಅವರು, ಕೂಟುಹೊಳೆಗೆ ಭೇಟಿ ನೀಡಿ ನೀರಿನ ಸಂಗ್ರಹಾಗಾರದಲ್ಲಿನ ದುರಸ್ತಿ ಕಾರ್ಯ ಪರಿಶೀಲನೆ ನಡೆಸಿದರು.

ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಿದ್ದರೆ ಈ ರೀತಿ ನೀರಿನ ಸರಬರಾಜು ವ್ಯತ್ಯಯವಾಗುತ್ತಿರಲಿಲ್ಲ. ಸಣ್ಣ ಸಮಸ್ಯೆಯಿರುವಾಗಲೇ ಬಗೆಹರಿಸುವುದನ್ನು ಬಿಟ್ಟು, ಸಮಸ್ಯೆ ಉಲ್ಬಣಿಸಿದ ಮೇಲೆ ಬೇಕಾಬಿಟ್ಟಿ ಹಣ ವೆಚ್ಚ ಮಾಡಿ ದುರಸ್ತಿ ಮಾಡುವುದು ಸರಿಯಲ್ಲ ಎಂದು ಮಡಿಕೇರಿ ನಗರಸಭೆ ಅಧಿಕಾರಿಗಳ ಕಾರ್ಯವೈಖರಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಮಾತ್ರವಲ್ಲದೇ ಇನ್ನು 6 ಗಂಟೆಯೊಳಗಾಗಿ ಮೋಟಾರ್ ಸೇರಿದಂತೆ ಅಗತ್ಯ ದುರಸ್ತಿ ಕಾರ್ಯ ನಡೆಸದಿದ್ದಲ್ಲಿ ಕ್ರಮ ಕೈಗೊಳ್ಳುವುದಾಗಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಡಾ.ಮಂಥರ್ ಗೌಡ, ಕೂಟುಹೊಳೆ ಕೇಂದ್ರದಲ್ಲಿ 300 ಹೆಚ್.ಪಿ ಸಾಮರ್ಥ್ಯದ ಎರಡು ಮೋಟರ್ ಕೆಟ್ಟು ಹೋಗಿದ್ದು, ನಗರಸಭೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಮಡಿಕೇರಿ ನಗರಕ್ಕೆ ನೀರು ಸರಬರಾಜು ಮಾಡಲು ತೊಂದರೆಯಾಗುತ್ತಿದೆ. ವಾರ್ಷಿಕ ನಿರ್ವಹಣೆ ಮಾಡದ ಹಿನ್ನೆಲೆಯಿಂದಾಗಿಯೇ ಕೂಟುಹೊಳೆಯಲ್ಲಿ ಮೋಟಾರ್ ಸಮಸ್ಯೆ ಎದುರಾಗಿದೆ. ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಿದ್ದರೆ ಈ ರೀತಿ ನೀರಿನ ಸರಬರಾಜು ವ್ಯತ್ಯಯವಾಗುತ್ತಿರಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಶುಕ್ರವಾರದಿಂದ ಹೆಚ್ಚಿನ ಟ್ಯಾಂಕರ್ ಬಳಸಿ ನಗರದ ವಿವಿಧ ಬಡಾವಣೆಗಳಿಗೆ ಕುಡಿಯುವ ನೀರು ಸರಬರಾಜು ಮಾಡುವಂತೆ ಸೂಚನೆ ನೀಡಲಾಗಿದೆ ಎಂದರು.

ಈ ಸಂದರ್ಭ ನಗರಸಭೆ ಸದಸ್ಯ ರಾಜೇಶ್ ಎಲ್ಲಪ್ಪ, ಪ್ರಮುಖರಾದ ಅಂಬೆಕಲ್ ನವೀನ್ ಕುಶಾಲಪ್ಪ, ತೆನ್ನೀರ ಮೈನಾ, ಎ.ಸಿ. ದೇವಯ್ಯ, ಸದಾ ಮುದ್ದಪ್ಪ, ಕಾನೆಹಿತ್ಲು ಮೊಣ್ಣಪ್ಪ ಸೇರಿದಂತೆ ಅನೇಕರು ಹಾಜರಿದ್ದರು.

ಸುಂಟಿಕೊಪ್ಪ ವ್ಯಾಪ್ತಿಯಲ್ಲಿ ಡೆಂಗ್ಯೂ...

ಮನೆ ಮನೆಗೆ ತೆರಳಿ ಆರೋಗ್ಯ ಇಲಾಖೆ ಸಿಬ್ಬಂದಿ, ಆಶಾ ಕಾರ್ಯಕರ್ತೆಯರಿಂದ ಪರಿಶೀಲನೆ, ತಪಾಸಣೆ



ಸುಂಟಿಕೊಪ್ಪ, ಜೂ.8– ಸುಂಟಿಕೊಪ್ಪ ವ್ಯಾಪ್ತಿಯಲ್ಲಿ ಕಳೆದ 25 ದಿನಗಳಿಂದ ಜನರು ಜ್ವರ, ಶೀತ, ಕೆಮ್ಮು ಸಹಿತ ಡೆಂಗ್ಯೂವಿನಿಂದ ಬಳಲುತ್ತಿದ್ದು, ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ ಮತ್ತು ಆರೋಗ್ಯ ಇಲಾಖೆ ರೋಗ ನಿಯಂತ್ರಣಕ್ಕೆ ಮುಂದಾಗಿದೆ.

ಈ ಹಿನ್ನೆಲೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಸತೀಶ್ ಕುಮಾರ್ ಸೇರಿದಂತೆ ತಾಲೂಕು ಆರೋಗ್ಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗ ಆಶಾ ಕಾರ್ಯಕರ್ತೆಯರ ಮೂಲಕ ಸುಂಟಿಕೊಪ್ಪ 1ನೇ ವಿಭಾಗದ ಜನತಾ ಕಾಲೋನಿ ಸೇರಿದಂತೆ ವಿವಿಧ ಬಡಾವಣೆಗಳಿಗೆ ತೆರಳಿ ಮನೆಯ ನೀರು ತುಂಬಿಸಿರುವ ಡ್ರಮ್, ಪಾತ್ರೆಗಳನ್ನು ಪರಿಶೀಲನೆ ನಡೆಸಿದರು.

ಮನೆ ಸೇರಿದಂತೆ ಸುತ್ತ ಮುತ್ತಲ ಪ್ರದೇಶಗಳನ್ನು ಪರಿಶೀಲಿಸಿ ಟೈಯರ್, ತೆಂಗಿನ ಚಿಪ್ಪು ಹಾಗೂ ಗುಂಡಿಗಳಲ್ಲಿ ನೀರು ಶೇಖರಣೆಗೊಳ್ಳದಂತೆ ಎಚ್ಚರಿಕೆ ವಹಿಸಬೇಕು. ಇನ್ನಷ್ಟು ಸ್ವಚ್ಛತೆಯನ್ನು ಕಾಯ್ದುಕೊಳ್ಳುವಂತೆ ಸಾರ್ವಜನಿಕರಿಗೆ ಮಾಹಿತಿ ನೀಡಿ ಅರಿವು ಮೂಡಿಸಿದರು. ಈಗಾಗಲೇ ಡೆಂಗ್ಯೂ ಪ್ರಕರಣಗಳು ಇಳಿಕೆಯಾಗಿದೆ. ಜನರು ಆತಂಕಕ್ಕೆ ಒಳಗಾಗಬಾರದು ಎಂದು ಮನವಿ ಮಾಡಿದರು.

ಈ ಸಂದರ್ಭ ತಾಲೂಕು ಆರೋಗ್ಯ ಅಧಿಕಾರಿ ಡಾ.ಶ್ರೀನಿವಾಸ್, ಸುಂಟಿಕೊಪ್ಪ ಪ್ರಾಥಮಿಕ ವೈದ್ಯಾಧಿಕಾರಿ ಡಾ. ಪ್ರಗತಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಹೆಚ್.ಕೆ.ಶಾಂತಿ, ಹೆಲ್ತ್ ಇನ್ಸ್‌ಪೆಕ್ಟರ್‌ಗಳಾದ ಶೀನಿವಾಸ್, ಮುತ್ತುರಾಜ್, ಜನಾರ್ಧನ, ವಿಶ್ವಜ್ಞ, ಆರೋಗ್ಯ ಕಾರ್ಯಕರ್ತೆಯರು, ಜ್ಯೋತಿ ಭಾಸ್ಕರ್ ಹಾಗೂ ಆಶಾ ಕಾರ್ಯಕರ್ತೆಯರು ಹಾಜರಿದ್ದರು.

ಈ ಮೊದಲು ಗ್ರಾಪಂ ಆಡಳಿತ ಮಂಡಳಿ ಮತ್ತು ಆರೋಗ್ಯ ಇಲಾಖೆ ಇದರ ಬಗ್ಗೆ ನಿರ್ಲಕ್ಷ್ಯ ವಹಿಸಿತ್ತು. ಸಾರ್ವಜನಿಕರು ರೊಚ್ಚಿಗೆದ್ದು, ಆಕ್ರೋಶ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಈಗ ರೋಗ ನಿಯಂತ್ರಣಕ್ಕೆ ಮುಂದಾಗಿದ್ದಾರೆ.

ನಾಡಿನಲ್ಲಿ ಬೀಡುಬಿಟ್ಟಿದ್ದ ಆನೆಗಳು ಕಾಡಿಗೆ

ತಿತಿಮತಿ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆ ಕಾರ್ಯಾಚರಣೆ

ಮಡಿಕೇರಿ, ಜೂ.8– ತಿತಿಮತಿ ಗ್ರಾಮ ವ್ಯಾಪ್ತಿಯಲ್ಲಿ ಬೀಡುಬಿಟ್ಟು ಗ್ರಾಮಸ್ಥರಲ್ಲಿ ಜೀವಭಯ ಸೃಷ್ಟಿಸಿದ್ದ ಕಾಡಾನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ ನಡೆಸಲಾಯಿತು.

ಅರಣ್ಯ ಇಲಾಖೆ ವತಿಯಿಂದ ತಿತಿಮತಿ ಅರಣ್ಯ ವಲಯ ವ್ಯಾಪ್ತಿಗೊಳಪಡುವ ಧನುಗಾಲ, ಬಾಳಾಜಿ, ಮಾಯಮುಡಿ, ದೇವರಪುರ, ನೊಕ್ಯ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಬೀಡುಬಿಟ್ಟಿರುವ ಕಾಡಾನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ ನಡೆಯಿತು.

ಕಾರ್ಯಾಚರಣೆಯ ಸಂದರ್ಭ ಸುಮಾರು ಹದಿನಾಲ್ಕು ಕಾಡಾನೆಗಳನ್ನು ಮತ್ತಿಗೋಡು ವನ್ಯಜೀವಿ ವಲಯದ ಅರಣ್ಯಕ್ಕೆ ಅಟ್ಟಲಾಯಿತು. ತಿತಿಮತಿ ವಲಯ ಅರಣ್ಯ ಸಿಬ್ಬಂದಿಗಳು, ಎಲಿಫೆಂಟ್ ಟಾಸ್ಕ್‌ಫೋರ್ಸ್ ಸಿಬ್ಬಂದಿಗಳು ಸೇರಿದಂತೆ ಸುಮಾರು 30ರಿಂದ 40 ಮಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಕಾರ್ಯಾಚರಣೆ ಶುಕ್ರವಾರವೂ ಮುಂದುವರೆಯಲಿರುವುದರಿಂದ ಈ ಗ್ರಾಮಗಳ ವ್ಯಾಪ್ತಿಯ ಗ್ರಾಮಸ್ಥರು, ಶಾಲಾ ವಿದ್ಯಾರ್ಥಿಗಳು ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ಅರಣ್ಯಾಧಿಕಾರಿಗಳು ಕೋರಿದ್ದಾರೆ.

ಉಪಸಭಾಪತಿ ಹುದ್ದೆ ನಿರ್ವಹಿಸುತ್ತೇನೆ

- 'ಕೈ' ಹೈಕಮಾಂಡ್, ಸಿದ್ದರಾಮಯ್ಯ ತೀರ್ಮಾನಕ್ಕೆ ಬದ್ಧ
- ಸಂವಾದದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ



ಚಾಮರಾಜನಗರ, ಜೂ.8– ಕಾಂಗ್ರೆಸ್ ಹೈಕಮಾಂಡ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ತೀರ್ಮಾನಕ್ಕೆ ನಾನು ಬದ್ಧನಾಗಿದ್ದು, ಉಪಸಭಾಪತಿ ಹುದ್ದೆ ನಿರ್ವಹಿಸುತ್ತೇನೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಗುರುವಾರ ನಡೆದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ಉಪಸಭಾಪತಿ ಹುದ್ದೆಯನ್ನು ಮೊದಲು ನಾನು ನಿರಾಕರಿಸಿದ್ದು ನಿಜ. ಆದರೆ ನಂತರ ಪಕ್ಷದ ಹೈಕಮಾಂಡ್ ಹಾಗೂ ಮುಖ್ಯಮಂತ್ರಿಗಳ ತೀರ್ಮಾನಕ್ಕೆ ಬದ್ಧನಾಗಿ ಒಪ್ಪಿಕೊಂಡಿದ್ದೇನೆ ಎಂದು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನನ್ನೊಂದಿಗೆ ಚರ್ಚೆ ನಡೆಸಿದ್ದು, ಒಂದು ವರ್ಷ ಉಪಸಭಾಪತಿ ಹುದ್ದೆ ನಿರ್ವಹಿಸು, ನಂತರ ಸೂಕ್ತ ಸ್ಥಾನಮಾನ ನೀಡಲಾಗುವುದು ಎಂದು ಭರವಸೆ ನೀಡಿದ್ದಾರೆ ಎಂದರು.

ವಾರ್ಡ್‌ಗಳ ಅಭಿವೃದ್ಧಿಗೆ ಆದ್ಯತೆ: ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ಒಟ್ಟು 31 ವಾರ್ಡ್‌ಗಳಿದ್ದು, 16 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ಇದನ್ನು ಪ್ರತಿ ವಾರ್ಡ್‌ಗಳಿಗೂ ತಲಾ 50 ಲಕ್ಷ ರೂ. ನಂತೆ ಹಂಚಿಕೆ ಮಾಡಿ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಲಾಗುವುದು ಎಂದರು.

ಕ್ಷೇತ್ರ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ರಸ್ತೆ, ಚರಂಡಿ, ಕುಡಿಯುವ ನೀರು ಹಾಗೂ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು ಎಂದ ಅವರು, ಚಾಮರಾಜನಗರದ ರೇಷ್ಮೆಗೂಡು ಪಕ್ಕದಲ್ಲಿ 3.20 ಎಕರೆ ಭೂಮಿಯಲ್ಲಿ ನೂತನ ಕೆಎಸ್ ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಜಾಗ ಗುರುತಿಸಲಾಗಿದ್ದು, ಇದನ್ನು ಕೆಎಸ್‌ಆರ್‌ಟಿಸಿಗೆ ವರ್ಗಾಯಿಸಲಾಗಿದೆ ಎಂದರು.

ಉಪ್ಪಾರ ಸಮುದಾಯ ಎಸ್‌ಟಿಗೆ ಸೇರಿಸಲು ಮನವಿ: ಈ ಹಿಂದಿನ ಸಿದ್ದರಾಮಯ್ಯ ಸರ್ಕಾರದಲ್ಲಿ ಉಪ್ಪಾರ ಸಮುದಾಯವನ್ನು ಎಸ್‌ಟಿಗೆ ಸೇರಿಸುವ ಸಂಬಂಧ ಕುಲಶಾಸ್ತ್ರ ಅಧ್ಯಯನಕ್ಕೆ ಚಾಲನೆ ನೀಡಲಾಗಿತ್ತು. ಪ್ರಸ್ತುತ ಇದು ಮುಕ್ತಾಯಕ್ಕೆ ಬಂದಿದೆ. ಜೊತೆಗೆ ಮತ್ತೆ ಸಿದ್ದರಾಮಯ್ಯ ಸರ್ಕಾರ ಬಂದಿದ್ದು, ಕುಲಶಾಸ್ತ್ರ ಅಧ್ಯಯನದ ವರದಿ ಆಧಾರದ ಮೇಲೆ ಉಪ್ಪಾರ ಸಮುದಾಯವನ್ನು ಎಸ್‌ಟಿಗೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಸಲ್ಲಿಸುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು. ಸಂವಾದದಲ್ಲಿ ಜಿಲ್ಲಾ ಕಾರ್ಯನಿರತ ಪತ್ರ ಕರ್ತರ ಸಂಘದ ಅಧ್ಯಕ್ಷ ದೇವರಾಜ್ ಕಪ್ಪಸೋಗೆ, ಪ್ರಧಾನ ಕಾರ್ಯದರ್ಶಿ ಗೌಡಹಳ್ಳಿ ಮಹೇಶ್ ಇದ್ದರು.

> ಚಾಮರಾಜನಗರದಲ್ಲಿ ನೂತನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಶಂಕುಸ್ಥಾಪನೆ, ಉಪ್ಪಾರ ಸಮುದಾಯ ಭವನ ಉದ್ಘಾಟನೆ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶೀಘ್ರ ಜಿಲ್ಲಾ ಕೇಂದ್ರಕ್ಕೆ ಕರೆದುಕೊಂಡು ಬರುತ್ತೇನೆ.
>
> –ಸಿ.ಪುಟ್ಟರಂಗಶೆಟ್ಟಿ, ಶಾಸಕ.


ಆಕ್ಸಿಜನ್ ದುರಂತದ ಸಂತ್ರಸ್ತ ಕುಟುಂಬಗಳಿಗೆ ನೆರವು

ಕೋವಿಡ್ ಸಂದರ್ಭ ಜಿಲ್ಲಾಸ್ಪತ್ರೆಯಲ್ಲಿ ಆಕ್ಸಿಜನ್ ಅಸಮರ್ಪಕ ನಿರ್ವಹಣೆಯಿಂದ ಮೃತಪಟ್ಟ 36 ಮಂದಿಯ ಕುಟುಂಬಕ್ಕೆ ಸರ್ಕಾರದಿಂದ ಸೂಕ್ತ ನೆರವು ನೀಡಲಾಗುವುದು ಎಂದು ಶಾಸಕ ಪುಟ್ಟರಂಗಶೆಟ್ಟಿ ತಿಳಿಸಿದರು.

ಸಂವಾದದಲ್ಲಿ ಮಾತನಾಡಿದ ಅವರು, ದುರಂತ ನಡೆದ ತಕ್ಷಣ ಪಕ್ಷದಿಂದ ಎಲ್ಲಾ ಕುಟುಂಬಗಳಿಗೂ ತಲಾ ಲಕ್ಷ ರೂ. ಪರಿಹಾರ ನೀಡಲಾಯಿತು. ಈಗ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿದ್ದು, 36 ಕುಟುಂಬದ ತಲಾ ಒಬ್ಬ ಸದಸ್ಯರಿಗೆ ಸರ್ಕಾರದ ಹುದ್ದೆ ಕೊಡಿಸುವ ಸಂಬಂಧ ಸರ್ಕಾರ ಮಟ್ಟದಲ್ಲಿ ಮನವಿ ಮಾಡಿ ಶೀಘ್ರವೇ ನೇಮಕಾತಿ ಮಾಡಲಾಗುವುದು ಎಂದು ತಿಳಿಸಿದರು.

ದುರಂತದ ಬಗ್ಗೆ ಸರ್ಕಾರ ಮರು ತನಿಖೆಗೆ ಆದೇಶ ನೀಡಿದ್ದು, ತನಿಖೆ ವರದಿ ಬಂದ ನಂತರ ತಪ್ಪಿಸ್ಥತರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ಕೊಳ್ಳೇಗಾಲ ಕ್ಷೇತ್ರದ ಅಭಿವೃದ್ಧಿಗೆ ಒತ್ತು: ಎಆರ್‌ಕೆ



ಚಾಮರಾಜನಗರ, ಜೂ.8– ಕೊಳ್ಳೇಗಾಲ ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡುವುದಾಗಿ ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ನಗರದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿರುವ ತಮ್ಮ ನಿವಾಸದಲ್ಲಿ ಕೆಂಪನಪುರ ಗ್ರಾಪಂ ವ್ಯಾಪ್ತಿಯ ಕಾಂಗ್ರೆಸ್ ಮುಖಂಡರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಕೊಳ್ಳೇಗಾಲ ಕ್ಷೇತ್ರದ ಗ್ರಾಪಂಗಳಿಗೆ ಪ್ರವಾಸ ಕೈಗೊಂಡು ಜನರಿಂದ ಅಹವಾಲು ಸ್ವೀಕರಿಸಿ ಇಲಾಖಾವಾರು ಅಧಿಕಾರಿಗಳಿಂದ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದರು. ಕೊಳ್ಳೇಗಾಲ ಮತದಾರರು 1 ಲಕ್ಷಕ್ಕೂ ಅಧಿಕ ಮತ ನೀಡಿ ಗೆಲ್ಲಿಸಿದ್ದಾರೆ. ಜನಸೇವಕನಾಗಿ ಅವರ ಋಣ ತೀರಿಸಲು ಶ್ರಮಿಸಲಾಗುವುದು ಎಂದರು.

ಈ ವೇಳೆ ಕಾಂಗ್ರೆಸ್ ಯುವ ಮುಖಂಡ ಡಿ.ಎನ್. ನಟರಾಜು, ಎಪಿಎಂಸಿ ನಿರ್ದೇಶಕ ಆಲೂರು ಪ್ರತಾಪ್, ಗ್ರಾಪಂ ಸದಸ್ಯರಾದ ಆರ್.ಮಾದೇಶ್, ಆರ್.ಸೋಮಣ್ಣ, ಕಾಂಗ್ರೆಸ್ ಮುಖಂಡ ಲಕ್ಷ್ಮಣ್, ಡಿಎಸ್‌ಎಸ್ ಜಿಲ್ಲಾ ಸಂಯೋಜಕ ಕೆ.ಎಂ. ನಾಗರಾಜು, ತಾಪಂ ಮಾಜಿ ಸದಸ್ಯ ಆರ್.ಮಹದೇವ, ಕಂದಹಳ್ಳಿ ನಂಜುಂಡಸ್ವಾಮಿ ಇತರರಿದ್ದರು.

ಅಂಗನವಾಡಿಗಳಿಗೆ ಪೌಷ್ಟಿಕ ಆಹಾರ ವಿತರಣೆ

ಚಾಮರಾಜನಗರ, ಜೂ.8– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಚಾಮರಾಜನಗರ ತಾಲೂಕು ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯ 281 ಅಂಗನವಾಡಿ ಕೇಂದ್ರಗಳಿಗೆ ಏಪ್ರಿಲ್–2023ರ ಮಾಹೆಯ ಪೂರಕ ಪೌಷ್ಟಿಕ ಆಹಾರ ಪದಾರ್ಥಗಳನ್ನು ವಿತರಿಸಲಾಗುತ್ತದೆ.

ಜೂ.9ರಂದು ಬೇಡಗುಳಿ, 10 ರಂದು ಹರವೆ, 12ರಂದು ಅರಳೀಕಟ್ಟೆ ಮತ್ತು ಉಡಿಗಾಲ, 13ರಂದು ಬಿಸಲವಾಡಿ ಹಾಗೂ ಅಮಚವಾಡಿ, 14ರಂದು ಕೊತ್ತಲವಾಡಿ, 15ರಂದು ಬೀಡಿ ಕಾಲೋನಿ, 16ರಂದು ರಾಮಸಮುದ್ರ, 17ರಂದು ಬಂಡಿಗೆರೆ, 19ರಂದು ರೈಲ್ವೆ ಬಡಾವಣೆ ಅಂಗನವಾಡಿ ಕೇಂದ್ರಗಳಿಗೆ ಪೂರಕ ಪೌಷ್ಟಿಕ ಆಹಾರ ಪದಾರ್ಥಗಳನ್ನು ವಿತರಿಸಲಾಗುತ್ತದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಜೂ.8– ಗುಂಡ್ಲುಪೇಟೆ ಮತ್ತು ಬೇಗೂರು ಉಪ ವಿಭಾಗ ವ್ಯಾಪ್ತಿಯಲ್ಲಿ ಒಂದನೇ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ಜೂ.10 ರಂದು ಹಾಲಳ್ಳಿ, ಕಮರಹಳ್ಳಿ, ಬೊಗ್ಗನಪುರ, ಮರಳಾಪುರ, ರಂಗನಾಥಪುರ, ತೊರವಳ್ಳಿ, ನಿಟ್ರೆ, ಹಿರಿಕಾಟಿ, ಚಿಕ್ಕಾಟಿ, ಅರೆಪುರ, ತೊಂಡವಾಡಿ ಜೂ.11 ರಂದು ಬೊಮ್ಮನಹಳ್ಳಿ, ಕುಂದಗೆರೆ, ಕಟ್ನವಾಡಿ, ದೇಪಾಪುರ, ಎನ್. ಜೆವೈ, ಗೋವಿಂದಪುರ, ಕಗ್ಗಳ, ಕೆಲಸಿಪುರ, ಲಕ್ಕೂರು, ಫ್ಯಾಕ್ಟರಿ, ವಾಟರ್ ಸಪ್ಲೈ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಶತಾಯುಷಿ ಮಹದೇವಮ್ಮ ನಿಧನ



ಗುಂಡ್ಲುಪೇಟೆ, ಜೂ.8– ತಾಲೂಕಿನ ಯರಿಯೂರು ಗುಡಿಮನೆ ಗ್ರಾಮದ ನಿವಾಸಿ ದಿ.ಮಹದೇವಪ್ಪ ಅವರ ಪತ್ನಿ ಶತಾಯುಷಿ ಮಹದೇವಮ್ಮ (100) ಗುರುವಾರ ನಿಧನರಾದರು.

ಮೃತರು ಪುತ್ರ ಗುತ್ತಿಗೆದಾರ ನಾಗರಾಜಮೂರ್ತಿ, ಮೊಮ್ಮಗ ಬಿಜೆಪಿ ಮುಖಂಡ ಅಭಿಷೇಕ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಬಾಲ್ಯವಿವಾಹ ತಡೆಗೆ ಕ್ರಮ ವಹಿಸಲು ಸೂಚನೆ



ಚಾಮರಾಜನಗರ, ಜೂ.8– ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸುವ ಮೂಲಕ ಬಾಲ್ಯವಿವಾಹ ತಡೆಗೆ ಕ್ರಮ ವಹಿಸಬೇಕು. ಬಾಲ್ಯವಿವಾಹ ಪ್ರಕರಣ ಕಂಡು ಬಂದರೆ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಎಫ್‌ಐಆರ್ ದಾಖಲಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಎಸ್.ಪೂವಿತಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

2022–23ನೇ ಸಾಲಿನಲ್ಲಿ ಚಾಮರಾಜನಗರದಲ್ಲಿ 12, ಸಂತೇಮರಹಳ್ಳಿಯಲ್ಲಿ 5, ಕೊಳ್ಳೇಗಾಲದಲ್ಲಿ 22, ಗುಂಡ್ಲುಪೇಟೆಯಲ್ಲಿ 8, ಯಳಂದೂರು ತಾಲೂಕಿನಲ್ಲಿ 1 ಸೇರಿದಂತೆ ಒಟ್ಟು 48 ಬಾಲ್ಯವಿವಾಹ ಸಂಬಂಧ ದೂರುಗಳನ್ನು ಸ್ವೀಕರಿಸಲಾಗಿದೆ. ಇವುಗಳ ಪೈಕಿ 45 ಬಾಲ್ಯ ವಿವಾಹಗಳನ್ನು ತಡೆಗಟ್ಟಲಾಗಿದೆ ಎಂದರು.

ಪ್ರಸಕ್ತ ಸಾಲಿನ ಏಪ್ರಿಲ್‌ನಲ್ಲಿ ಒಟ್ಟು 66 ಬಾಲ್ಯ ವಿವಾಹ ಪ್ರಕರಣ ದಾಖಲಾಗಿದ್ದು, ಇವುಗಳಲ್ಲಿ 47 ಬಾಲ್ಯವಿವಾಹವನ್ನು ತಡೆಯಲಾಗಿದೆ. 19 ಬಾಲ್ಯವಿವಾಹ ನಡೆದಿದ್ದು 10 ಎಫ್‌ಐಆರ್ ದಾಖಲಾಗಿದೆ. ಮೇ ತಿಂಗಳಲ್ಲಿ ಒಟ್ಟು 28 ಬಾಲ್ಯ ವಿವಾಹ ಪ್ರಕರಣ ದಾಖಲಾಗಿದ್ದು, 26 ಬಾಲ್ಯ ವಿವಾಹವನ್ನು ತಡೆಯಲಾಗಿದೆ. 2 ಬಾಲ್ಯ ವಿವಾಹ ನಡೆದಿದ್ದು, 2 ಎಫ್‌ಐಆರ್ ದಾಖಲಾಗಿದೆ. 20 ಪ್ರಕರಣಗಳಿಗೆ ತಡೆಯಾಜ್ಞೆ ನೀಡಲಾಗಿದೆ ಎಂದರು.

ಜಿಲ್ಲಾ, ತಾಲೂಕು, ಗ್ರಾಮ ಮಟ್ಟದ ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ಜಿಲ್ಲೆಯಲ್ಲಿ ಬಾಲ್ಯ ವಿವಾಹಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕು. ಸಾರ್ವಜನಿಕರಿಗೆ ಅರಿವು ಮೂಡಿಸಬೇಕು. ಬಾಲ್ಯ ವಿವಾಹ ಜರುಗಿದ್ದಲ್ಲಿ ಸಂಬಂಧಪಟ್ಟವರ ವಿರುದ್ಧ ಎಫ್‌ಐಆರ್ ದಾಖಲಿಸಿ ಅಗತ್ಯ ಕ್ರಮವಹಿಸಬೇಕು. ಈಗಾಗಲೇ ತಡೆ ಹಿಡಿಯಲಾಗಿರುವ ಬಾಲ್ಯವಿವಾಹಗಳು ಮತ್ತೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕು. ಇಲ್ಲವಾದಲ್ಲಿ ನಿಷೇಧಾಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಅವರು ನಿರ್ದೇಶಿಸಿದ್ದಾರೆ.

ಸಾರ್ವಜನಿಕರು ಬಾಲ್ಯ ವಿವಾಹ ಕುರಿತಾಗಿ ಮಾಹಿತಿ ನೀಡಬೇಕು. ಮಾಹಿತಿ ನೀಡಿದವರ ಹೆಸರುಗಳನ್ನು ಗೌಪ್ಯವಾಗಿಡಲಾಗುವುದು. ಜಿಲ್ಲೆಯಲ್ಲಿ ಬಾಲ್ಯ ವಿವಾಹವನ್ನು ತಡೆಗಟ್ಟಲು ಅಧಿಕಾರಿಗಳು ಹಾಗೂ ಸಾರ್ವಜನಿಕರು ಸಹಕರಿಸಬೇಕು ಎಂದು ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ಗೀತಾಲಕ್ಷ್ಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜನರ ನೋವಿಗೆ ಸ್ಪಂದಿಸುವುದೇ ಸಾಹಿತ್ಯ



ಸಾಹಿತಿ ಕುಂಬಾರ ವೀರಭದ್ರಪ್ಪ (ಕುಂವೀ)

ಚಾಮರಾಜನಗರ, ಜೂ.8– ಜನರ ಸಮಸ್ಯೆಗಳಿಗೆ, ನೋವಿಗೆ ಸ್ಪಂದಿಸುವುದೇ ಸಾಹಿತ್ಯ ಎಂದು ಸಾಹಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಕುಂಬಾರ ವೀರಭದ್ರಪ್ಪ (ಕುಂವೀ) ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗ ಮಂದಿರದಲ್ಲಿ ದಾವಣಗೆರೆ ಕನ್ನಡ ಸಾಂಸ್ಕೃತಿಕ ಗತವೈಭವ ಅಕಾಡೆಮಿ, ಜೋಗಿ ರಂಗಜೋಳಿಗೆ, ಕಾವ್ಯ ಸ್ಪಂದನ ಪಬ್ಲಿಕೇಷನ್‌ನಿಂದ ಕೆ.ಶ್ರೀಧರ್ ಅವರ ಅಂತರಂಗದ ಅಸ್ಪೃಶ್ಯತೆ (ನಾಟಕ) ಹಾಗೂ ಅಂತರ್ಮುಖಿ(ಲೇಖನಗಳು) ಕೃತಿಗಳನ್ನು ಅನಾವರಣಗೊಳಿಸಿ ಅವರು ಮಾತನಾಡಿದರು.

ಹಿಂದುಳಿದ ಸಮಾಜಗಳಿಂದ ಬಂದವರೇ ನಿಜವಾದ ಲೇಖಕರು. ಏಕೆಂದರೆ ಅವರು, ಎಲ್ಲಾ ಕಷ್ಟಗಳನ್ನು ಅನುಭವಿಸಿ ಬಂದಿರುತ್ತಾರೆ. ಆದ್ದರಿಂದ ಅವರು ಸಮಾಜಕ್ಕೆ ಬೇಕಾದಂತಹ ಕೃತಿಗಳನ್ನು ರಚನೆ ಮಾಡುತ್ತಾರೆ ಎಂದು ತಿಳಿಸಿದರು.

ಚಿಂತಕ ಹೊ.ಬ.ರಘೋತ್ತಮ ಮಾತನಾಡಿ, ಅಂತರಂಗದ ಅಸ್ಪೃಶ್ಯತೆ(ನಾಟಕ) ಕೃತಿ ಬಗ್ಗೆ, ಸಾಹಿತಿ ಭದ್ರಾವತಿ ರಾಮಾಚಾರಿ ಅವರು ಅಂತರ್ಮುಖಿ ಲೇಖನಗಳನ್ನು ಕುರಿತು ಮಾತನಾಡಿದರು. ಯುವ ಸಾಹಿತಿ ಕೆ.ಶ್ರೀಧರ್ (ಕೆ.ಸಿರಿ) ಪ್ರಾಸ್ತಾವಿಕ ನುಡಿ ನುಡಿದರು.

ಈ ವೇಳೆ ಅನೇಕರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್, ಮೈಸೂರಿನ ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಗಾಂಧಿವಾದಿ ಸಿ.ಪಿ.ಹುಚ್ಚೇಗೌಡರು, ದಲಿತ ಮುಖಂಡ ವೆಂಕಟರಮಣಸ್ವಾಮಿ ಪಾಪು, ಸಾಹಿತಿಗಳಾದ ಸ್ವಾಮಿ ಪೊನ್ನಾಚಿ, ಶಾಂತ ಜಯಾನಂದ್, ಶೀಲಾ ಸತ್ಯೇಂದ್ರ ಸ್ವಾಮಿ, ಜನಪದ ಗಾಯಕ ಸಿ.ಎಂ.ನರಸಿಂಹಮೂರ್ತಿ, ಜೋಗಿ ರಂಗಜೋಳಿಗೆ ಸಂಘದ ಅಧ್ಯಕ್ಷ ಜೆ.ಮೂರ್ತಿ ಮುಡಿಗುಂಡ ಸೇರಿದಂತೆ ಇತರರಿದ್ದರು.

ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಜೂ.8– 2023–24ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕರ ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ರಾಜ್ಯ ವಿದ್ಯಾರ್ಥಿನಿಲಯ ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಲು ಪೋರ್ಟಲ್ ತೆರೆಯಲಾಗಿದೆ.

ಸಮಾಜ ಕಲ್ಯಾಣ ಇಲಾಖಾ ವಿದ್ಯಾರ್ಥಿನಿಲಯಗಳಿಗೆ 5 ರಿಂದ 10ನೇ ತರಗತಿಯುವರೆಗೆ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳು SATS ID ಯೊಂದಿಗೆ ರಾಜ್ಯ ವಿದ್ಯಾರ್ಥಿನಿಲಯ ಪೋರ್ಟಲ್‌ನ ಆನ್‌ಲೈನ್‌ನಲ್ಲಿ ನಿಗದಿತ ಕೊನೆಯ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸಬೇಕು. ವೆಬ್‌ಸೈಟ್ https://shp.karnataka.gov.in/ ನಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಚಾಮರಾಜನಗರ ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು (ಗ್ರೇಡ್–1) ಕಚೇರಿ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಟೆಸ್ಟ್ ವಿಶ್ವಕಪ್ ಫೈನಲ್; ಸಂಕಷ್ಟದಲ್ಲಿ ಭಾರತ

ಆಸ್ಟ್ರೇಲಿಯಾ 469ಕ್ಕೆ ಆಲೌಟ್, ಭಾರತ 5 ವಿಕೆಟ್‌ಗೆ 151 ರನ್

ಲಂಡನ್, ಜೂ.8– ಆಸ್ಟ್ರೇಲಿಯಾ ತಂಡ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ತನ್ನ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸಿದೆ. ಟ್ರಾವಿಸ್ ಹೆಡ್ ಹಾಗೂ ಸ್ಟೀವನ್ ಸ್ಮಿತ್ ನಡುವಿನ 285 ರನ್‌ಗಳ ನಾಲ್ಕನೇ ವಿಕೆಟ್ ಜೊತೆಯಾಟದ ಬಳಿಕ ಆಸ್ಟ್ರೇಲಿಯಾ ತಂಡದ ವೇಗಿಗಳು ಭಾರತದ ಬ್ಯಾಟಿಂಗ್ ಅನ್ನು ಧ್ವಂಸ ಮಾಡಿದ್ದಾರೆ. ಇದರಿಂದ ಭಾರತ ಸಂಕಷ್ಟದಲ್ಲಿ ಸಿಲುಕಿದೆ. ಒಂದೆಡೆ ದೊಡ್ಡ ಮೊತ್ತದ ಹಾದಿಯಲ್ಲಿದ್ದ ಆಸ್ಟ್ರೇಲಿಯಾ ತಂಡದ ಕೊನೆಯ ಏಳು ವಿಕೆಟ್‌ಗಳನ್ನು 108 ರನ್‌ಗೆ ಉರುಳಿಸಿತಾದರೂ, ಆಸೀಸ್ ತಂಡ ಮೊದಲ ಇನ್ನಿಂಗ್ಸ್‌ನಲ್ಲಿ 469 ರನ್ ಬಾರಿಸಲು ಯಶಸ್ವಿಯಾಗಿತ್ತು. ಆದರೆ, ಭಾರತ ತಂಡಕ್ಕೆ ಟ್ರಾವಿಸ್ ಹೆಡ್ ಹಾಗೂ ಸ್ಟೀವನ್ ಸ್ಮಿತ್ ಜೊತೆಯಾಟ ಸಿಗಲಿಲ್ಲ. ಇದರಿಂದಾಗಿ ರೋಹಿತ್ ಶರ್ಮ ನೇತೃತ್ವದ ಟೀಮ್ ಇಂಡಿಯಾ 2ನೇ ದಿನದಾಟದ ಅಂತ್ಯಕ್ಕೆ 5 ವಿಕೆಟ್‌ಗೆ 151 ರನ್ ಬಾರಿಸಿದ್ದು, ಇನ್ನೂ 318 ರನ್‌ಗಳ ಮೊದಲ ಇನ್ನಿಂಗ್ಸ್ ಹಿನ್ನಡೆಯಲ್ಲಿದೆ.



ಕೆನ್ನಿಂಗ್ಟನ್ ಓವಲ್ ಮೈದಾನದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು ಆಲೌಟ್ ಮಾಡಿದ ಬಳಿಕ ಬ್ಯಾಟಿಂಗ್ ಆರಂಭಿಸಿದ ಭಾರತ ವಿಶ್ವಾಸದಿಂದ ಕೆಲವು ಎಸೆತಗಳನ್ನು ಎದುರಿಸಿತು. ನಾಯಕ ರೋಹಿತ್ ಶರ್ಮ ಹಾಗೂ ಶುಭ್‌ಮನ್ ಗಿಲ್ ನಿಗದಿತ ಸಮಯದಲ್ಲಿ ಬೌಂಡರಿಗಳನ್ನು ಬಾರಿಸುವ ಮೂಲಕ ಸ್ಕೋರ್‌ಬೋರ್ಡ್ ಪ್ರಗತಿಯಲ್ಲಿರಿಸಿದ್ದರು. ಆದರೆ, ಒಮ್ಮೆ ಈ ಆರಂಭಿಕರನ್ನು ಪೆವಿಲಿಯನ್‌ಗಟ್ಟಲು ಯಶಸ್ವಿಯಾದ ಆಸೀಸ್ ಬೌಲರ್‌ಗಳು ಭಾರತದ ಮೇಲೆ ಪಾರಮ್ಯ ಸಾಧಿಸಲು ಯಶಸ್ವಿಯಾದರು.

ರಹಾನೆ ಜೊತೆ ಉತ್ತಮವಾಗಿ ಬ್ಯಾಟಿಂಗ್ ಮಾಡಿದ ರವೀಂದ್ರ ಜಡೇಜಾ ನಿಗದಿತ ಅವಧಿಯಲ್ಲಿ ಬೌಂಡರಿಗಳನ್ನು ಬಾರಿಸುತ್ತಾ ಮೊತ್ತವನ್ನು 100ರ ಗಡಿ ದಾಟಿಸಿದ್ದರು.

ಐದನೇ ವಿಕೆಟ್‌ಗೆ ರಹಾನೆ ಹಾಗೂ ರವೀಂದ್ರ ಜಡೇಜಾ (48ರನ್, 51 ಎಸೆತ, 7 ಬೌಂಡರಿ, 1 ಸಿಕ್ಸರ್) ಅಮೂಲ್ಯ 71 ರನ್ ಜೊತೆಯಾಟವಾಡಿದರು. ಅರ್ಧಶತಕಕ್ಕಿಂತ ಎರಡು ರನ್ ದೂರವಿದ್ದಾಗ ನಥಾನ್ ಲ್ಯಾನ್ ಎಸೆತದಲ್ಲಿ ಸ್ಲಿಪ್‌ನಲ್ಲಿ ಕ್ಯಾಚ್ ನೀಡಿ ಜಡೇಜಾ ನಿರ್ಗಮಿಸಿದರು. 71 ಎಸೆತಗಳಲ್ಲಿ 4 ಬೌಂಡರಿಯೊಂದಿಗೆ 29 ರನ್ ಬಾರಿಸಿರುವ ಅಜಿಂಕ್ಯ ರಹಾನೆ ಹಾಗೂ 14 ಎಸೆತಗಳಲ್ಲಿ 5 ರನ್ ಬಾರಿಸಿರುವ ಕೆಎಸ್ ಭರತ್ 3ನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

ಒಂದನೇ ಪುಟದಿಂದ

ಒಲಿಯಲ್ಲ 'ಗೃಹಲಕ್ಷ್ಮಿ'

ಆಗಸ್ಟ್ 17– 18 ರಂದು ಚಾಲನೆ ನೀಡಲು ತಯಾರಿ ನಡೆಸಲಾಗುತ್ತಿದೆ ಎಂದು ತಿಳಿಸಿದರು. ಎಲ್ಲ ಗ್ಯಾರಂಟಿ ಯೋಜನೆಗಳಿಗೆ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಅತ್ಯಂತ ಸರಳಗೊಳಿಸಬೇಕು. ಅನಗತ್ಯ ಮಾಹಿತಿ, ದಾಖಲೆಗಳನ್ನು ಕೇಳಬಾರದು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಜೊತೆಗೆ ಅರ್ಜಿಗಳನ್ನು ತಿರಸ್ಕರಿಸಿದಲ್ಲಿ, ಅದು ಸಕಾರಣವಾಗಿರಬೇಕು. ಕುಂಟುನೆಪ ನೀಡಿ ತಿರಸ್ಕರಿಸುವಂತಿಲ್ಲ ಎಂದು ಸ್ಪಷ್ಟ ಎಚ್ಚರಿಕೆ ನೀಡಿದರು. ಎಲ್ಲ ಗ್ಯಾರಂಟಿ ಯೋಜನೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅರ್ಜಿಗಳು ಸಲ್ಲಿಕೆಯಾಗುವ ಕಾರಣ, ಅಪಾರ ಪ್ರಮಾಣದ ದತ್ತಾಂಶ ಸಲ್ಲಿಕೆಗೆ ಅನುಗುಣವಾಗಿ ಸೇವಾ ಸಿಂಧು ಪೋರ್ಟಲ್‌ನ ಸಾಮರ್ಥ್ಯ ವೃದ್ಧಿಸುವಂತೆ ಇ–ಆಡಳಿತ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಗೃಹ ಜ್ಯೋತಿ ಯೋಜನೆಗೆ ಆಗಸ್ಟ್ 1ರಂದು ಕಲಬುರಗಿಯಲ್ಲಿ ಚಾಲನೆ ನೀಡುವ ಕುರಿತು ಯೋಚಿಸುತ್ತಿದ್ದೇವೆ. ಈ ಯೋಜನೆಯ ಮಾರ್ಗಸೂಚಿಗಳ ಕುರಿತು ಇರುವ ಎಲ್ಲ ಗೊಂದಲಗಳನ್ನು ನಿವಾರಿಸಿ, ನಾಗರಿಕರಿಗೆ ಅರಿವು ಮೂಡಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಈ ಯೋಜನೆಗೆ ಸೇವಾ ಸಿಂಧು ಪೋರ್ಟಲ್ ಮೂಲಕ ನೋಂದಾಯಿಸಲು ಅವಕಾಶವಿದೆ. ಇದಲ್ಲದೆ, ಎಸ್ಕಾಂಗಳ ಎಲ್ಲ ಕಚೇರಿಗಳಲ್ಲಿ ಹೆಲ್ಪ್ ಡೆಸ್ಕ್ ಸ್ಥಾಪಿಸಲಾಗುವುದು. ಜೂನ್ 15ರಿಂದ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಲಿದೆ. ಬೆಂಗಳೂರು ಒನ್, ಕರ್ನಾಟಕ ಒನ್, ಗ್ರಾಮ ಒನ್ ಕೇಂದ್ರಗಳ ಮೂಲಕ ಹಾಗೂ ಮನೆಯಲ್ಲಿಯೇ ಕಂಪ್ಯೂಟರ್ ಮೂಲಕ ಅಥವಾ ಮೊಬೈಲ್ ಆ್ಯಪ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುವುದು.

ಹೊಸ ಮನೆ, ಹೊಸ ಬಾಡಿಗೆದಾರರಿಗೆ ರಾಜ್ಯದ ವಿದ್ಯುತ್ ಬಳಕೆಯ ಸರಾಸರಿ ಆಧಾರದಲ್ಲಿ ಉಚಿತ ವಿದ್ಯುತ್ ಸೌಲಭ್ಯ ನೀಡಲಾಗುವುದು. ಒಂದು ವರ್ಷದ ಸರಾಸರಿ ಲಭ್ಯವಾದ ನಂತರ, ಈ ದತ್ತಾಂಶವನ್ನು ಆಧರಿಸಿ, ಉಚಿತ ವಿದ್ಯುತ್ ಸೌಲಭ್ಯ ನೀಡಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು. ಹಳೆ ವಿದ್ಯುತ್ ಬಿಲ್ ಬಾಕಿ ಪಾವತಿಗೆ ಸೆಪ್ಟೆಂಬರ್ 30ರವರೆಗೆ ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಗೆ ಆಧಾರ್, ಆರ್‌ಆರ್ ಸಂಖ್ಯೆ, ಬಾಡಿಗೆದಾರರು ಕರಾರು ಪತ್ರ ಹಾಗೂ ಅದೇ ವಿಳಾಸದ ಮತದಾರರ ಗುರುತು ಚೀಟಿ ಮಾಹಿತಿ ಸಲ್ಲಿಸಿ, ಸೌಲಭ್ಯ ಪಡೆಯಬಹುದಾಗಿದೆ.

ಗೃಹಲಕ್ಷ್ಮಿ ಯೋಜನೆಯನ್ನು ಆಗಸ್ಟ್ 17 ಅಥವಾ 18 ರಂದು ಬೆಳಗಾವಿಯಲ್ಲಿ ಚಾಲನೆ ನೀಡುವ ಕುರಿತು ಚರ್ಚಿಸಲಾಯಿತು. ಅರ್ಜಿ ಸಲ್ಲಿಕೆ ಪ್ರಕ್ರಿಯೆ ಜೂನ್ 15 ರಿಂದ ಪ್ರಾರಂಭವಾಗಲಿದೆ. ಈ ಯೋಜನೆಗೆ ಆನ್‌ಲೈನ್‌ನಲ್ಲಿ ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದು. ನಾಡಕಚೇರಿಗಳಲ್ಲಿ ಖುದ್ದಾಗಿ ಅರ್ಜಿ ಸಲ್ಲಿಸಬಹುದು. ಇದಕ್ಕಾಗಿ ಪ್ರತ್ಯೇಕ ಕೌಂಟರುಗಳನ್ನು ಸ್ಥಾಪಿಸಲು ತೀರ್ಮಾನಿಸಲಾಯಿತು.

ಅರ್ಜಿದಾರರು ರೇಷನ್ ಕಾರ್ಡ್ ಸಂಖ್ಯೆ, ಯಜಮಾನಿಯ ಹಾಗೂ ಪತಿಯ ಆಧಾರ್ ಕಾರ್ಡ್ ಸಂಖ್ಯೆ, ಆಧಾರ್ ಸಂಯೋಜನೆಯಾಗಿರುವ ಬ್ಯಾಂಕ್ ಖಾತೆಯ ವಿವರವನ್ನು ಒದಗಿಸಬೇಕು. ಈ ದಾಖಲೆಗಳ ಪ್ರತಿಗಳನ್ನು ಆಫ್‌ಲೈನ್ ಅರ್ಜಿಗಳೊಂದಿಗೂ ಸಲ್ಲಿಸಬಹುದು. ಅರ್ಹ ಫಲಾನುಭವಿಗಳಿಗೆ ಡಿಬಿಟಿ ಮೂಲಕ ನೇರವಾಗಿ ಬ್ಯಾಂಕ್ ಖಾತೆಗೆ ನೆರವಿನ ಮೊತ್ತ ಜಮೆ ಆಗಲಿದೆ. ಈ ಯೋಜನೆಯು ರಾಜ್ಯದ ಶೇ.85ಕ್ಕೂ ಹೆಚ್ಚು ಕುಟುಂಬಗಳನ್ನು ತಲುಪಲಿದೆ ಎಂದು ಅಂದಾಜಿಸಲಾಗಿದೆ. ತೆರಿಗೆ ಪಾವತಿದಾರರಲ್ಲದ ಎಪಿಎಲ್ ಕಾರ್ಡುದಾರರಿಗೂ ಈ ಸೌಲಭ್ಯ ದೊರೆಯಲಿದೆ.

ಗೃಹಜ್ಯೋತಿ, ಉಚಿತ ವಿದ್ಯುತ್ ಯೋಜನೆ ಬಾಡಿಗೆದಾರರಿಗೂ ಅನ್ವಯಿಸುತ್ತಿದ್ದು, ಯೋಜನೆಯ ಅನುಷ್ಠಾನಕ್ಕೆ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ ಎಂದು ಮುಖ್ಯಮಂತ್ರಿ ಇದೇ ಸಂದರ್ಭದಲ್ಲಿ ತಿಳಿಸಿದರು. ಗೃಹಲಕ್ಷ್ಮಿಯ ಯೋಜನೆಯ ಲಾಭ ಪಡೆಯಲು ಬಿಪಿಎಲ್ ಮತ್ತು ಎಪಿಎಲ್ ಕಾರ್ಡ್ ಹೊಂದಿರುವವರು ಅರ್ಜಿ ಸಲ್ಲಿಸಬಹುದಾಗಿದ್ದು, ತೆರಿಗೆ ಪಾವತಿಸುವವರು ಹಾಗೂ ಜಿಎಸ್‌ಟಿ ನೋಂದಣಿ ಮಾಡಿಕೊಂಡಿರುವವರು ಈ ಯೋಜನೆಯ ವ್ಯಾಪ್ತಿಗೆ ಬರುವುದಿಲ್ಲ ಎಂದರು.

ಸಿದ್ದರಾಮಯ್ಯರ ಮೊದಲ ಭೇಟಿ

ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದಿತ್ತು. ಜಿದ್ದಾಜಿದ್ದಿನಿಂದ ಕೂಡಿದ್ದ ಚುನಾವಣೆಯಲ್ಲಿ ಸಿದ್ದರಾಮಯ್ಯ ಪ್ರಚಂಡ ಗೆಲುವು ಸಾಧಿಸುವ ಮೂಲಕ ಎರಡನೇ ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಬಳಿಕ ಇದೇ ಮೊದಲ ಬಾರಿಗೆ ಸ್ವಕ್ಷೇತ್ರಕ್ಕೆ ಆಗಮಿಸಿ, ಕ್ಷೇತ್ರದ ಜನರಿಗೆ ಕೃತಜ್ಞತೆ ಸಲ್ಲಿಸಲಿದ್ದಾರೆ. ಜೂ.10ರಂದು ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಹೆಲಿಕಾಪ್ಟರ್‌ನಲ್ಲಿ ನಂಜನೂಡು ತಾಲೂಕಿನ ಸುತ್ತೂರು ಹೆಲಿಪ್ಯಾಡ್‌ಗೆ ಬೆಳಗ್ಗೆ 10.30ಕ್ಕೆ ಆಗಮಿಸಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಳಿಕ ಬೆಳಗ್ಗೆ 11 ಗಂಟೆಗೆ ವರುಣ ವಿಧಾನಸಭಾ ಕ್ಷೇತ್ರದ ಬಿಳಿಗೆರೆ ಬೋರೆಯಲ್ಲಿ ಆಯೋಜಿಸಿರುವ ಮತದಾರರಿಗೆ ಕೃತಜ್ಞತೆ ಸಲ್ಲಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 2 ಗಂಟೆಗೆ ಶ್ರೀ ಕ್ಷೇತ್ರ ಸುತ್ತೂರು ಮಠಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆಯಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಸುತ್ತೂರು ಹೆಲಿಪ್ಯಾಡ್‌ನಿಂದಲೇ ಬೆಂಗಳೂರಿಗೆ ತೆರಳಲಿದ್ದಾರೆ.

ಸಿದ್ದರಾಮಯ್ಯ ಅವರಿಗೆ ಲಕ್ಕಿ ಕ್ಷೇತ್ರ: ಮೈಸೂರು, ನಂಜನಗೂಡು, ತಿ.ನರಸೀಪುರ ತಾಲೂಕಿನ ಗ್ರಾಮಗಳನ್ನು ಒಳಗೊಂಡಿರುವ ವರುಣ ಹಲವು ವೈಶಿಷ್ಟ್ಯತೆಯನ್ನು ಕೂಡಿರುವ ಕ್ಷೇತ್ರವಾಗಿದೆ. ಸಿದ್ದರಾಮಯ್ಯ ಅವರ ಸ್ವಗ್ರಾಮ ಸಿದ್ದರಾಮನಹುಂಡಿ ವರುಣ ಕ್ಷೇತ್ರಕ್ಕೆ ಒಳಪಟ್ಟಿದ್ದು, ಮನೆ ದೇವರು ಸಿದ್ದರಾಮೇಶ್ವರರ ಕೃಪೆಯೂ ಸಿದ್ದರಾಮಯ್ಯರ ಮೇಲಿರುವುದರಿಂದ ಮತ್ತೆ ಉನ್ನತ ಅಧಿಕಾರ ಸಿಗುತ್ತದೆ ಎಂದು ಗ್ರಾಮಸ್ಥರು ಚುನಾವಣೆಗೂ ಮುನ್ನವೇ ವಿಶ್ಲೇಷಿಸಿದ್ದರು. ಸಿದ್ದರಾಮೇಶ್ವರ ದೇವರ ಆರಾಧನೆಗಾಗಿ ವೀರಮಕ್ಕಳ ಕುಣಿತ ಮಾಡುತ್ತಿದ್ದ ಸಿದ್ದರಾಮಯ್ಯ, ಚಿಕ್ಕಂದಿನಿಂದಲೂ ಸಿದ್ದರಾಮೇಶ್ವರರ ಜಾತ್ರೆ ವೇಳೆ ಎರಡು ದಿನಗಳ ಕಾಲ ದೇವಾಲಯದ ಮುಂದೆ ವೀರಮಕ್ಕಳ ಕುಣಿತ ಪ್ರದರ್ಶಿಸಿ ದೇವರ ಕೃಪೆಗೆ ಪಾತ್ರರಾಗಿದ್ದಾರೆ ಎಂಬುದು ಆಪ್ತರ ಅಭಿಪ್ರಾಯ.

ಎರಡು ಸಿಎಂ ಮಾಡಿದ ಕ್ಷೇತ್ರ: 2008ರಲ್ಲಿ ಕ್ಷೇತ್ರ ಪುನರ್ ವಿಂಗಡಣೆ ನಂತರ ಉದಯಿಸಿದ ವರುಣ ಕ್ಷೇತ್ರದಿಂದ ಮೊದಲ ಬಾರಿಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಸಿದ್ದರಾಮಯ್ಯ ಗೆಲುವು ಸಾಧಿಸಿ, ವಿರೋಧ ಪಕ್ಷದ ನಾಯಕರಾಗಿ 5 ವರ್ಷ ಆಡಳಿತ ನಡೆಸಿದರು. ಬಳ್ಳಾರಿಯಲ್ಲಿ ನಡೆಯುತ್ತಿದ್ದ ಗಣಿ ದಂಧೆ ವಿರುದ್ಧ ಸಮರ ಸಾರಿ, ಸಚಿವರಾದ ಜನಾರ್ಧನರೆಡ್ಡಿ, ಶ್ರೀರಾಮುಲು, ಕರುಣಾಕರ ರೆಡ್ಡಿ ಹಾಗೂ ಇನ್ನಿತರರು ನೀಡಿದ ಸವಾಲು ಸ್ವೀಕರಿಸಿ, ತೊಡೆ ತಟ್ಟಿ ಬೆಂಗಳೂರಿಂದ ಬಳ್ಳಾರಿವರೆಗೆ ಪಾದಯಾತ್ರೆ ನಡೆಸಿ, ದಾಖಲೆ ಬರೆದರು. 2013ರಲ್ಲಿ ಮತ್ತೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಆಯ್ಕೆಯಾದ ಸಿದ್ದರಾಮಯ್ಯ, ಮುಖ್ಯಮಂತ್ರಿಯಾದರು. ಹಲವು ಭಾಗ್ಯಗಳನ್ನು ಜಾರಿಗೊಳಿಸುವ ಮೂಲಕ ಜನಪ್ರಿಯರಾದರು. ಮೈಸೂರು ಮೂಲದವರೇ ಆದ, ಡಿ.ದೇವರಾಜ ಅರಸ್ ಹೊರತು ಐದು ವರ್ಷಗಳು ಪೂರ್ಣಾವಧಿ ಮುಖ್ಯಮಂತ್ರಿಯಾಗಿದ್ದ ಹೆಗ್ಗಳಿಕೆಗೆ ಸಿದ್ದರಾಮಯ್ಯ ಪಾತ್ರರಾಗಿದ್ದರು. 2023ರಲ್ಲಿ ತಮ್ಮ ಕೊನೆ ಚುನಾವಣೆಯನ್ನು ತವರು ಕ್ಷೇತ್ರದಿಂದಲೇ ಎದುರಿಸಿದ್ದ ಸಿದ್ದರಾಮಯ್ಯ ಅಭೂತಪೂರ್ವ ಗೆಲುವು ಸಾಧಿಸಿ ಎರಡನೇ ಬಾರಿಗೆ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರದ ಗದ್ದುಗೆ ಏರಿದ್ದಾರೆ. ಆ ಮೂಲಕ ರಾಜ್ಯಕ್ಕೆ ಎರಡು ಬಾರಿ ಮುಖ್ಯಮಂತ್ರಿ ನೀಡಿದ ಕೀರ್ತಿಗೆ ವರುಣ ಕ್ಷೇತ್ರ ಭಾಜನವಾಗಿದೆ.

ಸಿದ್ದರಾಮಯ್ಯರಿಗೆ ಅದ್ಧೂರಿ ಸ್ವಾಗತಕ್ಕೆ ನಿರ್ಧಾರ

● ಮೈಸೂರು ಜಿಲ್ಲಾ ಕಾಂಗ್ರೆಸ್ ಪೂರ್ವಭಾವಿ ಸಭೆಯಲ್ಲಿ ಮುಖಂಡರ ಅಭಿಪ್ರಾಯ ಸಂಗ್ರಹ ● 50 ಸಾವಿರಕ್ಕೂ ಅಧಿಕ ಜನ ಸೇರಿಸಲು ನಿರ್ಧಾರ



ಮೈಸೂರು,ಜೂ.8(ಎಂಟಿವೈ)– ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ತವರು ಜಿಲ್ಲೆ ಮೈಸೂರಿಗೆ ಪ್ರಥಮ ಬಾರಿಗೆ ಆಗಮಿಸುತ್ತಿರುವ ಸಿದ್ದರಾಮಯ್ಯ ಅವರನ್ನು ಅದ್ಧೂರಿಯಾಗಿ ಸ್ವಾಗತಿಸಲು ಜಿಲ್ಲಾ ಕಾಂಗ್ರೆಸ್ ನಿರ್ಧರಿಸಿದೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಗುರುವಾರ ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ಸಹಯೋಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ವಾಗತಕ್ಕೆ ನಡೆದ ಪೂರ್ವಭಾವಿ ಸಭೆಯಲ್ಲಿ ಜಿಲ್ಲೆಯ ಹಲವು ಮುಖಂಡರು ಮಾತನಾಡಿ, ಎರಡನೇ ಬಾರಿಗೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿರುವುದು ಮೈಸೂರಿಗರು ಹೆಮ್ಮೆ ಪಡುವ ಸಂಗತಿ. ಅದರಲ್ಲೂ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮ ಪಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರಿಗೆ ಮೊಟ್ಟ ಮೊದಲ ಬಾರಿಗೆ ಆಗಮಿಸುತ್ತಿರುವುದರಿಂದ ಪಕ್ಷದ ವತಿಯಿಂದ ಅದ್ಧೂರಿಯಾಗಿ ಸ್ವಾಗತಿಸಬೇಕು. ಜಿಲ್ಲೆಯ ಎಲ್ಲಾ ಕ್ಷೇತ್ರಗಳ ಕಾರ್ಯಕರ್ತರು ಸ್ವಾಗತ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು ಎಂದು ಪ್ರತಿಪಾದಿಸಿದರು.

ಲೋಕಸಭಾ ಚುನಾವಣೆಗೆ ಸಜ್ಜಾಗಬೇಕು: ಜಿ.ಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ ಮಾತನಾಡಿ, ಮಾಜಿ ಮುಖ್ಯಮಂತ್ರಿ ದೇವರಾಜ ಅರಸ್ ಅವರನ್ನು ಹೊರತುಪಡಿಸಿದರೆ, ಮೈಸೂರು ಜಿಲ್ಲೆಯಿಂದಲೇ ಎರಡನೇ ಬಾರಿ ಮುಖ್ಯಮಂತ್ರಿಯಾಗಿದ್ದು ಸಿದ್ದರಾಮಯ್ಯ. ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರನ್ನು ಸೋಲಿಸಿ, ಮತ್ತೆ ಮುಖ್ಯಮಂತ್ರಿಯಾಗುವ ಅವಕಾಶವನ್ನು ತಪ್ಪಿಸಲು ವಿರೋಧ ಪಕ್ಷಗಳು ಸಾಕಷ್ಟು ಸಂಚು ಮಾಡಿದ್ದವು. ಹಣದ ಹೊಳೆಯನ್ನೇ ಹರಿಸಿ, ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರಿಗೆ ಹಿನ್ನಡೆಯುಂಟು ಮಾಡಬೇಕು ಎಂದು ಕುತಂತ್ರ ಮಾಡಲಾಗಿತ್ತು. ಆದರೂ, ವರುಣ ಕ್ಷೇತ್ರದ ಜನತೆ ಮನೆ ಮಗನಂತಿರುವ ಸಿದ್ದರಾಮಯ್ಯ ಅವರನ್ನು ಭಾರೀ ಅಂತರದಿಂದ ಆಯ್ಕೆ ಮಾಡಿ, ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಲು ಕಾರಣರಾಗಿದ್ದಾರೆ. ಮೊದಲ ಬಾರಿಗೆ ಮೈಸೂರು ಜಿಲ್ಲೆಗೆ ಆಗಮಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸ್ವಾಗತಿಸುವ ಕಾರ್ಯಕ್ರಮದಲ್ಲಿ ಎಲ್ಲಾ ಘಟಕಗಳ ಕಾರ್ಯಕರ್ತರು ಮುಂದಾಗಬೇಕು. ಈಗಾಗಲೇ ರಾಜ್ಯದಲ್ಲಿ ಹೊಸ ಯುಗ ಆರಂಭವಾಗಿದೆ. ಕಾರ್ಯಕರ್ತರಲ್ಲಿ ಉತ್ಸಾಹ ಇನ್ನಷ್ಟು ಹೆಚ್ಚಾಗಬೇಕು. ವಿಧಾನಸಭಾ ಚುನಾವಣೆಯಂತೆ 2024ರ ಲೋಕಸಭಾ ಚುನಾವಣೆಯಲ್ಲೂ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಬೇಕು ಎಂದು ಮನವಿ ಮಾಡಿದರು.

ಮಾಜಿ ಶಾಸಕ ಬನ್ನೂರು ಕೃಷ್ಣಪ್ಪ ಮಾತನಾಡಿ, ಸಿದ್ದರಾಮಯ್ಯ ಅವರು 2ನೇ ಬಾರಿ ಮುಖ್ಯಮಂತ್ರಿಯಾಗಿರುವುದು ಹೆಮ್ಮೆಯ ವಿಚಾರ. ಅವರನ್ನು ಆತ್ಮೀಯವಾಗಿ ಸ್ವಾಗತಿಸುವುದು ನಮ್ಮ ಆದ್ಯ ಕರ್ತವ್ಯ. ಅಲ್ಲದೇ, ಪಕ್ಷವನ್ನು ಅಧಿಕಾರಕ್ಕೆ ತರಲು ಕಷ್ಟಪಟ್ಟವರಿಗೆ ಅವಕಾಶ ಸಿಗಬೇಕು ಎಂದು ಅಭಿಪ್ರಾಯಪಟ್ಟರು.

ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ ಸಿದ್ಧಶೆಟ್ಟಿ ಮಾತನಾಡಿ, ತಾಲೂಕು ಕೇಂದ್ರಗಳಿಂದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಸೂಚಿಸುತ್ತೇವೆ. ಜಿಲ್ಲಾ ಕಾಂಗ್ರೆಸ್ ಆದೇಶವನ್ನು ಪಾಲಿಸುತ್ತೇವೆ ಎಂದರು.

ನಗರ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾಲತಾ ಚಿಕ್ಕಣ್ಣ ಮಾತನಾಡಿ, 5 ಗ್ಯಾರಂಟಿಗಳನ್ನು ಜಾರಿ ಮಾಡಿರುವ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದುಕೊಂಡಿದೆ. ಸಿದ್ದರಾಮಯ್ಯ ಅವರ ಸ್ವಾಗತಿಸಲು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರನ್ನು ಸೇರಿಸಲಾಗುವುದು ಎಂದು ತಿಳಿಸಿದರು.

ಕೆಪಿಸಿಸಿ ಕಾರ್ಯದರ್ಶಿ ಪ್ರೊ.ರಾಮಪ್ಪ ಮಾತನಾಡಿ, ಮುಖ್ಯಮಂತ್ರಿಯಾದ ಬಳಿಕ ಮೈಸೂರಿಗೆ ಬರಲು ಸಿದ್ದರಾಮಯ್ಯ ಅವರಿಗೆ ಆಸೆಯಿತ್ತು. ದಾವಣಗೆರೆಯಲ್ಲಿ ತೀರ ಹತ್ತಿರದವರ ವಿವಾಹ ಇದ್ದರಿಂದ ಅಲ್ಲಿಗೆ ಭೇಟಿ ನೀಡಿದರು. 3 ಗಂಟೆಯಷ್ಟೇ ಅಲ್ಲಿದ್ದರು ಎಂದು ತಿಳಿಸಿದರು.

ಪಕ್ಷದ ಕಾರ್ಯಕರ್ತರ ಶ್ರಮದಿಂದ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ತಮ ವೈಯಕ್ತಿಕ ಕೆಲಸಗಳನ್ನು ಬಿಟ್ಟು ಹಗಲು ರಾತ್ರಿ ದುಡಿದಿದ್ದಾರೆ. ಕೆಲಸ ಮಾಡಿದವರಿಗೆ ಕೂಲಿ ಕೊಡಬೇಕಾಗಿದೆ. ಜುಲೈ ತಿಂಗಳ ಬಜೆಟ್ ಅಧಿವೇಶನದ ಬಳಿಕ ನಿಗಮ ಮಂಡಳಿಗಳ ಅಧ್ಯಕ್ಷರ ನೇಮಕವಾಗಲಿದೆ ಎಂದು ನುಡಿದರು.

ಸಭೆಯಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಕೆಪಿಸಿಸಿ ಕಾರ್ಯದರ್ಶಿ ಚಂದ್ರಮೌಳಿ, ಮುಖಂಡರಾದ ಶಿವ ನಾಗಪ್ಪ ಮಂಜುಳಾ ಮಾನಸ, ಕುರ್ಗಳ್ಳಿ ಮಹದೇವ್, ಮಾಜಿ ಮೇಯರ್ ಚಿಕ್ಕಣ್ಣ, ಪ್ರೊ.ಶಿವಪ್ರಸಾದ್, ಶಿವಪ್ರಸಾದ್, ಸೇವಾದಳ ಮುಖಂಡ ಗಿರೀಶ್, ಕಾಂಗ್ರೆಸ್ ಮುಖಂಡ ಸುಂದರ, ಹರ್ಷ, ಈಶ್ವರ ಚಕ್ಕಡಿ, ಡಿ.ನಾಗಭೂಷಣ್, ಜವರೇಗೌಡ, ಎನ್.ಆರ್. ಕ್ಷೇತ್ರದ ಬ್ಲಾಕ್ ಅಧ್ಯಕ್ಷ ಮಂಜುನಾಥ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

50 ಸಾವಿರ ಕಾರ್ಯಕರ್ತರು ಸೇರಬೇಕು

ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ಮೈಸೂರಿಗೆ ಆಗಮಿಸುತ್ತಿರುವ ಸಿದ್ದರಾಮಯ್ಯ ಅವರನ್ನು ಸಾಂಪ್ರದಾಯಿಕವಾಗಿ ಸ್ವಾಗತಿಸಲಾಗುತ್ತದೆ. ಈ ಕಾರ್ಯಕ್ಕೆ ಎಲ್ಲರ ಸಹಕಾರ ಬೇಕು. ಸುತ್ತೂರು ಗ್ರಾಮದ ಹೊರ ವಲಯದಲ್ಲಿ ಹೆಲಿಪ್ಯಾಡ್ ಇದ್ದು, ಅಲ್ಲಿಂದ ಗ್ರಾಮಕ್ಕೆ 1 ಕಿ.ಮೀ. ಅಂತರ ಇದೆ. ದಾರಿಯುದ್ದಕ್ಕೂ 40ರಿಂದ 50 ಸಾವಿರ ಕಾರ್ಯಕರ್ತರು ಸೇರಬಹುದು. ಈ ವೇಳೆ ಅರ್ಧ ಕಿ.ಮೀ ದೂರ ತೆರೆದ ಜೀಪಿನಲ್ಲಿ ಕರೆತರಲು ಚಿಂತನೆ ನಡೆಸಿದ್ದೇವೆ.

ಈ ಹಿಂದೆ ವಿರೋಧ ಪಕ್ಷದ ನಾಯಕರಾಗಿ ಮೊದಲ ಬಾರಿಗೆ ಮೈಸೂರಿಗೆ ಆಗಮಿಸಿದ್ದಾಗ ಆರ್‌ಎಂಸಿ ಜಂಕ್ಷನ್‌ನಲ್ಲಿ 10 ಸಾವಿರ ಕಾರ್ಯಕರ್ತರು ಸಿದ್ದರಾಮಯ್ಯ ಅವರನ್ನು ಸ್ವಾಗತಿಸಿ, ಬರಮಾಡಿಕೊಂಡಿದ್ದರು. ಈ ಬಾರಿ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಆಗಮಿಸುತ್ತಿರುವುದರಿಂದ ಇನ್ನೂ ಸಂಭ್ರಮದಿಂದ ಬರಮಾಡಿಕೊಳ್ಳಬೇಕು. ಇದಕ್ಕಾಗಿ ಬ್ಲಾಕ್ ಅಧ್ಯಕ್ಷರು, ಪಕ್ಷದ ಹಿರಿಯ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಕರೆತರಬೇಕು. ಕಲಾತಂಡಗಳ ವ್ಯವಸ್ಥೆ ಮಾಡಬೇಕು. ಎಲ್ಲಾ ವಿಭಾಗಗಳ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕು.

- ಡಾ.ಬಿ.ಜೆ.ವಿಜಯ್ ಕುಮಾರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ

ಜ್ಞಾನಸಿರಿಯಡಿ 50 ಪ್ರತಿಭಾನ್ವಿತ ಹೆಣ್ಣು ಮಕ್ಕಳಿಗೆ ತಲಾ 50 ಸಾವಿರ ಪುರಸ್ಕಾರ

ಮೈಸೂರು ಪಾಲಿಕೆಯ ಮಹತ್ವದ ನೆರವು ಯೋಜನೆ



ಮೈಸೂರು, ಜೂ.8(ಎಂಕೆ)– ಸರ್ಕಾರಿ ಶಾಲಾ–ಕಾಲೇಜು ವಿದ್ಯಾರ್ಥಿನಿಯರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಮೈಸೂರು ಮಹಾನಗರ ಪಾಲಿಕೆಯು 'ಜ್ಞಾನ ಸಿರಿ' ಯೋಜನೆ ಜಾರಿಗೊಳಿಸುವ ಮೂಲಕ ಮಹತ್ವದ ನಿರ್ಧಾರ ಕೈಗೊಂಡಿದೆ.

ನಗರ ಪಾಲಿಕೆಯ 2023–24ನೇ ಸಾಲಿನ ಬಜೆಟ್‌ನಲ್ಲಿ ಜ್ಞಾನ ಸಿರಿ ಯೋಜನೆ ಘೋಷಣೆ ಮಾಡಿದ್ದು, ಪಾಲಿಕೆ ವ್ಯಾಪ್ತಿಯಲ್ಲಿನ ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕಪಡೆದ 25 ವಿದ್ಯಾರ್ಥಿನಿಯರು ಹಾಗೂ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ 25 ವಿದ್ಯಾರ್ಥಿನಿಯರು ಸೇರಿ ಒಟ್ಟು 50 ಮಂದಿ ವಿದ್ಯಾರ್ಥಿನಿಯರು ಪ್ರತಿ ವರ್ಷ ಈ ಯೋಜನೆ ಫಲಾನುಭವಿಗಳಾಗಿದ್ದಾರೆ.

ಅಂಕಗಳ ಆಧಾರಿತ ಆಯ್ಕೆ: ಜ್ಞಾನ ಸಿರಿ ಯೋಜನೆಯಲ್ಲಿ ಪ್ರೋತ್ಸಾಹ ಧನ ನೀಡಲು ಅಂಕಗಳ ಆಧಾರವೇ ಮುಖ್ಯವಾಗಿದೆ. ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ಮಾತ್ರ ಅತೀ ಹೆಚ್ಚು ಅಂಕಪಡೆದ ಮೊದಲ 25 ವಿದ್ಯಾರ್ಥಿನಿಯರಿಗೆ ಯೋಜನೆ ಫಲ ಲಭಿಸಲಿದೆ. ಸಾಮಾನ್ಯವಾಗಿ ಸರ್ಕಾರಿ ಶಾಲೆಗಳಲ್ಲಿ ಬಡ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ. ಅವರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ನಗರ ಪಾಲಿಕೆ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಇಷ್ಟು ಮೊತ್ತದ ಪ್ರೋತ್ಸಾಹ ಧನ ನೀಡುವ ಯೋಜನೆ ಘೋಷಣೆ ಮಾಡಲಾಗಿದೆ ಎಂದು ಮೇಯರ್ ಶಿವಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

10 ರಿಂದ 25ಕ್ಕೆ ಹೆಚ್ಚಳ: ಬಜೆಟ್ ಮಂಡನೆ ವೇಳೆ ಜ್ಞಾನ ಸಿರಿ ಯೋಜನೆಯಡಿ 10 ಮಂದಿ ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹ ನೀಡುವುದಾಗಿ ಘೋಷಣೆಯಾಗಿತ್ತು. ಆದರೆ ಬಜೆಟ್ ನಂತರ ಮತ್ತೊಮ್ಮೆ ತೆರಿಗೆ ನಿರ್ಧರಣಾ, ಹಣಕಾಸು ಮತ್ತು ಅಪೀಲುಗಳಿಗಾಗಿ ಸ್ಥಾಯಿ ಸಮಿತಿ ಅಧ್ಯಕ್ಷರು ಸೇರಿದಂತೆ ಪಾಲಿಕೆಯ ಎಲ್ಲಾ ಸದಸ್ಯರ ಗಮನಕ್ಕೆ ತಂದು 25ಕ್ಕೆ ಹೆಚ್ಚಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಿಂದ ಒಟ್ಟು 50 ವಿದ್ಯಾರ್ಥಿನಿಯರು ಪ್ರೋತ್ಸಾಹ ಧನ ಪಡೆದುಕೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು.

25 ಲಕ್ಷ ರೂ. ಪ್ರತ್ಯೇಕವಾಗಿಡಲಾಗಿದೆ: ಜ್ಞಾನ ಸಿರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಈಗಾಗಲೇ 25 ಲಕ್ಷ ರೂ.ಗಳನ್ನು ಪ್ರತ್ಯೇಕವಾಗಿ ಇಡಲಾಗಿದೆ. ವಿದ್ಯಾರ್ಥಿನಿಯರು ಪ್ರೋತ್ಸಾಹ ಧನ ಪಡೆದುಕೊಳ್ಳುವುದೇಗೆ ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಅರ್ಜಿ ಸಿದ್ದಪಡಿಸಿ ಮಾಹಿತಿ ನೀಡಲಾಗುವುದು. ಯೋಜನೆಯನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಅಧಿಕಾರಿಗಳು ನಿರ್ವಹಿಸಲಿದ್ದಾರೆ ಎಂದರು.

ಈ ವರ್ಷದಿಂದಲೇ ನೀಡುವ ಪ್ರಯತ್ನ: ಮುಂದಿನ ಶೈಕ್ಷಣಿಕ ವರ್ಷದಿಂದ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ಬಂದ ಬಳಿಕ ಎಲ್ಲಾ ಸರ್ಕಾರಿ ಶಾಲಾ–ಕಾಲೇಜುಗಳಿಗೆ ಮಾಹಿತಿ ನೀಡಿ, ಅರ್ಜಿ ಸಲ್ಲಿಸುವಂತೆ ಪ್ರಕ್ರಿಯೆಗಳನ್ನು ನಡೆಸಬೇಕು ಎಂದು ನಿರ್ಧರಿಸಲಾಗಿತ್ತು. ಆದರೆ ಇತ್ತೀಚೆಗಷ್ಟೇ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಫಲಿತಾಂಶ ಬಂದಿರುವುದರಿಂದ ಪ್ರಸಕ್ತ ಸಾಲಿನಿಂದಲೇ ಪ್ರೋತ್ಸಾಹ ನೀಡುವ ಪ್ರಯತ್ನ ಮಾಡಲಾಗುವುದು. ಈ ಸಂಬಂಧ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗುವುದು ಎಂದು ತಿಳಿಸಿದರು.

> "ಹೆಣ್ಣು ಮಕ್ಕಳಿಗೆ ಶೈಕ್ಷಣಿಕವಾಗಿ ಉತ್ತೇಜನ ನೀಡುವ ದೃಷ್ಟಿಯಿಂದ 'ಜ್ಞಾನ ಸಿರಿ' ಯೋಜನೆ ಜಾರಿಗೊಳಿಸಲಾಗಿದೆ. ಇದರಿಂದ ಉನ್ನತ ವಿದ್ಯಾಭ್ಯಾಸ' ಮಾಡಬೇಕು ಎಂದು ಕನಸು ಕಾಣುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕವಾಗಿ ಸ್ವಲ್ಪ ಮಟ್ಟಿನ ಸಹಾಯವಾಗಲಿದೆ. ಅಲ್ಲದೆ ಯೋಜನೆ ಜಾರಿಗೊಳಿಸುವ ಮೂಲಕ ಸರ್ಕಾರಿ ಶಾಲಾ–ಕಾಲೇಜುಗಳಿಗೂ ಉತ್ತೇಜನ ನೀಡಿದಂತಾಗುತ್ತದೆ.
>
> - ಶಿವಕುಮಾರ್, ಮೇಯರ್



ಹಸಿರು ನಮ್ಮ ಉಸಿರು

ಊಟಿ ಬಳಿ ಕಾರು ಪಲ್ಟಿಯಾಗಿ ಮೈಸೂರಿನ ಬಿಜೆಪಿ ಮುಖಂಡ ಸ್ವಾಮಿಗೌಡ ದುರ್ಮರಣ



ಮೈಸೂರು, ಜೂ.8– ನೀಲಗಿರಿ ಜಿಲ್ಲೆ ಕೂಡಲೂರು ಸಮೀಪ ಕಾರು ಪಲ್ಟಿಯಾಗಿ ಮೈಸೂರಿನ ಬಿಜೆಪಿ ಮುಖಂಡ ಸ್ವಾಮಿಗೌಡ(43) ಸಾವನ್ನಪ್ಪಿದ್ದಾರೆ.

ನರಸಿಂಹರಾಜ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿರುವ ಇವರು ತಮ್ಮ ಸ್ನೇಹಿತ ಜಗದೀಶ್ ಎಂಬುವರ ಕುಟುಂಬದೊಂದಿಗೆ ಕಾರಿನಲ್ಲಿ (ಕೆ.ಎ–54, ಎಂ.2745)ಊಟಿಗೆ ಪ್ರವಾಸ ತೆರಳಿದ್ದರು. ಇಂದು ಮಧ್ಯಾಹ್ನ ಮೈಸೂರಿಗೆ ಹಿಂತಿರುಗುತ್ತಿದ್ದಾಗ ಕೂಡಲೂರು ಬಳಿ ತಿರುವೊಂದರಲ್ಲಿ ನಿಯಂತ್ರಣ ತಪ್ಪಿದ ಕಾರು ರಸ್ತೆಯಲ್ಲೇ ಪಲ್ಟಿ ಹೊಡೆದಿದೆ. ಈ ಅಪಘಾತದಲ್ಲಿ ಸ್ವಾಮಿಗೌಡ ಸ್ಥಳದಲ್ಲೇ ಮೃತಪಟ್ಟರೇ, ಅವರ ಸ್ನೇಹಿತ ಜಗದೀಶ್, ಪತ್ನಿ ಹಾಗೂ ಇಬ್ಬರು ಮಕ್ಕಳು ಗಾಯಗೊಂಡಿದ್ದಾರೆ. ಊಟಿಯ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಸ್ವಾಮಿಗೌಡರ ದೇಹವನ್ನು ಇಡಲಾಗಿದ್ದು, ನಾಳೆ ಮರಣೋತ್ತರ ಪರೀಕ್ಷೆ ನಂತರ ಮೈಸೂರಿಗೆ ತರಲಾಗುವುದು ಎಂದು ಮೂಲಗಳು ತಿಳಿಸಿವೆ.

ಎನ್.ಆರ್.ಮೊಹಲ್ಲಾ ನಿವಾಸಿಯಾದ ಸ್ವಾಮಿಗೌಡ ಹಲವಾರು ವರ್ಷಗಳಿಂದ ಬಿಜೆಪಿಯ ಸಕ್ರೀಯ ಕಾರ್ಯಕರ್ತರಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ನಿಷ್ಠಾವಂತರಾಗಿ ಪಕ್ಷದ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದ ಅವರನ್ನು ಕ್ಷೇತ್ರದ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿತ್ತು. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್ ಆಪ್ತರಾಗಿದ್ದ ಸ್ವಾಮಿಗೌಡರು ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆಯಲ್ಲೂ ಪಕ್ಷದ ಅಭ್ಯರ್ಥಿ ಸಂದೇಶ್ ಸ್ವಾಮಿ ಪರ ಅವಿರತ ದುಡಿದಿದ್ದರು. ಸ್ವಾಮಿಗೌಡ ಪತ್ನಿ, ಇಬ್ಬರು ಪುತ್ರಿಯರು, ತಾಯಿ, ಸಹೋದರ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಇವರ ನಿಧನಕ್ಕೆ ಬಿ.ಪಿ.ಮಂಜುನಾಥ್, ಮಾಜಿ ಮೇಯರ್ ಸಂದೇಶ್ ಸ್ವಾಮಿ ಸೇರಿದಂತೆ ಹಲವಾರು ಬಿಜೆಪಿ ಮುಖಂಡರು ಸಂತಾಪ ಸೂಚಿಸಿದ್ದಾರೆ.

ಈ ಬಾರಿಯ ವಿಶ್ವ ಸುಂದರಿ ಸ್ಪರ್ಧೆ ಆತಿಥ್ಯ ವಹಿಸಲಿದೆ ಭಾರತ

ನವದೆಹಲಿ, ಜೂ.8– ಬರೋಬ್ಬರಿ 27 ವರ್ಷಗಳ ನಂತರ ಭಾರತ ವಿಶ್ವ ಸುಂದರಿ ಸ್ಪರ್ಧೆ 2023 ಅನ್ನು ಆಯೋಜಿಸಲು ಸಿದ್ಧವಾಗಿದ್ದು, ಅಂತರರಾಷ್ಟ್ರೀಯ ಸೌಂದರ್ಯ ಸ್ಪರ್ಧೆಯು ಸುಮಾರು ಮೂರು ದಶಕಗಳ ಬಳಿಕ ದೇಶಕ್ಕೆ ಮರಳುತ್ತಿದೆ. ಬಹು ನಿರೀಕ್ಷಿತ ವಿಶ್ವ ಸುಂದರಿ ಸ್ಪರ್ಧೆಯ 71ನೇ ಆವೃತ್ತಿಯ ದಿನಾಂಕ ಇನ್ನೂ ನಿಗದಿಯಾಗಿಲ್ಲ. ಆದರೆ ಈ ವರ್ಷದ ನವೆಂಬರ್‌ನಲ್ಲಿ ನಡೆಯಲಿದೆ ಎಂದು ನಿರೀಕ್ಷಿಸಲಾಗಿದೆ. ಭಾರತವು ಕೊನೆಯದಾಗಿ 1996 ರಲ್ಲಿ ಅಂತರಾಷ್ಟ್ರೀಯ ಸೌಂದರ್ಯ ಸ್ಪರ್ಧೆಯನ್ನು ಆಯೋಜಿಸಿತ್ತು.

71ನೇ ವಿಶ್ವ ಸುಂದರಿ ಸ್ಪರ್ಧೆಯ ಫೈನಲ್ ಭಾರತದಲ್ಲಿ ನಡೆಯಲಿದೆ ಎಂದು ಘೋಷಿಸಲು ನನಗೆ ಸಂತೋಷವಾಗುತ್ತಿದೆ... ನಿಮ್ಮ ಅನನ್ಯ ಮತ್ತು ವೈವಿಧ್ಯಮಯ ಸಂಸ್ಕೃತಿ, ವಿಶ್ವ ದರ್ಜೆಯ ಆಕರ್ಷಣೆಗಳು ಮತ್ತು ಅದ್ಭುತ ಸ್ಥಳಗಳನ್ನು ಪ್ರಪಂಚದ ಇತರರೊಂದಿಗೆ ಹಂಚಿಕೊಳ್ಳಲು ಇನ್ನೂ ನಾವು ಕಾಯಲು ಸಾಧ್ಯವಿಲ್ಲ. 71ನೇ ವಿಶ್ವ ಸುಂದರಿ ಸ್ಪರ್ಧೆಯ ಫೈನಲ್ ಭಾರತದಲ್ಲಿ ನಡೆಯಲಿದ್ದು, 130 ರಾಷ್ಟ್ರೀಯ ಚಾಂಪಿಯನ್‌ಗಳ ಸಾಧನೆಗಳನ್ನು ಪ್ರದರ್ಶಿಸುತ್ತೇವೆ ಎಂದು ಮಿಸ್ ವರ್ಲ್ಡ್ ಸಂಸ್ಥೆಯ ಅಧ್ಯಕ್ಷೆ ಮತ್ತು ಸಿಇಒ ಜೂಲಿಯಾ ಮೋರ್ಲೆ ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. 130ಕ್ಕೂ ಹೆಚ್ಚು ದೇಶಗಳ ಸ್ಪರ್ಧಿಗಳು ಭಾಗವಹಿಸುವ ಒಂದು ತಿಂಗಳ ಅವಧಿಯ ಈ ಸ್ಪರ್ಧೆ, ಪ್ರತಿಭಾ ಪ್ರದರ್ಶನ, ಕ್ರೀಡಾ ಸವಾಲುಗಳು ಸೇರಿದಂತೆ ಕಠಿಣ ಸ್ಪರ್ಧೆಗಳ ಸರಣಿಯನ್ನು ಒಳಗೊಂಡಿರುತ್ತದೆ ಎಂದು ಅವರು ಹೇಳಿದ್ದಾರೆ.

ನಾಳೆಯಿಂದ ಎರಡು ದಿನ 'ಮೈ ಗ್ರೀನ್' ವಸ್ತು ಪ್ರದರ್ಶನ

● ಪರಿಸರ ಸ್ನೇಹಿ ಕಟ್ಟಡ ಸಾಮಗ್ರಿಗಳ ಪ್ರದರ್ಶನದೊಂದಿಗೆ ವಹಿವಾಟಿಗೂ ಅವಕಾಶ ● ನಿಸರ್ಗ ಸ್ನೇಹಿ ಜೀವನಶೈಲಿ ವಸ್ತುಗಳೂ ಲಭ್ಯ



ಮೈಸೂರು,ಜೂ.8(ಪಿಎಂ)– ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ) ಮೈಸೂರು ಕೇಂದ್ರ ಹಾಗೂ ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ (ಎಂಬಿಸಿಟಿ) ಜಂಟಿ ಆಶ್ರಯದಲ್ಲಿ ಜೂ.10 ಮತ್ತು 11ರಂದು ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ 'ಮೈ ಗ್ರೀನ್ 2023' ಶೀರ್ಷಿಕೆಯಡಿ ಪರಿಸರ ಸ್ನೇಹಿ ಕಟ್ಟಡ ಸಾಮಗ್ರಿಗಳ ವಸ್ತು ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಬಿಎಐ ಮೈಸೂರು ಕೇಂದ್ರ ಹಾಗೂ ಎಂಬಿಸಿಟಿ ಜಂಟಿ ಆಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ (ಪ್ರತಿ ವರ್ಷ ಜೂ.5) ಪ್ರಯುಕ್ತ ಪ್ರತಿ ವರ್ಷದಂತೆ ಈ ಬಾರಿಯೂ ಜೂನ್ ತಿಂಗಳಿಡೀ ಪರಿಸರ ಮಾಸಾಚರಣೆ ಆರಂಭಗೊಂಡಿದ್ದು, ಅದರ ಮುಂದುವರೆದ ಭಾಗವಾಗಿ ಮೈ ಗ್ರೀನ್ ವಸ್ತು ಪ್ರದರ್ಶನ ಎರಡು ದಿನಗಳ ಕಾಲ ನಡೆಯಲಿದ್ದು, ಕಟ್ಟಡ ನಿರ್ಮಾಣದಲ್ಲಿ ಪರಿಸರ ಸ್ನೇಹಿ ಸಾಮಗ್ರಿಗಳ ಬಳಕೆ ಹಾಗೂ ಜೀವನಶೈಲಿಯ ಪ್ರತಿನಿತ್ಯ ಬಳಕೆಗೆ ಬರುವ ಪರಿಸರ ಸ್ನೇಹಿ ವಸ್ತುಗಳ ಪ್ರದರ್ಶನವೂ ಇರಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಈ ವಿಷಯ ತಿಳಿಸಿದ ಪರಿಸರ ಮಾಸಾಚರಣೆ ಸಂಘಟನಾ ಸಮಿತಿ ಅಧ್ಯಕ್ಷ ಎ.ಎಸ್.ಯೋಗಾನರಸಿಂಹ, 'ಮೈ ಗ್ರೀನ್ 2023' ವಸ್ತು ಪ್ರದರ್ಶನದಲ್ಲಿ ವಹಿವಾಟಿಗೂ ಅವಕಾಶವಿದೆ. ಪರಿಸರ ಸ್ನೇಹಿ ಕಟ್ಟಡ ನಿರ್ಮಾಣ ಸಾಮಗ್ರಿಗಳು, ನವೀಕರಿಸಿದ ಉತ್ಪನ್ನಗಳು, ತಂತ್ರಜ್ಞಾನ, ಸಾವಯವ ಆಹಾರ ಪದಾರ್ಥಗಳು ಸೇರಿದಂತೆ ಜೀವನಶೈಲಿಯ ಉತ್ಪನ್ನಗಳು ಇಲ್ಲಿ ಲಭ್ಯವಿರಲಿವೆ ಎಂದು ತಿಳಿಸಿದರು.

ಸಾವಯವ ಗೊಬ್ಬರ ತಯಾರಿಕೆ ಪ್ರದರ್ಶನ ನಡೆಯಲಿದ್ದು, ರಾಸಾಯನಿಕ ರಹಿತ ಶೌಚಾಲಯ ಶುದ್ಧೀಕರಣ ಪದಾರ್ಥಗಳು ಇರಲಿವೆ. ಪರಿಸರ ಸ್ನೇಹಿ ತಂತ್ರಜ್ಞಾನ ಆವಿಷ್ಕಾರಗಳೂ ಪ್ರದರ್ಶನದ ಆಕರ್ಷಣೆಯಾಗಲಿವೆ. ಜೂ.10ರಂದು ಬೆಳಗ್ಗೆ 10ಕ್ಕೆ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿರುವ ಬಿಎಐ ಕರ್ನಾಟಕದ ರಾಜ್ಯಾಧ್ಯಕ್ಷ ಶ್ರೀನಿವಾಸರೆಡ್ಡಿ ವಸ್ತು ಪ್ರದರ್ಶನ ಉದ್ಘಾಟಿಸಲಿದ್ದಾರೆ. ಬೆಳಗ್ಗೆ 10ರಿಂದ ರಾತ್ರಿ 8.30ರವರೆಗೆ ಪ್ರದರ್ಶನ ತೆರೆದಿರಲಿದ್ದು, ಸಾರ್ವನಿಕರಿಗೆ ಪ್ರವೇಶ ಉಚಿತವಿದೆ ಎಂದು ಹೇಳಿದರು.

ಆರ್‌ಕೆಬಿ ಬಿಲ್ಡ್ ಪ್ರೋನ ಮುಖ್ಯ ಪ್ರಾಯೋಜಕತ್ವ ಹಾಗೂ ಶೆವರನ್ ಲ್ಯಾಬೋರೆಟರೀಸ್‌ನ ಸಹ ಪ್ರಾಯೋಜಕತ್ವದಲ್ಲಿ ವಸ್ತು ಪ್ರದರ್ಶನ ನಡೆಯಲಿದೆ. ಪ್ರದರ್ಶನದಲ್ಲಿ ನವೀಕರಿಸಿದ ಮರದ ಉತ್ಪನ್ನಗಳು, ಪರಿಸರ ಸ್ನೇಹಿ ಕಟ್ಟಡ ತಂತ್ರಜ್ಞಾನ ಮತ್ತು ಉತ್ಪನ್ನಗಳು, ಸೋಲಾರ್ ವಾಟರ್ ಹೀಟರ್ಸ್, ಸೋಲಾರ್ ಲೈಟ್‌ಗಳು, ಮೈಕ್ರೋಗ್ರಿಡ್ ಕುಡಿಯುವ ನೀರಿನ ಸಂಸ್ಕರಣೆಯ ವಿಧಾನಗಳು ಹಾಗೂ ಉತ್ಪನ್ನಗಳು, ಕೊಳಚೆ ನೀರು ಸಂಸ್ಕರಣೆ ಮತ್ತು ಮರುಬಳಕೆ, ಇಂಧನ ಮೂಲಗಳ ಮಾಹಿತಿ, ಕರಕುಶಲ ವಸ್ತುಗಳು, ವಿದ್ಯುತ್‌ಚಾಲಿತ ವಾಹನಗಳು, ಮರದ ಪರ್ಯಾಯ ಉತ್ಪನ್ನಗಳು, ಹಣ್ಣು ಮತ್ತು ತರಕಾರಿಗಳು ಪ್ರದರ್ಶನದಲ್ಲಿ ಇರಲಿವೆ ಎಂದು ತಿಳಿಸಿದರು.

ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 98453 17373, 98803 93343 ಸಂಪರ್ಕಿಸಬಹುದು ಎಂದರು. ಬಿಎಐ ಮೈಸೂರು ಕೇಂದ್ರದ ಅಧ್ಯಕ್ಷ ನಾಗರಾಜ್ ವಿ.ಬೈರಿ, ಕಾರ್ಯದರ್ಶಿ ಕೆ.ಎಸ್.ಬಾಲಾಜಿ, ಉಪಾಧ್ಯಕ್ಷ ವಿ.ಶ್ರೀನಾಥ್, ಪರಿಸರ ಮಾಸಾಚರಣೆ ಸಂಘಟನಾ ಸಮಿತಿ ಕಾರ್ಯದರ್ಶಿ ವಿಗುರುದತ್ ಗೋಷ್ಠಿಯಲ್ಲಿದ್ದರು.

ಮೈಸೂರು ಮಿತ್ರ

ಸರಗೂರಲ್ಲಿ ಬೇಕರಿಗೆ ಬೆಂಕಿ ಬಿದ್ದು, ಸಿಸಿ ಕ್ಯಾಮರಾ, ಫ್ರಿಡ್ಜ್ ತಿಂಡಿ-ತಿನಿಸುಗಳು ನಾಶ

ಸರಗೂರು, ಜೂ.8- ಬೇಕರಿಗೆ ಬೆಂಕಿ ಬಿದ್ದು, ಬೆಲೆಬಾಳುವ ಸಿಸಿ ಕ್ಯಾಮರಾ, ಫ್ರಿಡ್ಜ್ ಸೇರಿದಂತೆ ತಿಂಡಿ-ತಿನಿಸುಗಳು ಬೆಂಕಿಗೆ ಆಹುತಿಯಾಗಿರುವ ಘಟನೆ ಪಟ್ಟಣದಲ್ಲಿ ಸಂಭವಿಸಿದೆ.



ಪಟ್ಟಣದಲ್ಲಿ ನಟರಾಜ್ ಅವರು 13 ವರ್ಷಗಳಿಂದ ನ್ಯೂ ಹಾಸನ್ ಅಯ್ಯಂಗಾರ್ ಬೇಕರಿ ನಡೆಸಿಕೊಂಡು ಬರುತ್ತಿದ್ದು, ಎಂದಿನಂತೆ ಬುಧವಾರ ರಾತ್ರಿ ತಮ್ಮ ಕೆಲಸ ಮುಗಿಸಿ ಬೇಕರಿ ಮುಚ್ಚಿ ಮನೆಗೆ ತೆರಳಿದ್ದಾರೆ. ಸುಮಾರು ರಾತ್ರಿ 11 ಗಂಟೆ ಹೊತ್ತಿಗೆ ಬೇಕರಿಯಲ್ಲಿ ಹೊಗೆ ಕಾಣಿಸಿಕೊಂಡಿದ್ದು, ಪಕ್ಕದ ಮನೆಯವರು ನೋಡಿ ನಟರಾಜ್ ಅವರಿಗೆ ಕರೆ ಮಾಡಿ ತಿಳಿಸಿದ್ದಾರೆ.

ತಕ್ಷಣ ಬಂದು ಬಾಗಿಲು ತೆಗೆದು ನೋಡಿದಾಗ ಬೆಂಕಿಯ ಜ್ವಾಲೆಯಿಂದ ಒಳಗಿದ್ದ ಪದಾರ್ಥಗಳು ಉರಿಯುತ್ತಿದ್ದುದನ್ನು ಕಂಡ ಮಾಲೀಕ ನಟರಾಜ್ ಹಾಗೂ ಸ್ನೇಹಿತರು ಸೇರಿ ನೀರನ್ನು ಎರಚಿ ಬೆಂಕಿ ನಂದಿಸುವ ಪ್ರಯತ್ನ ಮಾಡಿದರಾದರೂ ಯಾವುದೇ ಪ್ರಯೋಜನವಾಗಲಿಲ್ಲ, ನೋಡು ನೋಡುತ್ತಿದಂತೆ ಬೆಂಕಿಯ ಜ್ವಾಲೆಗೆ ಅಂಗಡಿಯಲಿದ್ದ ಎಲ್ಲಾ ಪದಾರ್ಥವು ಸುಟ್ಟು ಕರಕಲಾಗಿದೆ.

ಎರಡು ವರ್ಷಗಳಲ್ಲಿ ಲಕ್ಷ್ಮಣತೀರ್ಥ ನದಿಗೆ ಕಾಯಕಲ್ಪ: ಶಾಸಕ ಹರೀಶ್‌ಗೌಡ



ಹುಣಸೂರು, ಜೂ.8- ಮಲಿನಗೊಂಡಿರುವ ಲಕ್ಷ್ಮಣತೀರ್ಥ ನದಿ ಶುದ್ಧೀಕರಣಕ್ಕೆ ನಿರ್ಧರಿಸಲಾಗಿದ್ದು, ಮುಂದಿನ 2 ವರ್ಷಗಳಲ್ಲಿ ಕಾಯಕಲ್ಪ ನೀಡಲಾಗುವುದು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರಸಭೆ ಅಧಿಕಾರಿಗಳು, ಜಲಮಂಡಳಿ ಅಧಿಕಾರಿಗಳೊಂದಿಗೆ ಪಂಪ್‌ಹೌಸ್ ಮತ್ತು ನದಿಗೆ ಒಳಚರಂಡಿ ನೀರು ಸೇರುತ್ತಿರುವ 14 ಸ್ಥಳಗಳಿಗೆ ಭೇಟಿ ನೀಡಿ ಮಾತನಾಡಿದ ಅವರು, ಲಕ್ಷ್ಮಣತೀರ್ಥ ನದಿ ಮಲಿನಗೊಳ್ಳಲು ಒಳಚರಂಡಿ ನೀರು, ತೆರೆದ ಚರಂಡಿಗಳ ಮಲಿನ ನೀರು ನದಿ ಸೇರುತ್ತಿರುವುದೇ ಮುಖ್ಯ ಕಾರಣ. ಇದನ್ನು ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳಬೇಕಿದೆ. ಹುಣಸೂರು ನಗರಕ್ಕೆ 20 ವರ್ಷಗಳ ಹಿಂದೆ ನನ್ನ ತಂದೆ ಜಿ.ಟಿ. ದೇವೇಗೌಡರು 38 ಕೋಟಿ ರೂ. ವೆಚ್ಚದಲ್ಲಿ ಒಳಚರಂಡಿ ಯೋಜನೆ ಜಾರಿಗೊಳಿಸಿದರು. ನಂತರದ 15 ವರ್ಷಗಳಲ್ಲಿ ಏನಾಯಿತು ಎನ್ನುವುದು ಅಪ್ರಸ್ತುತ. ಇದೀಗ ನಗರ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಹೇಗಿದೆ? ಒಳಚರಂಡಿ ವ್ಯವಸ್ಥೆ ಇಲ್ಲದ ಮನೆಗಳೆಷ್ಟಿವೆ ಇತ್ಯಾದಿ ವಿವರಗಳನ್ನು ವಾರದಲ್ಲಿ ತಮಗೆ ಸಲ್ಲಿಸಲು ನಗರಸಭೆ ಪೌರಾಯುಕ್ತರಿಗೆ ಸೂಚಿಸಿದ್ದೇನೆ. ನದಿ ಶುದ್ಧೀಕರಣ ಕುರಿತು ತಜ್ಞರ ತಂಡವೊಂದನ್ನು ರಚಿಸಿ ಅವರೊಂದಿಗೆ ಚರ್ಚಿಸಲಿದ್ದೇನೆ. ತದ ನಂತರ ಎಲ್ಲರ ಸಹಕಾರದೊಂದಿಗೆ ಸರ್ವಾನುಮತದ ನಿರ್ಧಾರಕ್ಕೆ ಬರಲಾಗುವುದು. ನಗರೋತ್ಥಾನ ಯೋಜನೆಯಡಿ 20 ಕೋಟಿ ರೂ. ನದಿ ಶುದ್ಧೀಕರಣಕ್ಕಾಗಿ ಅನುದಾನ ಬಂದಿದೆ ತಜ್ಞರೊಂದಿಗೆ ಚರ್ಚಿಸಿ ನಿರ್ಧರಿಸಿ ಸರ್ಕಾರದ ಅನುದಾನ ತರಲಿದ್ದೇನೆ. ಇದಕ್ಕಾಗಿ ಕನಿಷ್ಠ 2 ವರ್ಷಗಳ ಕಾಲಾವಕಾಶ ಅಗತ್ಯವಿದ್ದು, ಈ ಅವಧಿಯೊಳಗೆ ನದಿಗೆ ಕಾಯಕಲ್ಪ ನೀಡಲಿದ್ದೇನೆ ಎಂದರು.

ನಗರಸಭೆ ಸದಸ್ಯ ಶ್ರೀನಾಥ್, ಮುಖಂಡ ಲಿಂಗರಾಜು, ಜಲಮಂಡಳಿ ಎಇಇ ಸುಹೈಲ್, ಪೌರಾಯುಕ್ತ ಸುಜಯ್ ಕುಮಾರ್, ಪರಿಸರ ಇಂಜಿನಿಯರ್ ಎಲ್. ರೂಪಾ, ಎಇಇ ಶರ್ಮಿಳಾ ಇನ್ನಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

- ಸ್ಕ್ರೀನ್ 1 ದಿ ಕೇರಳ ಸ್ಟೋರಿ (ಹಿಂ): ಬೆ.10.25ಕ್ಕೆ, ಮ.1.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.50ಕ್ಕೆ.
- ಸ್ಕ್ರೀನ್ 2 ಡೇರ್‌ಡೆವಿಲ್ ಮುಸ್ತಫಾ (ಕ): ಬೆ10.05ಕ್ಕೆ, ಸಂ.6.50ಕ್ಕೆ, ಗಾರ್ಡಿಯನ್ಸ್ ಆಫ್ ಗ್ಯಾಲಕ್ಸಿ ವಾಲ್ಯೂಂ 3 (3ಡಿ)(ಇಂ): ಮ1.10ಕ್ಕೆ, ಜೆರ್ಸಿ ನಂಬರ್ 10 (ಕ): ಸಂ.4.05ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.10ಕ್ಕೆ.
- ಸ್ಕ್ರೀನ್ 3 ಇವಿಲ್ ಡೆಡ್ ರೈಸ್ (ಇಂ): ಬೆ.11ಕ್ಕೆ, ಪಿಚ್ಚೈಕಾರನ್2 (ತ): ಮ.1.20ಕ್ಕೆ, ಸಂ.4.25ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.7.30ಕ್ಕೆ, ಚಾರ್ಲ್ಸ್ ಎಂಟರ್‌ಪ್ರೈಸಸ್ (ಮ): ಸಂ.9.55ಕ್ಕೆ.
- ಸ್ಕ್ರೀನ್ 4 ಫಾಸ್ಟ್ X (3ಡಿ)(ಇಂ): ಬೆ10.45ಕ್ಕೆ, ಮ1.35ಕ್ಕೆ, ಸಂ.4.25ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

- ಸ್ಕ್ರೀನ್ 1 ಫಾಸ್ಟ್ X (3ಡಿ)(ಇಂ): ಬೆ.10.30, ಮ.1.30ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ, ರಾ.10.30ಕ್ಕೆ.
- ಸ್ಕ್ರೀನ್ 2 ದಿ ಕೇರಳ ಸ್ಟೋರಿ (ಹಿಂ): ಬೆ.10ಕ್ಕೆ, ಮ.12.55ಕ್ಕೆ, ಮ.3.50ಕ್ಕೆ, ಸಂ.6.45ಕ್ಕೆ, ರಾ.9.40ಕ್ಕೆ.
- ಸ್ಕ್ರೀನ್ 3 ದಿ ಕೇರಳ ಸ್ಟೋರಿ (ಹಿಂ): ಬೆ.11ಕ್ಕೆ, ಮ.1.55ಕ್ಕೆ, ಸಂ.4.50ಕ್ಕೆ, ರಾ.10.30ಕ್ಕೆ, ಅನುರಾಗಂ (ಮ): ರಾ.7.45ಕ್ಕೆ.
- ಸ್ಕ್ರೀನ್ 4 ಫಾಸ್ಟ್ X (3ಡಿ)(ಇಂ): ಬೆ.9.30ಕ್ಕೆ, ಪಿಚ್ಚೈಕಾರನ್ 2(ತ): ಮ.12.20ಕ್ಕೆ, ರಾ.10.05ಕ್ಕೆ, ಡೇರ್‌ಡೆವಿಲ್ ಮುಸ್ತಫಾ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಟಕ್ಕರ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಟ್ರಾನ್ಸ್‌ಫಾರ್ಮರ್(ಇ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಟೈನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಗಾಡ್‌ಫಾದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ದರ್ಬಾರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೇರ್ ಡೆವಿಲ್ ಮುಸ್ತಾಫಾ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಟ್ರಾನ್ಸ್‌ಫಾರ್ಮರ್(ಇ) 3 ಪ್ರದರ್ಶನಗಳು, ಕೇರಳ ಸ್ಟೋರಿ(ಹಿಂ) 1 ಪ್ರದರ್ಶನಗಳು	
ಸಂಗಂ	
ಗದಾಯುದ್ಧ (ಕ)	4 ಪ್ರದರ್ಶನಗಳು
ಲಿಡೋ	
ಪಿಎಸ್-2 (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ಪಿಚೈಕ್ಕಾರನ್-2 (ತ)	4 ಪ್ರದರ್ಶನಗಳು
ಪ್ರಭಾ	
ವೀರಂ (ಕ)	4 ಪ್ರದರ್ಶನಗಳು

ಟ್ರಾನ್ಸ್‌ಫಾರ್ಮರ್ ಮುಂದೆ ರೈತರ ಪ್ರತಿಭಟನೆ

ಬೆಟ್ಟದಪುರ, ಜೂ.8- ವಿದ್ಯುತ್ ಸಮಸ್ಯೆಯನ್ನು ನಿವಾರಿಸುವಂತೆ ಆಗ್ರಹಿಸಿ ಸಮೀಪದ ಈಚೂರು ಗ್ರಾಮದಲ್ಲಿ ಬುಧವಾರ ರೈತರು ಟ್ರಾನ್ಸ್‌ಫಾರ್ಮರ್ ಮುಂದೆ ಪ್ರತಿಭಟನೆ ನಡೆಸಿದರು.

ಈ ವೇಳೆ ಗ್ರಾಮದ ಮುಖಂಡ ಮಹದೇವ್ ಮಾತನಾಡಿ, ನಾವು ತಂಬಾಕು ಬೆಳೆಯನ್ನು ಬೆಳೆಯುತ್ತಿದ್ದು, ಕಳೆದ ಒಂದು ತಿಂಗಳಿನಿಂದ ಟ್ರಾನ್ಸ್‌ಫಾರ್ಮರ್ ಸಮಸ್ಯೆ ಉಂಟಾಗಿ ಸಾಕಷ್ಟು ತೊಂದರೆ ಅನುಭವಿಸಿದ್ದೇವೆ. ಕಳೆದ ಮೂರು ದಿನದ ಹಿಂದೆ ಅದನ್ನು ಸರಿಪಡಿಸಿ ನೂತನ ಟ್ರಾನ್ಸ್‌ಫಾರ್ಮರ್ ಅನ್ನು ಅಳವಡಿಸಲಾಗಿತ್ತು. ಆದರೆ, ಏಕಾಏಕಿ ರಾತ್ರಿ ಸಮಯದಲ್ಲಿ ವಿದ್ಯುತ್ ಇಲಾಖೆಯ ಸಿಬ್ಬಂದಿ ಬಂದು ಅದನ್ನು ಸ್ಥಗಿತಗೊಳಿಸಿದ್ದಾರೆ. ಇದರಿಂದ ಕುಡಿಯುವ ನೀರಿಗೂ ಸಮಸ್ಯೆ ಉಂಟಾಗಿದೆ. ಸರಿಯಾದ ಸಮಯದಲ್ಲಿ ಮಳೆಯಾಗದೆ ಕೊಳವೆ ಬಾವಿಯಿಂದ ಬೆಳೆಗಳಿಗೆ ನೀರು ಹಾಯಿಸಲು ಕಷ್ಟವಾಗಿದೆ ಎಂದರು. ಪ್ರತಿಭಟನೆಯಲ್ಲಿ ನಿಂಗೇಗೌಡ, ರಾಮೇಗೌಡ,ಹರೀಶ್, ರಾಜೇಗೌಡ, ನಿಂಗೇಗೌಡ, ಮಂಜು, ಸೈಯದ್ ಇಮ್ರಾನ್, ಸ್ವಾಮಿ, ಮಧು, ಕಾಂತರಾಜು, ವೆಂಕಟರಾಮು, ನಾಗೇಗೌಡ ಇದ್ದರು.

ಸಫಾರಿ ವೇಳೆ ಅಪರೂಪದ ಬಿಳಿ ಜಿಂಕೆ ಪ್ರತ್ಯಕ್ಷ

ನಾಗರಹೊಳೆ ಅರಣ್ಯದ ತಾರಕ ಜಲಾಶಯದ ಹಿನ್ನೀರು ಪ್ರದೇಶದಲ್ಲಿ ಪ್ರವಾಸಿಗರ ಆಕರ್ಷಣೆ



ಹೀಗೆ ಬಣ್ಣ ಬದಲಾಗಿ ಹುಟ್ಟುವುದು ಕೆಲವು ಪ್ರಾಣಿಗಳಿಗೆ ಅನುಕೂಲವಾದರೆ ಮತ್ತೆ ಕೆಲವು ಪ್ರಾಣಿಗಳಿಗೆ ಕಂಟಕವಾಗಬಹುದು. ಸಾಮಾನ್ಯವಾಗಿ ವನ್ಯ ಮೃಗಗಳು ಕಪ್ಪು ಇಲ್ಲವೇ ಕಡು ಕಂದು ಬಣ್ಣದಲ್ಲಿದ್ದರೆ ಒಳಿತು. ಬಿಳಿ ಬಣ್ಣವಿದ್ದರೆ ಬಲಾಢ್ಯ ಪ್ರಾಣಿಗಳಿಗೆ ಆಹಾರವಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ.
-ಉಲ್ಲಾಸ್ ಶ್ಯಾನಬೋಗ್, ವನ್ಯಜೀವಿ ಛಾಯಾಗ್ರಾಹಕ.

ಈ ಜಿಂಕೆ ಮೆಲನಿನ್ (ವರ್ಣ ದ್ರವ್ಯ) ಹೆಚ್ಚಾಗಿ ಬಿಳಿ ಬಣ್ಣ ಪಡೆದುಕೊಂಡು ಹುಟ್ಟಿದೆ. ಈ ಬಣ್ಣ ಹೊಂದಿ ಕಾಡಿನಲ್ಲಿ ಬದುಕುವುದು ಕಷ್ಟ, ಮಾಂಸಾಹಾರಿ ಪ್ರಾಣಿಗಳಿಗೆ ಇದು ದೂರದಿಂದಲೇ ಅಕರ್ಷಣೆಯಾಗಿ ಬೇಟೆಗೆ ತುತ್ತಾಗಬಹುದು.
-ವಿನಯ್, ವನ್ಯಜೀವಿ ಛಾಯಾಗ್ರಾಹಕ.

ಹೆಚ್.ಡಿ.ಕೋಟೆ, ಜೂ.8- ತಾಲೂಕಿನ ಅಂತರಸಂತೆ ವಲಯದ ತಾರಕ ಜಲಾಶಯದ ಹಿನ್ನೀರು ಪ್ರದೇಶದಲ್ಲಿ ಸಫಾರಿ ವೇಳೆ ಬಿಳಿ ಬಣ್ಣದ ಜಿಂಕೆಯೊಂದು ಕಾಣಿಸಿಕೊಂಡಿದ್ದು, ಸಫಾರಿಗೆ ಬರುವ ಪ್ರವಾಸಿಗರ ಗಮನ ಸೆಳೆದಿದೆ.

ಜೀವ ವೈವಿಧ್ಯತೆಯ ಬಹುದೊಡ್ಡ ತಾಣವೇ ಆಗಿರುವ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಲ್ಲಿ ಕಾಣಿಸಿಕೊಂಡಿರುವ ಬಿಳಿ ಬಣ್ಣದ ಜಿಂಕೆ ವನ್ಯಜೀವಿ ಆಸಕ್ತರ ಕುತೂಹಲಕ್ಕೆ ಕಾರಣವಾಗಿದೆ.

ಸುಮಾರು 642 ಚದರ ಕಿ.ಮೀ.ನಷ್ಟು ವ್ಯಾಪ್ತಿ ಹೊಂದಿರುವ ನಾಗರಹೊಳೆಯಲ್ಲಿ ಜಿಂಕೆ, ಕಡವೆಗಳು ಸರ್ವೇ ಸಾಮಾನ್ಯ. ಅರಣ್ಯದ ಹಾದಿಯಲ್ಲಿ ಹಿಂಡು ಹಿಂಡಾದ ಈ ವನ್ಯಜೀವಿಗಳನ್ನು ಹೆಜ್ಜೆ ಹೆಜ್ಜೆಗೂ ನೋಡಬಹುದು. ಜಿಂಕೆಗಳ ಹಿಂಡಿನ ನಡುವೆ ಬಿಳಿ ಜಿಂಕೆ ಪ್ರತ್ಯಕ್ಷವಾಗಿದೆ.

ನಾಗರಹೊಳೆ ಅಭಯಾರಣ್ಯ ವ್ಯಾಪ್ತಿಯ ತಾರಕ ಜಲಾಶಯದ ಹಿನ್ನೀರಿನಲ್ಲಿ ಸಫಾರಿ ನಡೆಯುತ್ತದೆ. ಇಲ್ಲಿ ಜಿಂಕೆ, ಕಡವೆ ಸೇರಿದಂತೆ ಹಲವಾರು ಪ್ರಾಣಿಗಳು ಕಾಣಿಸಿಕೊಳ್ಳುತ್ತದೆ. ಇತ್ತೀಚೆಗೆ ಸಫಾರಿ ವೇಳೆ ಜಿಂಕೆಗಳ ಗುಂಪಿನಲ್ಲಿ ಬಿಳಿ ಜಿಂಕೆ ಕಾಣಿಸಿಕೊಂಡಿದ್ದು, ಪ್ರವಾಸಿಗರು ತಮ್ಮ ಮೊಬೈಲ್ ಮತ್ತು ಕ್ಯಾಮರಾಗಳಲ್ಲಿ ಸೆರೆ ಹಿಡಿದಿದ್ದಾರೆ.

ವನ್ಯಪ್ರಾಣಿಗಳ ವರ್ಣ ದ್ರವ್ಯದಲ್ಲಿನ ವ್ಯತ್ಯಾಸದಿಂದ ಪ್ರಾಣಿಗಳ ಬಣ್ಣದಲ್ಲಿ ಬದಲಾವಣೆಯಾಗುತ್ತದೆ ಅಪರೂಪಕ್ಕೆ ಒಮ್ಮೆ ಕೆಲವು ಪ್ರಾಣಿಗಳು ಈ ರೀತಿ ಬಿಳಿ ಹಾಗೂ ಕಪ್ಪು ಬಣ್ಣದಲ್ಲಿ ಹುಟ್ಟುತ್ತವೆ. ನಮ್ಮ ವಲಯ ವ್ಯಾಪ್ತಿಯಲ್ಲಿರುವ ಕಪ್ಪು ಚಿರತೆ ಇದಕ್ಕೆ ಉದಾಹರಿಸಬಹುದು. ಮೆಲನಿನ್ (ವರ್ಣ ದ್ರವ್ಯ) ದೇಹದಲ್ಲಿ ಹೆಚ್ಚಾದರೆ ಪ್ರಾಣಿಗಳು ಬಿಳಿ ಬಣ್ಣದಲ್ಲಿ ಹುಟ್ಟಿದ್ದರೆ, ಮೆಲನಿನ್ ಕಡಿಮೆಯಾದರೆ ಕಪ್ಪು ಬಣ್ಣದಲ್ಲಿ ಪ್ರಾಣಿಗಳು ಜನಿಸುತ್ತವೆ ಎಂದಿದ್ದಾರೆ ವಲಯ ಅರಣ್ಯಾಧಿಕಾರಿ ಸಿದ್ದರಾಜು.

ನಂದಿನಿ ಮಿಲ್ಕ್ ಪಾರ್ಲರ್ ಉದ್ಘಾಟನೆ



ತಿ.ನರಸೀಪುರ, ಜೂ.8- ಮೈಮುಲ್‌ನಿಂದ ತಯಾರಾಗುವ ನಂದಿನಿ ಉತ್ಪನ್ನಗಳು ಉತ್ತಮ ಗುಣಮಟ್ಟದಿಂದ ಕೂಡಿದ್ದು, ಹಸುವಿನ ಬೆಣ್ಣೆಯಿಂದ ಮಾಡಲಾದ ತುಪ್ಪದಿಂದಲೇ ತಯಾರಿಸಲಾಗುತ್ತದೆ ಎಂದು ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ತಿಳಿಸಿದ್ದಾರೆ.

ಬನ್ನೂರು ಪಟ್ಟಣದ ಸಂತೇಮಾಳ ಬಳಿಯ ಕಾಲೇಜು ಸಮೀಪ ನೂತನವಾಗಿ ಆರಂಭಿಸಲಾಗಿರುವ ನಂದಿನಿ ಮಿಲ್ಕ್ ಪಾರ್ಲರ್ ಉದ್ಘಾಟಿಸಿ ಅವರು ಮಾತನಾಡಿದರು.

ನಂದಿನಿ ಉತ್ಪನ್ನಗಳು ರಾಜ್ಯದ ಸಾವಿರಾರು ರೈತರ ಹಾಗೂ ಬಡ ಕುಟುಂಬಗಳ ಆರ್ಥಿಕ ಪರಿಸ್ಥಿತಿ ಉತ್ತಮಗೊಳಿಸುವ ಆಸ್ತಿಯಾಗಿದ್ದು, ಉತ್ತಮ ಗುಣಮಟ್ಟದಿಂದ ತಯಾರಾಗುವ ನಂದಿನಿ ಉತ್ಪನ್ನಗಳನ್ನು ಎಲ್ಲರೂ ಖರೀದಿಸುವ ಮೂಲಕ ಮೈಮುಲ್ ಅನ್ನು ಮತ್ತಷ್ಟು ಬೆಳೆಸಲು ಸಹಕರಿಸಬೇಕು ಎಂದರು.

ಒಕ್ಕೂಟದ ವತಿಯಿಂದ ಬನ್ನೂರು ಭಾಗದಲ್ಲಿ ಹಾಲಿನ ಏಜೆನ್ಸಿ ಸೇರಿದಂತೆ 14 ಕಡೆಗಳಲ್ಲಿ ಮಿಲ್ಕ್ ಪಾರ್ಲರ್ ಆರಂಭಿಸಲಾಗಿದೆ. ಎಲ್ಲೆಡೆ ನಂದಿನಿ ಉತ್ಪನ್ನಗಳಿಗೆ ಬಹು ಬೇಡಿಕೆ ಇದೆ. ಶಾಲಾ ಮಕ್ಕಳು ಸೇರಿದಂತೆ ಎಲ್ಲರೂ ನಂದಿನಿ ಉತ್ಪನ್ನಗಳು ಖರೀದಿಸುವ ಮೂಲಕ ದೇಸಿ ಉತ್ಪನ್ನಗಳನ್ನು ಬೆಂಬಲಿಸುವಂತೆ ಕೋರಿದರು. ಮಿಲ್ಕ್ ಪಾರ್ಲರ್ ತೆರೆಯಲು 12 ರಿಂದ 13 ಲಕ್ಷ ರೂ.ಗಳನ್ನು ಒಕ್ಕೂಟದ ವತಿಯಿಂದ ಸಹಾಯಧನ ಒದಗಿಸಿಕೊಡಲಾಗುತ್ತದೆ. ಪಾರ್ಲರ್ ನಡೆಸುವವರು 1 ಲಕ್ಷ ರೂ.ಗಳ ಠೇವಣಿ ಮಾಡಿದರೆ ಉತ್ಪನ್ನಗಳನ್ನು ಸರಬರಾಜು ಮಾಡಲಾಗುತ್ತದೆ ಎಂದರು.

ಮೈಮುಲ್ ಮಾಜಿ ಅಧ್ಯಕ್ಷ ಓಂ ಪ್ರಕಾಶ್ ಮಾತನಾಡಿ, ನಂದಿನಿ ಉತ್ಪನ್ನಗಳು ನಂಬಿಕೆಗೆ ಅರ್ಹವಾಗಿದ್ದು ಬೇಕರಿಗಳಲ್ಲಿ ಬಳಸುವಂತೆ ಡಾಲ್ಡ ತುಪ್ಪ ಬಳಸುವುದಿಲ್ಲ. ಬದಲಿಗೆ ಹಸುವಿನ ಬೆಣ್ಣೆಯಿಂದ ಮಾಡಲಾದ ತುಪ್ಪದಿಂದಲೇ ಉತ್ಪನ್ನಗಳ ತಯಾರಿಕೆ ನಡೆಯುತ್ತದೆ. ಮಜ್ಜಿಗೆ, ಲಸ್ಸಿ ವಾಟರ್ ಬಾಟಲ್‌ಗಳು ಉತ್ತಮವಾಗಿದ್ದು, ಬೆಲೆ ಮಾತ್ರ ಲೋಕಲ್ ಉತ್ಪನ್ನಗಳಿಗಿಂತ ಸ್ವಲ್ಪ ಹೆಚ್ಚಿರುತ್ತದೆ ಗ್ರಾಹಕರು ಬೆಲೆಯ ಬಗ್ಗೆ ತಲೆ ಕೆಡಿಸಿಕೊಳ್ಳದೇ ಪರಿಶುದ್ಧವಾದ ಉತ್ಪನ್ನಗಳಿಗೆ ಪ್ರಾಮುಖ್ಯತೆ ನೀಡಿ ನಂದಿನಿ ಬೂತ್‌ಗಳಲ್ಲಿ ದೊರಕುವ ಉತ್ಪನ್ನಗಳನ್ನು ಖರೀದಿಸುವಂತೆ ಮನವಿ ಮಾಡಿದರು.

ಬೀಡನಹಳ್ಳಿ ಗ್ರಾಪಂ. ಮಾಜಿ ಅಧ್ಯಕ್ಷ ಕೃಷ್ಣೇಗೌಡ, ಮಾರುಕಟ್ಟೆ ವ್ಯವಸ್ಥಾಪಕ ಜಯಶಂಕರ್, ವಿಸ್ತರಣಾ ಅಧಿಕಾರಿ ಆರ್. ಪ್ರಮೋದ್, ಕ್ಷೇತ್ರ ಅಧಿಕಾರಿ ಮನೋಜ್, ಪಾರ್ಲರ್ ಮಾಲೀಕ ಅಭಿಷೇಕ್, ಸ್ವಾಮಿ, ರಾಮಣ್ಣ ಮತ್ತಿತರರಿದ್ದರು.

ಸಿಎಂ ತವರು ಕ್ಷೇತ್ರದ ವರುಣ ವ್ಯಾಪ್ತಿಯಲ್ಲಿ ನಿಗದಿತ ಸಮಯದಲ್ಲಿ ಕಾಮಗಾರಿ ಪೂರ್ಣಗೊಳಿಸದಿದ್ದರೆ ಕಠಿಣ ಕ್ರಮ

ತಾಪಂ ಆಡಳಿತಾಧಿಕಾರಿ ಕೃಷ್ಣಂರಾಜು ಅಧಿಕಾರಿಗಳಿಗೆ ಎಚ್ಚರಿಕೆ



ನಂಜನಗೂಡು, ಜೂ.8- ಮೈಸೂರು ಜಿಲ್ಲೆ ಮುಖ್ಯಮಂತ್ರಿಗಳ ತವರು ಜಿಲ್ಲೆ. ಜೊತೆಗೆ ಮುಖ್ಯಮಂತ್ರಿಗಳ ಸ್ವಕ್ಷೇತ್ರ ವರುಣಾದ ಭಾಗಶಃ ಹೆಚ್ಚು ಗ್ರಾಮಗಳು ನಂಜನಗೂಡು ತಾಲೂಕಿಗೆ ಸೇರುವ ಕಾರಣದಿಂದ ಅಧಿಕಾರಿಗಳು ಜವಾಬ್ದಾರಿ ಅರಿತು ನಿಗದಿತ ಸಮಯದಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು. ಇಲ್ಲದಿದ್ದರೆ ಅಂತಹವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ತಾಪಂ ಆಡಳಿತಾಧಿಕಾರಿ ಹಾಗೂ ಜಿಪಂ ಕಾರ್ಯದರ್ಶಿ ಕೃಷ್ಣಂರಾಜು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

ಗುರುವಾರ ತಾಪಂ ಕಚೇರಿಯ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, 2023-24ನೇ ಸಾಲಿಗೆ ವಿವಿಧ ಇಲಾಖೆಗಳಿಗೆ 145 ಕೋಟಿ 16 ಲಕ್ಷ ಅನುದಾನ ಬಂದಿದ್ದು, ಆ ಅನುದಾನವನ್ನು ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡಲಾಗಿದೆ. ಕೆಲ ಯೋಜನೆಗಳ ಲಿಂಕ್ ದಾಖಲಾತಿಗಳಿಗೂ ಸಹ ಈ ಸಭೆಯಲ್ಲೇ ಅನುಮೋದನೆ ನೀಡಲಾಗಿದೆ. ಅಧಿಕಾರಿಗಳು ಜವಾಬ್ದಾರಿ ಅರಿತು ಕೆಲಸ ನಿರ್ವಹಿಸುವ ಮೂಲಕ ಯಾವುದೇ ಕಾರಣಕ್ಕೂ ಅನುದಾನ ಅಪವ್ಯಯವಾಗದಂತೆ ಎಚ್ಚರಿಕೆ ವಹಿಸಿ ನಿಗದಿತ ಸಮಯದಲ್ಲಿ ಯೋಜನೆಗಳ ಕಾಮಗಾರಿಯನ್ನು ಮುಕ್ತಾಯಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು. ತಪ್ಪಿದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮವಹಿಸಲಾಗುತ್ತದೆ ಎಂದು ತಾಕೀತು ಮಾಡಿದರು.

ಈ ಕ್ಷೇತ್ರದಲ್ಲೇ ಕೆಲಸಗಳು ವಿಳಂಬವಾದರೆ ಅಥವಾ ನಿಗದಿತ ಗುರಿ ತಲುಪದೆ ಹೋದರೆ ಮುಖ್ಯಮಂತ್ರಿಗಳಿಗೆ ಕೆಟ್ಟ ಹೆಸರು ಬರಲಿದೆ. ಆದ್ದರಿಂದ ಕಳೆದ ವರ್ಷಗಳಿಗಿಂತ 2 ಪಟ್ಟು ವೇಗವಾಗಿ ಕೆಲಸ ನಿರ್ವಹಿಸಬೇಕು ಯಾವುದೇ ಕಾರಣಕ್ಕೂ ಜವಾಬ್ದಾರಿಯಿಂದ ನುಣಿಚಿಕೊಳ್ಳದೆ. ಏನೇ ಸಮಸ್ಯೆಗಳು ಎದುರಾದರೂ ಬಗೆಹರಿಸಿ ಸಾರ್ವಜನಿಕರನ್ನು ಕಚೇರಿಗಳಿಗೆ ಅಲೆ ದಾಡಿಸದೆ ಕೆಲಸ ಮಾಡಿಕೊಡಬೇಕು ಎಂದು ಸೂಚನೆ ನೀಡಿದರು.

ಇದಕ್ಕೂ ಮುನ್ನ ಪ್ರತಿ ಗ್ರಾಮದಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಅಳವಡಿಸಲಾಗಿರುವ ಕುಡಿಯುವ ನೀರಿನಲ್ಲಿ ಪೈಪ್‌ಲೈನ್ ಕಾಮಗಾರಿ ಅವೈಜ್ಞಾನಿಕ, ಕಳಪೆ ಕಾಮಗಾರಿಯಿಂದ ಕೂಡಿದೆ ಎಂದು ಸಾರ್ವಜನಿಕರಿಂದ ವ್ಯಾಪಕ ದೂರು ಕೇಳಿ ಬಂದಿದೆ. ಜೊತೆಗೆ ರಸ್ತೆ ಅಗೆದು ಗುಂಡಿ ಮುಚ್ಚದೆ ಅನೇಕ ಅಪಘಾತಗಳು ನಡೆದಿರುವ ಬಗ್ಗೆಯೂ ದೂರು ಕೇಳಿ ಬಂದಿದೆ. ಈ ಕೂಡಲೇ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಬೇಕು. ಅಲ್ಲದೆ ಕಳಪೆ ಕಾಮಗಾರಿಗಳನ್ನು ಸರಿಪಡಿಸಿಕೊಳ್ಳಬೇಕು, ಇಲ್ಲವಾದಲ್ಲಿ ನಿಮ್ಮ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ನೈರ್ಮಲ್ಯ ಮತ್ತು ಕುಡಿಯುವ ನೀರು ಸರಬರಾಜು ಅಧಿಕಾರಿ ಮಹೇಶ್ ಅವರನ್ನು ತರಾಟೆಗೆ ತೆಗೆದುಕೊಂಡರು.

ಸಭೆಯಲ್ಲಿ ತಾಪಂ ಇಓ ಹೆಚ್.ಜಿ.ಶ್ರೀನಿವಾಸ್, ರವಿಚಂದ್ರು, ತೋಟಗಾರಿಕಾ ಸಹಾಯಕ ನಿರ್ದೇಶಕ ಚಂದ್ರು, ತಾಲೂಕು ಆರೋಗ್ಯಾಧಿಕಾರಿ ಈಶ್ವರ್ ಕಾನಟ್ಕೆ, ಜಿಪಂ ಎಇಇ ಸಹನಾ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ಮೈಸೂರು ಬೇಸಿಗೆ ಕಾಲದ ರೇಸುಗಳು

3ನೇ ದಿನ, ಶುಕ್ರವಾರ 9-6-2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಸೋಮವಾರಪೇಟೆ ಪ್ಲೇಟ್-1200 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ರಾಯಲ್ ಟೈಟಲ್ 2. ಸೂಪರ್ ಸೆಕ್ಸಿ 3. ಸ್ಮೈಲ್ ಅರೌಂಡ್

II. ಆಲ್‌ಬರೆಟೊ ಪ್ಲೇಟ್-1400 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ಆ್ಯಂಟಿನೋರಿ 2. ಡಿ ಡಾನ್‌ಕಿಂಗ್ 3. ಸ್ಮೈಲ್ ಅರೌಂಡ್

III. ಲಾಯಲ್ ಪ್ರಿನ್ಸ್ ಪ್ಲೇಟ್ ಡಿ2- 1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ಇನ್‌ಫಿನಿಟಿ ಪಾಸಿಬಿಲಿಟಿ 2. ಆಕರ್ 3. ಸನ್ ಶೈನ್ ಕೋಸ್ಟ್

IV. ನೈರನ್ ಪ್ಲೇಟ್- 1200 ಮೀ. ರೇಟೆಡ್ 40 ರಿಂದ 45. ಮ.3.30ಕ್ಕೆ
1. ಕಾಪರ್ ಸನ್‌ರೈಸ್ 2. ಸರ್ ಕಾಲ್‌ಕ್ಯೂಲಸ್ 3. ಫ್ಯೂರಿಯೊಸೊ ಫನ್

V. ರೇಸಿಂಗ್ ಜರ್ನಲಿಸ್ಟ್ಸ್ ಟ್ರೋಫಿ-1400 ಮೀ. ರೇಟೆಡ್ ರೇಟೆಡ್ 40 ರಿಂದ 45. ಮ.4.00ಕ್ಕೆ
1. ಸ್ಟಾರ್ ಗ್ಲೋರಿ 2. ಸವರ್ ಜಿನ್ ಅರಬ್ 3. ಫನ್ ಅಂಡ್ ಲಾಫ್ಟರ್

VI. ಸೆಟ್‌ಲೈಜ್ ಪ್ಲೇಟ್-1400 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1 ಗ್ಯಾಮ 2. ಸೌಂಡ್ ಆಫ್ ಕ್ಯಾನನ್ಸ್ 3. ಫ್ಲೆಮಿಂಗ್ ಡ್ಯಾನ್ಸರ್

VII. ರಾಯಲ್ ಪ್ರಿನ್ಸ್- 1200 ಮೀ. ಡಿ1, ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ವಿಜಯ ಸ್ಪಾರ್ಕಲ್ 2. ಪವರ್ ಆಫ್ ಥಿಯಾ 3. ಕೋಲಾ

ದಿನದ ಅತ್ಯುತ್ತಮ........................ : ಆ್ಯಂಟಿನೋರಿ
ಡಬ್ಬಲ್........................ : ಸ್ಟಾರ್ ಗ್ಲೋರಿ, ವಿಜಯ ಸ್ಪಾರ್ಕಲ್
ಜಾಕ್‌ಪಾಟ್........................ : 3, 4, 5, 6 ಮತ್ತು 7
I ಟ್ರಿಬಲ್........................ : 2, 3 ಮತ್ತು 4
II ಟ್ರಿಬಲ್........................ : 5, 6 ಮತ್ತು 7
ಎಕ್ಸ್‌ಆಕ್ಟ್........................ : 1 ರಿಂದ 7

ಟಿಪ್ ಸ್ಟರ್ ಪಿಜೆಸಿ

ಚಾ.ನಗರ ಲೋಕಸಭಾ ಕ್ಷೇತ್ರದಿಂದ ಟಿಕೆಟ್ ಕೊಡಿ

ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರಿಗೆ ಮನವಿ ಸಲ್ಲಿಸಿದ ತಿ.ನರಸೀಪುರ ಪುರಸಭೆ ಸದಸ್ಯ ಅರ್ಜುನ್ ರಮೇಶ್



ತಿ.ನರಸೀಪುರ, ಜೂ.8- ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ತಮಗೆ ಅವಕಾಶ ಮಾಡಿಕೊಡಬೇಕೆಂದು ಕೇಂದ್ರ ಕಾನೂನು ಮತ್ತು ಸಂಸದೀಯ ಮಂಡಳಿ ಸಚಿವರಾದ ಪ್ರಹ್ಲಾದ್ ಜೋಷಿ ಅವರಲ್ಲಿ ಪುರಸಭೆ ಸದಸ್ಯ ಹಾಗೂ ಚಲನಚಿತ್ರ ನಟ ಅರ್ಜುನ್ ರಮೇಶ್ ಮನವಿ ಸಲ್ಲಿಸಿದ್ದಾರೆ.

ಪ್ರಹ್ಲಾದ್ ಜೋಷಿ ಅವರನ್ನು ದೆಹಲಿಯ ಅವರ ನಿವಾಸದಲ್ಲಿ ತಮ್ಮ ತಂದೆ ಮಾಜಿ ವಿಧಾನಪರಿಷತ್ ಸದಸ್ಯ ಸಿ.ರಮೇಶ್ ಅವರೊಂದಿಗೆ ಭೇಟಿ ಮಾಡಿ ಮನವಿ ಸಲ್ಲಿಸಿದ ಅರ್ಜುನ್, ಯುವಕರಿಗೆ ಅವಕಾಶ ಕಲ್ಪಿಸಿಕೊಡುವಂತೆ ಮನವಿ ಮಾಡಿದರು.

ಕಳೆದ ಒಂದೂವರೆ ದಶಕಗಳಿಂದ ಬಿಜೆಪಿ ಪಕ್ಷದ ಯುವ ಮೋರ್ಚಾದ ವಿವಿಧ ಹುದ್ದೆಗಳನ್ನು ಜವಾಬ್ದಾರಿಯುತವಾಗಿ ನಿಭಾಯಿಸಿರುವ ನಾನು ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಆಕಾಂಕ್ಷೆ ಹೊಂದಿದ್ದೇನೆ. ಕ್ಷೇತ್ರದಲ್ಲಿ ಬಿಜೆಪಿ ಮತ್ತೆ ಗೆಲ್ಲಲೇಬೇಕು. ಪಕ್ಷದ ಹೈಕಮಾಂಡ್ ಚುನಾವಣೆಯಲ್ಲಿ ಯುವಕರಿಗೆ ಆದ್ಯತೆ ಕೊಟ್ಟು ಅವಕಾಶ ಕಲ್ಪಿಸಬೇಕು. ಪಕ್ಷದ ಸಂಘಟನೆ ಹಾಗೂ ಸಮಾಜ ಸೇವೆಯಲ್ಲಿ ಎರಡೂ ಜಿಲ್ಲೆಗಳಲ್ಲಿಯೂ ಹೆಸರುಗಳಿಸಿರುವ ತಮ್ಮನ್ನು ಪರಿಗಣಿಸುವಂತೆ ಅವರು ಮನವಿ ಮಾಡಿದರು.

ವೃದ್ಧ ನಾಪತ್ತೆ

ಮೈಸೂರು, ಜೂ. 8- ವೃದ್ಧರೊಬ್ಬರು ನಾಪತ್ತೆಯಾಗಿರುವ ಬಗ್ಗೆ ಮೈಸೂರಿನ ತ್ಯಾಗರಾಜ ರಸ್ತೆಯಿಂದ ತಡವಾಗಿ ವರದಿಯಾಗಿದೆ.

ಅಲ್ಲಿನ ನಿವಾಸಿ ಎನ್. ನಾಗರಾಜು(69) ಎಂಬುವರು ಕಳೆದ ಮಾ.22ರಂದು ಚಾಮರಾಜನಗರಕ್ಕೆ ಹೋಗುವುದಾಗಿ ಅಕ್ಕಪಕ್ಕದ ಮನೆಯವರಿಗೆ ತಿಳಿಸಿ, ಹೋದವರು ಈವರೆಗೆ ವಾಪಸ್ಸಾಗಿಲ್ಲ ಎಂದು ಅವರ ಅಳಿಯ ರಾಜೇಂದ್ರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಇವರ ಬಗ್ಗೆ ಮಾಹಿತಿ ಇರುವವರು ಕೆ.ಆರ್. ಠಾಣೆ ದೂರವಾಣಿ ಸಂಖ್ಯೆ 0821-2418319 ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 2418330 ಅನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ಹುಣಸೂರಿನಲ್ಲಿ ಲಕ್ಷ್ಮಣತೀರ್ಥ ನದಿಗೆ ಹಾರಿ ವ್ಯಕ್ತಿ ಆತ್ಮಹತ್ಯೆ

ಹುಣಸೂರು, ಜೂ.8- ನಗರದ ಸರಸ್ವತಿಪುರಂ ನಿವಾಸಿ ಹಾಗೂ ಮಾತು ಬಾರದ ಮೂಗ (ರಾಮಚಂದ್ರ) ಗುರುವಾರ ಹಳೆ ಸೇತುವೆ ಮೇಲಿಂದ ಲಕ್ಷ್ಮಣತೀರ್ಥ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ಮೃತ ರಾಮಚಂದ್ರ ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದು, ನೋವಿನಿಂದ ಜೀವನದಲ್ಲಿ ಜಿಗುಪ್ಸೆಗೊಂಡು ಇಂದು ಹಳೆ ಸೇತುವೆ ಮೇಲಿಂದ ಲಕ್ಷ್ಮಣತೀರ್ಥ ನದಿಗೆ ಹಾರಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ವಿಷಯ ತಿಳಿದು ನಗರ ಪೋಲಿಸರು ಪ್ರಕರಣ ದಾಖಲಿಸಿಕೊಂಡು ಮೃತದೇಹವನ್ನು ಹೊರತೆಗೆದು ಮರಣೋತ್ತರ ಪರೀಕ್ಷೆಯ ನಂತರ ಮೃತದೇಹವನ್ನು ವಾರಸುದಾರರಿಗೆ ನೀಡಲಾಯಿತು. ಮೃತ ರಾಮಚಂದ್ರ ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಅರಸು ಕಾಲೇಜು ಬಳಿಯಿರುವ ರುದ್ರಭೂಮಿಯಲ್ಲಿ ಸಂಜೆ ನೆರವೇರಿತು.


ಸೂರ್ಯ ಯಶೋಧ ಆಸ್ಪತ್ರೆಯ ಪ್ರಥಮ ವಾರ್ಷಿಕೋತ್ಸವ

ಹುಣಸೂರು, ಜೂ. 8- ತಾಲೂಕಿನ ಕೆ.ಎಸ್. ಗದ್ದಿಗೆ, ಕೆ.ಎಂ.ಹಳ್ಳಿಯಲ್ಲಿರುವ ಸೂರ್ಯ ಯಶೋಧ ಆಸ್ಪತ್ರೆಯ ಪ್ರಥಮ ವಾರ್ಷಿಕೋತ್ಸವವನ್ನು ಆಚರಿಸಲಾಯಿತು.

ಈ ವೇಳೆ ಮಾತನಾಡಿದ ಆಸ್ಪತ್ರೆಯ ಮ್ಯಾನೇಜಿಂಗ್ ಟ್ರಸ್ಟಿ ಡಾ. ಯೋಗೇಶ್, ಗ್ರಾಮೀಣ ಭಾಗದ ಜನತೆಗೆ ಕಡಿಮೆ ದರದಲ್ಲಿ ಚಿಕಿತ್ಸೆಯೊಂದಿಗೆ ಆರೋಗ್ಯ ಸಮಸ್ಯೆ ಎದುರಾದಾಗ ದಿನದ 24 ಗಂಟೆಯೂ ಸೇವೆ ಸಿಗಬೇಕು ಎಂಬ ತಂದೆ ಸೂರ್ಯ ಕುಮಾರ್ ಅವರ ಅಭಿಲಾಷೆಯಾಗಿತ್ತು. ಅದರಂತೆ ನಮ್ಮ ಆಸ್ಪತ್ರೆ ಕಾರ್ಯ ನಿರ್ವಹಿಸುತ್ತಿದ್ದು, ಗುರುವಾರಕ್ಕೆ ಒಂದು ವರ್ಷ ತುಂಬಿದೆ. ಚಿಕಿತ್ಸೆ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ ಎಂದು ತಿಳಿಸಿದರು. ಸಮಾರಂಭದಲ್ಲಿ ಡಾ.ರಂಜಿತ್, ಡಾ.ಸುಮಾ, ಮ್ಯಾನೇಜರ್ ಭಾಸ್ಕರ್ ಹಾಗೂ ಸಿಬ್ಬಂದಿ ವರ್ಗದವರು ಇದ್ದರು.

ಮಿರ್ಲೆ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಅಧ್ಯಕ್ಷರ ಆಯ್ಕೆ

ಭೇರ್ಯ, ಜೂ.8- ಸಾಲಿಗ್ರಾಮ ತಾಲೂಕು ಮಿರ್ಲೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಯೋಗೇಶ್ .ಎಂ.ಎಸ್. ಆಯ್ಕೆಯಾಗಿದ್ದಾರೆ.



ಎಂ.ಆರ್.ವಸಂತಕುಮಾರ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ಯೋಗೇಶ್. ಎಂ.ಎಸ್. ಮತ್ತು ಎಂ.ಆರ್.ರಘು ನಾಮಪತ್ರ ಸಲ್ಲಿಸಿ, ನಂತರ ನಡೆದ ಚುನಾವಣೆಯಲ್ಲಿ ಯೋಗೇಶ್ ಎಂ.ಎಸ್. ಅವರು 6 ಮತಗಳನ್ನು ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರೇ, ಪ್ರತಿಸ್ಪರ್ಧಿ ಎಂ.ಆರ್.ರಘು 4 ಮತಗಳನ್ನು ಪಡೆದು ಪರಾಭವಗೊಂಡರು. ಒಂದು ಮತ ತಿರಸ್ಕಾರಗೊಂಡಿದೆ ಎಂದು ಚುನಾವಣಾಧಿಕಾರಿ ಎಸ್.ರವಿ ಘೋಷಿಸಿದರು. ಸಂಘದ ಕಾರ್ಯದರ್ಶಿ ಬಿ.ಸಿ.ವಸಂತ್ ಕುಮಾರ್ ಇದ್ದರು. ಇದೇ ಸಂದರ್ಭದಲ್ಲಿ ನೂತನ ಅಧ್ಯಕ್ಷರನ್ನು ಸಂಘದ ಆಡಳಿತ ಮಂಡಳಿಯ ನಿರ್ದೇಶಕರು ಹಾರಹಾಕಿ ಅಭಿನಂದಿಸಿದರು.

ಸಾಮರಸ್ಯಕ್ಕಾಗಿ ಸೌಹಾರ್ದ ಕೂಟ, ಸಹಪಂಕ್ತಿ ಭೋಜನ ಕಾರ್ಯಕ್ರಮ

ದೇಶದ ರಕ್ಷಣೆಗಾಗಿ ಮತಾಂಧತೆಯಿಂದ ಹೊರಬರಬೇಕು

ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ.ಅರವಿಂದ ಮಾಲಗತ್ತಿ ಅಭಿಮತ



ಮೈಸೂರು,ಜೂ.8(ಪಿಎಂ)– ದೇಶ ರಕ್ಷಣೆ ಮಾಡಿಕೊಳ್ಳಬೇಕೆಂದರೆ ಮತಾಂಧತೆಯಿಂದ ಎಲ್ಲರೂ ಹೊರಬರಬೇಕು. ಆಗ ಸಾಮರಸ್ಯದ ಬದುಕು ರೂಪುಗೊಳ್ಳಲು ಸಾಧ್ಯವಾಗಲಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ.ಅರವಿಂದ ಮಾಲಗತ್ತಿ ಅಭಿಪ್ರಾಯಪಟ್ಟರು.

ಮೈಸೂರಿನ ಚಾಮುಂಡಿಬೆಟ್ಟದ ಪಾದದ ರಸ್ತೆಯ ರುದ್ರಭೂಮಿಯಲ್ಲಿ (ಸುಡುವ ಸ್ಮಶಾನ) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ವೇದಿಕೆಯ ಅಧ್ಯಕ್ಷ, ಮಡೆಸ್ನಾನ ವಿರೋಧಿ ಹೋರಾಟಗಾರ ಕೆ.ಎಸ್.ಶಿವರಾಮು ಅವರ ಜನುಮದಿನದ ಪ್ರಯುಕ್ತ ಗುರುವಾರ ಹಮ್ಮಿಕೊಂಡಿದ್ದ ಸಾಮರಸ್ಯಕ್ಕಾಗಿ ದ್ರಾವಿಡರು, ಮುಸ್ಲಿಂ ಮತ್ತು ಕ್ರಿಶ್ಚಿಯನ್ನರ ಸೌಹಾರ್ದ ಕೂಟ ಹಾಗೂ ಸಹಪಂಕ್ತಿ ಭೋಜನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಲ್ಪಸಂಖ್ಯಾತರಿಗೆ ರಾಷ್ಟ್ರಭಕ್ತಿ ಕಡಿಮೆ ಅಥವಾ ಇಲ್ಲ ಎಂಬುದು ಕೆಲವರ ಆಲೋಚನಾ ಕ್ರಮ. ಎಲ್ಲರಲ್ಲಿಯೂ ಈ ಆಲೋಚನಾ ಕ್ರಮವಿಲ್ಲ. ಅಲ್ಪಸಂಖ್ಯಾತರಲ್ಲಿನ ಮತಾಂಧತೆ ಅವರ ಧರ್ಮಕ್ಕೆ ಅಪಾಯಕಾರಿ, ಬಹುಸಂಖ್ಯಾತರ ಮತಾಂಧತೆ ದೇಶಕ್ಕೆ ಅಪಾಯಕಾರಿ. ದೇಶವನ್ನು ರಕ್ಷಣೆ ಮಾಡಿಕೊಳ್ಳಬೇಕೆಂದರೆ ಈ ಮತಾಂಧತೆಯಿಂದ ಎಲ್ಲರೂ ಹೊರಬರಬೇಕು ಎಂದರು.

ಬ್ರಿಟಿಷರಿಂದ ಭಾರತದ ಪರೋಕ್ಷ ಅಭ್ಯುದಯ: ಈ ದೇಶಕ್ಕೆ ಬ್ರಿಟಿಷರು ಬಾರದೇ ಹೋಗಿದ್ದರೆ ನನ್ನ ಸ್ಥಿತಿ ಏನಾಗುತ್ತಿತ್ತೋ ಎಂದು ಕುವೆಂಪು ಬರೆದುಕೊಂಡಿದ್ದಾರೆ. ಈ ಮಾತು ಕೇಳಿದಾಗ ಬ್ರಿಟಿಷರು ಬಾರದೇ ಹೋಗಿದ್ದರೆ ದಲಿತರು ಇನ್ನೂ ಅಸ್ಪೃಶ್ಯರಾಗಿಯೇ ಇರುತ್ತಿದ್ದರೇನೋ ಎನ್ನಿಸುತ್ತದೆ. ಬ್ರಿಟಿಷರ ಪರಿಣಾಮವಾಗಿಯೂ ಭಾರತದ ಪರೋಕ್ಷವಾಗಿ ಅಭ್ಯುದಯವಾಗಿದೆ. ಅವರ ಅಭಿವೃದ್ಧಿ ಕಾರ್ಯಗಳ ಉದ್ದೇಶವು ಮತಾಂತರಕ್ಕಾಗಿಯಷ್ಟೇ ಎನ್ನುವವರೂ ಇದ್ದಾರೆ. ಹಾಗೇನಿಲ್ಲ, ಕ್ರೈಸ್ತರು ತಳಸಮುದಾಯಗಳ ಶ್ರೇಯೋಭಿವೃದ್ಧಿಗೆ ನಡೆಸಿದ ಕಾರ್ಯಚಟುವಟಿಕೆ ನೋಡಿದರೆ ನಮಗೇ ಅಚ್ಚರಿ ಆಗುತ್ತದೆ. ಆ ಪ್ರಮಾಣದಲ್ಲಿ ಅವರು ಕೆಲಸ ಮಾಡಿದ್ದಾರೆ. ಇಲ್ಲ ಎನ್ನಲು ಸಾಧ್ಯವಿಲ್ಲ. ಆದರೆ ಮತಾಂತರ ಒಂದು ಭಾಗವಾಗಿತ್ತು ಎನ್ನುವುದು ಬೇರೆ ಮಾತು. ಭಾರತ ಬೆಳೆಯಲು ಪರೋಕ್ಷವಾಗಿ ಅವರು ಕಾರಣರಾಗಿದ್ದಾರೆ. ಹೀಗಾಗಿ ಕ್ರೈಸ್ತರು, ಇಸ್ಲಾಮೀಯರು ಅಥವಾ ದ್ರಾವಿಡ ಮೂಲದ ಜನವರ್ಗವಾಗಲಿ ಎಲ್ಲರೂ ಹೆಚ್ಚಾಗಿ ಸಾಮರಸ್ಯದ ಬದುಕನ್ನೇ ನಿರೀಕ್ಷೆಮಾಡಿದವರು ಎಂದು ಪ್ರತಿಪಾದಿಸಿದರು.

ಕರ್ನಾಟಕ ದೇಶಕ್ಕೇ ಮಾದರಿಯಾಗುವ ವಿಶ್ವಾಸವಿದೆ ; ಪ್ರೊ.ಅರವಿಂದ ಮಾಲಗತ್ತಿ

ಮೈಸೂರು,ಜೂ.8(ಪಿಎಂ)– ಕರ್ನಾಟಕ ಆಡಳಿತ ವ್ಯವಸ್ಥೆಗೆ ಮಾದರಿಯಾಗಲಿದೆ. ಇದು ರಾಷ್ಟ್ರವ್ಯಾಪಿ ಹಬ್ಬಿಕೊಳ್ಳಲಿದೆ ಎನ್ನಲಾಗುತ್ತಿದ್ದು, ಇದಕ್ಕೆ ಅಚ್ಚರಿಪಡಬೇಕಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಸುಭದ್ರ–ಆರೋಗ್ಯಪೂರ್ಣ ಕರ್ನಾಟಕ ಕಟ್ಟುವ ನಂಬಿಕೆ ಇದೆ ಎಂದು ಪ್ರೊ.ಅರವಿಂದ ಮಾಲಗತ್ತಿ ಹೇಳಿದರು.

ಗುಜರಾತ್ ಮಾಡೆಲ್ ಅನ್ನುವುದಕ್ಕಿಂತ ಕರ್ನಾಟಕ ಮಾಡೆಲ್ ಎನ್ನುವುದೇ ನಮ್ಮ ನಾಡಿನ ಸ್ವಂತಿಕೆ. ಕರ್ನಾಟಕ ಅತ್ಯಂತ ಪ್ರಬುದ್ಧವಾದ ನಾಡು. ಇಲ್ಲಿ ಸಮಾಜವಾದಿಗಳು, ಸಮಾಜ ಚಿಂತಕರು, ರಾಜಕೀಯ ನಾಯಕರು ಮೊದಲಿನಿಂದಲೂ ಇದ್ದಾರೆ. ವಸ್ತುನಿಷ್ಠವಾಗಿ ಚಿಂತಿಸುವ, ತಳಸಮುದಾಯಗಳ ಬಗ್ಗೆ ಕಾಳಜಿ ವಹಿಸುವುದು ಈ ನಾಡಿನ ಹುಟ್ಟುಗುಣ ಎನ್ನುವ ರೀತಿಯಲ್ಲಿ ಕರ್ನಾಟಕ ರೂಢಿಸಿಕೊಂಡು ಬಂದಿದೆ. ಇಂತಹ ನಾಯಕರನ್ನು ಹೊಂದಿದ ನಮ್ಮ ನಾಡು ಧನ್ಯ ಎಂದರು.

ಅಕ್ಬರ್ ಸಿಂಹಾಸನದ ಮೇಲೆ ಭಗವದ್ಗೀತೆ: ಚರಿತ್ರೆ ಪುಟ ತೆಗೆದು ನೋಡಿದರೆ ವೇದ, ರಾಮಾಯಣ, ಮಹಾಭಾರತ, ಭಗದ್ಗೀತೆಗಳನ್ನು ಪರ್ಷಿಯನ್, ಹಿಂದಿ ಭಾಷೆಗೆ ಅನುದಾನ ಮಾಡಿದವರು ಆರಂಭದಲ್ಲಿ ಎಲ್ಲಾ ಮುಸಲ್ಮಾನರೇ. ಅಕ್ಬರ್ ಅವಧಿಯಲ್ಲಿ ಈ ಅನುವಾದ ಪ್ರಕ್ರಿಯೆ ಪ್ರಾರಂಭವಾಯಿತು. ಅಕ್ಬರ್ ತನ್ನ ಸಿಂಹಾಸನದ ಮೇಲೆ ಕುರಾನ್ ಮತ್ತು ಭಗವದ್ಗೀತೆ ಎರಡನ್ನೂ ಇಟ್ಟು ಆಳ್ವಿಕೆ ಮಾಡುತ್ತಿದ್ದ ಎಂದು ನಾವು ಓದಿದ್ದೇವೆ. ಇದೆಲ್ಲಾ ಸಾಮರಸ್ಯ ಬದುಕಿನ ಪ್ರತೀಕಗಳು. ಹೀಗಾಗಿ ನಮ್ಮ ಇತಿಹಾಸ ಸಾಮರಸ್ಯದಿಂದ ಕೂಡಿದೆ. ಇದರ ನಡುವೆ ಸಾಮರಸ್ಯಕ್ಕೆ ವಿರುದ್ಧವಾಗಿ ಕೆಲ ಅಪವಾದಾತ್ಮಕ ಗುಳ್ಳೆಗಳು ಏಳುತ್ತವೆ. ಈ ನೀರಿನ ಮೇಲಿನ ಗುಳ್ಳೆಗಳು ಹೆಚ್ಚು ಕಾಲ ಉಳಿಯುವುದಿಲ್ಲ ಎಂದು ವಿಶ್ಲೇಷಿಸಿದರು.

ಸಹಪಂಕ್ತಿ ಭೋಜನ ಕೂಟದಲ್ಲಿ ಮಾಂಸಾಹಾರ ಹಾಗೂ ಸಸ್ಯಾಹಾರ ಎರಡೂ ವ್ಯವಸ್ಥೆ ಮಾಡಲಾಗಿತ್ತು. ಎಲ್ಲರು ಅವರವರು ಬಯಸಿದ ಆಹಾರ ಸೇವನೆ ಮಾಡಿದರು. ಇದೇ ವೇಳೆ ಕೆ.ಎಸ್.ಶಿವರಾಮು ಅವರನ್ನು ಸನ್ಮಾನಿಸಿ, ಅಭಿನಂದಿಸಲಾಯಿತು. ಮುಖ್ಯ ಅತಿಥಿಗಳಾಗಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಸಾಹಿತಿಗಳಾದ ಪ್ರೊ.ಕೆ.ಎಸ್.ಭಗವಾನ್, ಪ್ರೊ.ಕಾಳಚನ್ನೇಗೌಡ, ಪ್ರೊ.ಮೈಲಳ್ಳಿ ರೇವಣ್ಣ, ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಭಾರತೀಯ ದಲಿತ ಸಾಹಿತ್ಯ ಅಕಾಡೆಮಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಡಾ.ಸಿ.ವೆಂಕಟೇಶ್, ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್, ಜಮಾಅತೆ ಇಸ್ಲಾಂ ಹಿಂದ್ ಅಧ್ಯಕ್ಷ ಮಹಮ್ಮದ್ ಅಸ್ಲಾಂ, ಪ್ರಗತಿಪರ ಚಿಂತಕ ಎಂ.ಎಫ್.ಕಲೀಂ, ಜೋಸೆಫ್ ಜಾಜಿ ಅಸೋಸಿಯೇಟ್ಸ್ ಮುಖ್ಯಸ್ಥ ಜೋಸೆಫ್ ಜಾಜಿ, ಕ್ರಿಶ್ಚಿಯನ್ ಮುಖಂಡ ಆರ್.ಫ್ರಾಂಸಿಸ್, ಜಿಲ್ಲಾ ಉಪ್ಪಾರರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ಎನ್‌ಎಸ್‌ಯುಐ ರಾಜ್ಯ ಪ್ರಧಾನ ಕಾರ್ಯದರ್ಶಿ ರಫಿಕ್ ಮತ್ತಿತರರು ಪಾಲ್ಗೊಂಡಿದ್ದರು.

ಜಾತಿ–ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡುತ್ತಾ ಅಶಾಂತಿ ಸೃಷ್ಟಿ ಮಾಡಲಾಗುತ್ತಿದೆ. ಆ ಮೂಲಕ ಕೋಮುವಾದ ಬಿತ್ತಲಾಗುತ್ತಿದೆ. ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಜನತೆ ಇದರ ವಿರುದ್ಧ ಮತ ಚಲಾಯಿಸಿದ್ದಾರೆ. ಆ ಮೂಲಕ ಕೋಮುವಾದಿಗಳಿಗೆ ತಕ್ಕ ಪಾಠ ಕಲಿಸಿದ್ದು, ಮುಂಬರುವ ಲೋಕಸಭಾ ಚುನಾವಣೆಗೂ ಸಂದೇಶ ರವಾನಿಸಿದ್ದಾರೆ. ಸ್ಮಶಾನ ಎಂದರೆ ಜನತೆಯಲ್ಲಿ ಭಯ ಹಾಗೂ ಮೌಢ್ಯವಿದೆ. ಅದನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಈ ವಿಶೇಷ–ವಿಭಿನ್ನ ಕಾರ್ಯಕ್ರಮ ಆಯೋಜಿಸಲಾಗಿದೆ.

-ಕೆ.ಎಸ್.ಶಿವರಾಮು

ಹಿಂದೂ ಶಬ್ದಕ್ಕೆ ಕೆಲ ಗ್ರಂಥಗಳಲ್ಲಿ

ತಲೆ ಹೊಡೆಯುವವನು ಎಂಬ ಅರ್ಥವಿದೆ ; ಪ್ರೊ.ಕೆ.ಎಸ್.ಭಗವಾನ್

ಮೈಸೂರು,ಜೂ.8(ಪಿಎಂ)– ಹಿಂದೂ ಶಬ್ದಕ್ಕೆ ಕಾಶ್ಮೀರದ ಶೈವ ಗ್ರಂಥದಲ್ಲಿ 'ಹೀನ ಮತ್ತು ದೂಷಣೆಗೆ ಒಳಗಾದವನೇ ಹಿಂದೂ' ಎಂದು ವ್ಯಾಖ್ಯಾನ ಇದೆ ಮತ್ತು ಉರ್ದು ಗ್ರಂಥಗಳಲ್ಲಿ 'ಕಳ್ಳ, ದಾರಿಹೋಕ, ತಲೆ ಹೊಡೆಯುವವನು' ಎಂಬ ಅರ್ಥ ಇದೆ ಎಂದು ಸಾಹಿತಿ ಪ್ರೊ.ಕೆ.ಎಸ್.ಭಗವಾನ್ ಹೇಳಿದರು.

ಹಿಂದೂ ಶಬ್ದ ಬಂದಿದ್ದು 1030ರಲ್ಲಿ. ಅದಕ್ಕೂ ಮೊದಲು ಹಿಂದೂ ಶಬ್ದ ಎಲ್ಲೂ ಇಲ್ಲ. 4 ವೇದಗಳು, ರಾಮಾಯಣ, ಮಹಾಭಾರತ, 18 ಪುರಾಣಗಳು, 18 ಉಪ ಪುರಾಣಗಳಲ್ಲಿಯೂ ಇಲ್ಲ. ಸಂಸ್ಕೃತದ ಯಾವ ಗ್ರಂಥದಲ್ಲೂ ಇಲ್ಲ. 1030ರಲ್ಲಿ ಪರ್ಷಿಯಾದ ಲೇಖಕ ಅಲ್ ಬಿರೂನಿ ಎಂಬಾತ ಭಾರತದ ಬಗ್ಗೆ ಬರೆಯುತ್ತಾ ಸಿಂಧೂ ನದಿಯನ್ನು ಹಿಂದೂ ಎಂದು ಕರೆದ ಎಂದರು.

ಏಕೆಂದರೆ ಪರ್ಷಿಯನ್ ಭಾಷೆಯಲ್ಲಿ 'ಸ' ಕಾರ ಇಲ್ಲ. ಹಾಗಾಗಿ 'ಸ' ಕಾರದ ಬದಲಾಗಿ 'ಹ' ಕಾರವಾಗಿ ಹಿಂದೂ ಆಯಿತು. ಹಿಂದೂ ಎನ್ನುವ ಶಬ್ದ ಅಕ್ಬರ್ ಕಾಲದಲ್ಲಿ ಸ್ವಲ್ಪ ಸ್ವಲ್ಪವೇ ಪ್ರಚಾರಕ್ಕೆ ಬಂತು. ಭೇದಭಾವವಿಲ್ಲದೆ ಎಲ್ಲರನ್ನೂ ಸಮಾನವಾಗಿ ಕಂಡು ರಾಜ ಅಕ್ಬರ್. ಬಹುಶಃ ಅಶೋಕನ ನಂತರದ ಬಹಳ ದೊಡ್ಡ ರಾಜ ಅಕ್ಬರ್. ಆ ಬಳಿಕ ನಮಗೆ ಕಾಣುವುದು ನಾಲ್ವಡಿ ಕೃಷ್ಣರಾಜ ಒಡೆಯರ್. ಇವರು ಇನ್ನೂ ದೊಡ್ಡವರು ಎಂದು ಹೇಳಿದರು.

ಆದ್ದರಿಂದ ಹಿಂದೂ ಶಬ್ದವನ್ನು ಅಕ್ಬರ್ ತನ್ನ ಅವಧಿಯಲ್ಲಿ ಹಿಂದೂಸ್ತಾನ ಎಂದು ಕರೆಯಲು ಶುರು ಮಾಡಿದ. ಆದರೆ ಹೆಚ್ಚು ಪ್ರಚಾರ ಆಗಲಿಲ್ಲ. ಬ್ರಿಟಿಷ್‌ನವರ ಆಡಳಿತ ಬಂದಾಗ, ಮುಸಲ್ಮಾನರು ಮತ್ತು ನಾನ್ ಮುಸ್ಲಿಂ ಅಂದರೆ ಹಿಂದೂಗಳನ್ನು ಪ್ರತ್ಯೇಕ ಮಾಡುವಾಗ ಅವರು, 'ಹಿಂದೂ' ಎಂದು ಕರೆದರು. ಹಾಗಾಗಿ ಹಿಂದೂ ಶಬ್ದ 18ನೇ ಶತಮಾನದಲ್ಲಿ ಹೆಚ್ಚು ಪ್ರಚಾರಕ್ಕೆ ಬಂದಿತು. ಅಲ್ಲಿತನಕ ಹಿಂದೂ ಎಂಬ ಶಬ್ದವೇ ಗೊತ್ತಿರಲಿಲ್ಲ ಎಂದು ಪ್ರತಿಪಾದಿಸಿದರು.

ನಾನು ಹಳ್ಳಿಯವನು. ನಮ್ಮಪ್ಪ 100 ವರ್ಷ ಬದುಕಿದ್ದವರು. ಅವರಿಗಾಗಲೀ, ಈಗಲೂ ಬದುಕಿರುವ 100 ವರ್ಷ ವಯೋಮಾನದ ಹಳ್ಳಿ ಜನಕ್ಕೆ ಹಿಂದೂ ಎಂಬುದು ಗೊತ್ತಿಲ್ಲ ಅವರಿಗೆ ಗೊತ್ತಿರುವುದು ಅವರ ಜಾತಿಯಷ್ಟೇ. ನಮ್ಮ ಜನಕ್ಕೆ ಹಿಂದುತ್ವ ಮೌಢ್ಯ ತುಂಬುತ್ತಿದೆ. ಅವರನ್ನು ಬದಲಾವಣೆ ಮಾಡಬೇಕಿದೆ ಎಂದರು.

ಭಾರತೀಯ ಸಂಗೀತ ಶಾಸ್ತ್ರ ದಿನಾಚರಣೆ; ಪ್ರಶಸ್ತಿ ಪ್ರದಾನ, ಗ್ರಂಥ ಲೋಕಾರ್ಪಣೆ



ಮೈಸೂರು, ಜೂ.8(ಎಂಕೆ)– ಮೈಸೂರಿನ ರಾಮಕೃಷ್ಣನಗರದಲ್ಲಿರುವ ರಮಾಗೋವಿಂದ ರಂಗಮಂದಿರದಲ್ಲಿ ಬ್ರಹ್ಮವಿದ್ಯಾ ಮೈಸೂರು, ವೀಣಾ ವಿಶ್ವೇಶ್ವರನ್ ಅಂತಾರಾಷ್ಟ್ರೀಯ ಪ್ರತಿಷ್ಠಾನ ಅಮೇರಿಕಾ, ಕಾಂಚನ ಶ್ರೀಲಕ್ಷ್ಮಿನಾರಾಯಣ ಮ್ಯೂಸಿಕ್ ಅಕಾಡೆಮಿ ಟ್ರಸ್ಟ್, ಅರಸು ಜನಾಂಗ, ಪರಂಪರೆ, ಕಲಾಸಂದೇಶ ಪ್ರತಿಷ್ಠಾನ, ಶ್ರೀಮತಂಗ ಸಾಂಸ್ಕೃತಿಕ ಸಾಮಾಜಿಕ ಅಕಾಡೆಮಿ ಟ್ರಸ್ಟ್, ಶ್ರೀವಿದ್ಯಾ ಪ್ರತಿಷ್ಠಾನ ಮತ್ತು ರಾಷ್ಟ್ರೀಯ–ಅಂತರರಾಷ್ಟ್ರೀಯ ಕಲಾಸಂಸ್ಥೆಗಳ ಸಹಯೋಗದೊಂದಿಗೆ ಪದ್ಮಶ್ರೀ ಡಾ.ರಾ.ಸತ್ಯನಾರಾಯಣ ಅವರ ಸ್ಮರಣಾರ್ಥ 'ಭಾರತೀಯ ಸಂಗೀತಶಾಸ್ತ್ರ ದಿನಾಚರಣೆ, ಪ್ರಶಸ್ತಿ ಪ್ರದಾನ, ಗ್ರಂಥಲೋಕಾರ್ಪಣೆ ಹಾಗೂ ಸಂಗೀತೋತ್ಸವ ಕಾರ್ಯಕ್ರಮ ಗುರುವಾರ ನಡೆಯಿತು.

ಹಿರಿಯ ಸಂಶೋಧಕ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಅವರಿಗೆ 'ಸಾಹಿತ್ಯಸೂರಿ', ಕರ್ನಾಟಕ ಸಂಗೀತ ವಿದ್ವಾನ್‌ಗಳಾದ ಹೆಚ್.ಕೆ.ನರಸಿಂಹಮೂರ್ತಿ, ಶೃಂಗೇರಿ ಹೆಚ್.ಎಸ್.ನಾಗರಾಜ್ ಹಾಗೂ ವೀಣಾವಾದಕ ವಿದ್ವಾನ್ ಮಧುಕರಂ ಪ್ರಶಾಂತ್ ಅಯ್ಯಂಗಾರ್ ಅವರಿಗೆ 'ರಾ.ಸತ್ಯನಾರಾಯಣ ಸಂಸ್ಮರಣ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಇದೇ ವೇಳೆ ಅಂತರರಾಷ್ಟ್ರೀಯ ಖ್ಯಾತಿಯ ವೀಣಾ ವಿದ್ವಾಂಸ ಡಾ.ರಾ.ವಿಶ್ವೇಶ್ವರನ್ ರಚಿಸಿರುವ 'ಶ್ರೀ ಕಮಲಾಂಬಾ ಜಯತಿ' ಹಾಗೂ ವಿದುಷಿ ಕಾಂಚನ ರೋಹಿಣಿ ಸುಬ್ಬರತ್ನಂ ರಚಿತ 'ಆರೋಹಿಣೀ' ಕೃತಿಗಳನ್ನು ಲೋಕಾರ್ಪಣೆಗೊಳಿಸಲಾಯಿತು. ಬಳಿಕ ಸಂಗೀತ ವಿದ್ವಾಂಸ ಡಾ.ಶ್ರೀಕಾಂತಂ ನಾಗೇಂದ್ರಶಾಸ್ತ್ರಿ ಎರಡೂ ಕೃತಿಗಳ ಪರಿಚಯ ಮಾಡಿಕೊಟ್ಟರು.

ಪ್ರಶಸ್ತಿ ಸ್ವೀಕರಿಸಿದ ಬಳಿಕ ಮಾತನಾಡಿದ ಹಿರಿಯ ಸಂಶೋಧಕ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ, ರಾಷ್ಟ್ರಕವಿ ಕುವೆಂಪು, ಪಿಟೀಲು ಚೌಡಯ್ಯ, ಡಾ.ರಾ.ಸತ್ಯನಾರಾಯಣ ಸೇರಿದಂತೆ ಅನೇಕ ಅಗ್ರಮಾನ್ಯರನ್ನು ನೋಡುವ, ಅವರೊಂದಿಗೆ ಇದ್ದು, ವಿಚಾರಗಳನ್ನು ಹಂಚಿಕೊಳ್ಳಲು ಅವಕಾಶ ದೊರೆತದ್ದು ನನ್ನ ಪುಣ್ಯ. ಇದ್ದಷ್ಟು ಸಮಯವನ್ನೂ ಓದಿಗೆ, ಬರವಣಿಗೆಗೆ ಬಳಸಿಕೊಂಡಿದ್ದೇನೆ ಎಂಬ ತೃಪ್ತಿ ನನಗಿದೆ. ಮನುಷ್ಯ ತನ್ನ ಜೀವನಗತಿಯಲ್ಲಿ ಯಾವ ಬಗೆಯ ಕೆಲಸಗಳನ್ನು ಮಾಡುತ್ತಾನೆ. ಅದರಿಂದ ಏನನ್ನು ಗಳಿಸುತ್ತಾನೆ ಎಂಬುದು ಮುಖ್ಯವಾಗುತ್ತದೆ. ಅದಕ್ಕೆ ಮಾತ್ರವೇ ಸಮಾಜದಲ್ಲಿ ಬೆಲೆ ಎಂದರು.

ಮನಸೆಳೆದ ವೀಣಾ ಮಾಧುರ್ಯ: ಸಭಾ ಕಾರ್ಯಕ್ರಮಕ್ಕೂ ಮುನ್ನ ನಡೆದ ವೀಣಾವಾದನ ಕಛೇರಿಯಲ್ಲಿ ವಿದ್ವಾನ್ ಮಧುಕರಂ ಪ್ರಶಾಂತ್ ಅಯ್ಯಂಗಾರ್ ಅವರ ವೀಣಾ ಮಾಧುರ್ಯ ನೆರೆದಿದ್ದವರ ಮನ ಸೆಳೆಯಿತು. ಹತ್ತಾರು ಕರ್ನಾಟಕ ಶಾಸ್ತ್ರೀಯ ಸಂಗೀತದ ಹಾಡುಗಳನ್ನು ನುಡಿಸುವ ಮೂಲಕ ಅಪಾರ ಮೆಚ್ಚುಗೆಗೆ ಪಾತ್ರರಾದರು. ಮೃದಂಗ ವಾದನದಲ್ಲಿ ವಿದ್ವಾನ್ ರಾಧೇಶ್, ಘಟಂನಲ್ಲಿ ವಿದ್ವಾನ್ ಚಿಲ್ಕುಂದ ರಮೇಶ್ ಉತ್ತಮ ಸಹಕಾರ ನೀಡಿದರು. ಬ್ರಹ್ಮವಿದ್ಯಾ ಮೈಸೂರು ಟ್ರಸ್ಟಿ ರಾ.ಸ.ನಂದಕುಮಾರ್, ವಿದುಷಿ ಡಾ.ನಾಗಮಣಿ ಶ್ರೀನಾಥ್, ವಿದುಷಿ ವಸಂತಮಾಧವಿ, ಡಾ. ರಾಧಿಕಾ ನಂದಕುಮಾರ್, ಕೃಷ್ಣಕುಮಾರ್, ಮೋಹನ್ ದೇಶ್‌ರಾಜ್ ಅರಸ್ ಮತ್ತಿತರರಿದ್ದರು.

ಕಲುಷಿತ ನೀರು ಸೇವನೆಯಿಂದ ಮೃತರ ಸಂಖ್ಯೆ 3ಕ್ಕೆ ಏರಿಕೆ

ಕೊಪ್ಪಳ: ಕೊಪ್ಪಳ ಜಿಲ್ಲೆಯಲ್ಲಿ ಕಲುಷಿತ ನೀರು ಕುಡಿದ 10 ವರ್ಷದ ಬಾಲಕಿಯೊಬ್ಬಳು ಮೃತಪಟ್ಟಿದ್ದಾಳೆ. ಜಿಲ್ಲೆಯ ಕುಷ್ಟಗಿ ತಾಲೂಕಿನ ಬಿಜಕಲ್ ಗ್ರಾಮದಲ್ಲಿ ವಾಂತಿ ಭೇದಿಗೆ ತುತ್ತಾಗಿದ್ದ ಬಾಲಕಿ ನಿರ್ಮಲಾ ಈರಪ್ಪ ಗುರುವಾರ ಸಾವನ್ನಪ್ಪಿದ್ದಾಳೆ. ಇದರೊಂದಿಗೆ ಜಿಲ್ಲೆಯಲ್ಲಿ ಕಲುಷಿತ ನೀರು ಸೇವನೆಯಿಂದ ಮೃತಪಟ್ಟರ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ. ಬುಧವಾರ ಸಂಜೆ ತೀವ್ರ ವಾಂತಿ ಮತ್ತು ಭೇದಿಯ ಲಕ್ಷಣ ಕಾಣಿಸಿಕೊಂಡು, ಚಿಂತಾಜನಕ ಪರಿಸ್ಥಿತಿಯಲ್ಲಿದ್ದ ಬಾಲಕಿಯನ್ನು ಗುರುವಾರ ಬೆಳಿಗ್ಗೆ ಆಸ್ಪತ್ರೆಗೆ ಕರೆದೊಯ್ಯಲಾಯಿತು, ಅಲ್ಲಿ ಆಕೆ ಸಾವನ್ನಪ್ಪಿದ್ದಾಳೆ. ಇದುವರೆಗೆ ಕಲುಷಿತ ನೀರು ಸೇವನೆಯಿಂದ 40ಕ್ಕೂ ಹೆಚ್ಚು ಮಂದಿ ಅಸ್ವಸ್ಥಗೊಂಡಿದ್ದು, ಜಿಲ್ಲಾಡಳಿತದ ನಿರ್ಲಕ್ಷ್ಯಕ್ಕೆ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಾರ್ವಜನಿಕ ಹರಾಜು ಪ್ರಕಟಣೆ

ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಸಿ.ಜೆ.ಎಂ ನ್ಯಾಯಾಲಯದ ದಿನಾಂಕ: 12–04–2023ರ ಆದೇಶ ಮೇರೆಗೆ ಮೈಸೂರು ಅಸಲು ದಾವಾ ಸಂಖ್ಯೆ: 1085/2012 ತೀರ್ಪು ದಿನಾಂಕ: 11–08–2015ರ ಪ್ರಕಾರ ನಡೆಸುವ ಸಾರ್ವಜನಿಕ ಹರಾಜು ಪ್ರಕಟಣೆ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಬೊಮ್ಮನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.136/1ರಲ್ಲಿರುವ ವಿಸ್ತೀರ್ಣ 1 ಎಕರೆ 26 ಗುಂಟೆ ಜಮೀನಿಗೆ ಚೆಕ್ಕುಬಂದಿ : ಪೂರ್ವಕ್ಕೆ ಸಿದ್ದೇಗೌಡರವರ ಜಮೀನು, ಪಶ್ಚಿಮಕ್ಕೆ: ಚಿಕ್ಕಹೈದಯ್ಯರವರ ಜಮೀನು ಉತ್ತರಕ್ಕೆ : ತಿಂಕನಹಳ್ಳಿ ಕೂಸಪ್ಪರವರ ಜಮೀನು ದಕ್ಷಿಣಕ್ಕೆ ಜವರೇಗೌಡರವರ ಜಮೀನು ಈ ಮೇಲ್ಕಂಡ ಜಮೀನನ್ನು ಬಹಿರಂಗ ಹರಾಜು ಮಾಡಿ, ರೂ.9,07,315/–ಗಳನ್ನು ವಸೂಲು ಮಾಡುವಂತೆ ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಸಿ.ಜೆ.ಎಂ ನ್ಯಾಯಾಲಯವು ಎಂ.ಡಿ.ಕುಮಾರ್, ವಕೀಲರು ನಂ. 629, ವಿಜಯನಗರ, 4ನೇ ಹಂತ, 2ನೇ ಫೇಸ್, ಮೈಸೂರುರವರನ್ನು ನ್ಯಾಯಾಲಯದ ಆಯುಕ್ತರನ್ನಾಗಿ (ಕೋರ್ಟ್ ಕಮೀಷನರ್ ಆಗಿ) ಮೇಲ್ಕಂಡ ಪ್ರಕರಣದಲ್ಲಿನ ಎಫ್.ಡಿ.ಪಿ. ಸಂಖ್ಯೆ : 27/2016ರಲ್ಲಿ ನೇಮಕ ಮಾಡಿದ್ದು, ಅದರಂತೆ ದಿನಾಂಕ: 24–06–2023ರ ಶನಿವಾರ ಬೆಳಿಗ್ಗೆ 11.30 ಗಂಟೆ ಸಮಯಕ್ಕೆ ಬೊಮ್ಮನಹಳ್ಳಿ ಗ್ರಾಮದ ಮೇಲ್ಕಂಡ ಸ್ವತ್ತಿನ ಬಳಿ ಬಹಿರಂಗವಾಗಿ ಹರಾಜು ನಡವಳಿಕೆ ಪ್ರಕ್ರಿಯೆಯನ್ನು ಮಾಡಲಾಗುವುದು, ಕನಿಷ್ಠ ಬಿಡ್‌ನ ಹರಾಜು ಹಣದ ಮೊತ್ತ ರೂ.9,07,315/–ಗಳಂತೆ ಹರಾಜು ಮಾಡಲಾಗುವುದು. ಅದಕ್ಕೆ ಸಂಬಂಧಿಸಿದಂತೆ ಯಾರಿಗಾದರೂ ಆಕ್ಷೇಪಣೆಗಳಿದ್ದವರು ದಿನಾಂಕ23–06–2023ರ ಸಾಯಂಕಾಲ 5.30ರ ಒಳಗೆ ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಸಿ.ಜೆ.ಎಂ. ನ್ಯಾಯಾಲಯದಲ್ಲಿ ನಿಗದಿ ಮೇಲ್ಕಂಡ ಹಣದ ಪೈಕಿ ಶೇಕಡ 25% ರಷ್ಟು ಹಣವನ್ನು ಕಟ್ಟಿ ತಮ್ಮ ಆಧಾರ ಕಾರ್ಡ್ ಪ್ರತಿಯೊಂದಿಗೆ ಬಿಡ್‌ನಲ್ಲಿ ಭಾಗವಹಿಸಲು ಕೋರಲಾಗಿದೆ ಹಾಗೂ ಕುಟುಂಬದವರು ಸದರಿ ಬಿಡ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ ಹಾಗೂ ಷರತ್ತುಗಳು ಅನ್ವಯಿಸುತ್ತವೆ ಹಾಗೂ ನ್ಯಾಯಾಲಯದ ಆಯುಕ್ತರ ಅಂತಿಮ ತೀರ್ಮಾನವೇ ಅಂತಿಮವಾಗಿರುತ್ತದೆ ಎಂದು ಈ ಮೂಲಕ ತಿಳಿಯಪಡಿಸುತ್ತೇನೆ.

ಸಹಿ/– ಎಂ.ಡಿ.ಕುಮಾರ್, ನ್ಯಾಯಾಲಯದ ಆಯುಕ್ತರು ಹಾಗೂ ವಕೀಲರು, KAR/272/93, ನಂ.2776, ಚೌಡೇಶ್ವರಿ ಕಾಂಪ್ಲೆಕ್ಸ್, 1ನೇ ಮಹಡಿ, ಡೈಸ್ಟೆ ಗೇಟ್ ರಸ್ತೆ, ಕೆ.ಜಿ.ಕೊಪ್ಪಲ್, ಮೈಸೂರು. ಮೊ: 9880415496

ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಸಿ.ಜೆ.ಎಂ.ನ್ಯಾಯಾಲಯದ ದಿನಾಂಕ: 12–04–2023ರ ಆದೇಶ ಮೇರೆಗೆ

ಮೈಸೂರು ಮಿತ್ರ – ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು